ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೧ ಮಾರ್ಚ್ - ೨೦೧೧ ಸಂಚಿಕೆ - ೮



ಉಪ್ಪಿಗಿಂತ ರುಚಿಯಿಲ್ಲ !
ಸರ್ಕಾರದ ನೀತಿ ಸರಿಯಿಲ್ಲ !!
ಪೊಳ್ಳು ಪ್ರಜಾತಂತ್ರದ ವಿರುದ್ಧ
ಕ್ರಾಂತಿ ನಡೆಸದೆ ವಿಧಿಯಿಲ್ಲ !!!

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮಾರ್ಚ್ - ೨೦೧೧
ಸಂಪುಟ - ೧೧
ಸಂಚಿಕೆ - ೮

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ರಾಷ್ಟ್ರಪಿತಾಮಹ

(ಉಪ್ಪಿನ ಸತ್ಯಾಗ್ರಹವನ್ನು ನೆನೆದು - ಸಂ)

ಈತನಭಿನವಬುದ್ಧನೀತಕಾರಣಪುರುಷ,
ಸೋತು ಗೆಲುವ ವಿದಗ್ಧ ಸಂಪ್ರಬುದ್ಧ;
ಭೀತರನು ಕಾವ ನಿರ್ಭೀತಾತ್ಮನೀತ ನವ-
ನೀತ ಕೋಮಲ ಹೃದಯ, ನವ್ಯ ಸಿದ್ಧ !

ಸ್ವಾತಂತ್ರ್ಯಪರಮಪಂಡಿತ, ಸರ್ವಧರ್ಮಸಹ-
ನಾ ತತ್ವಮಂಡಿತ, ವದಾನ್ಯವರ್ಯ;
ಭೂತಭೌತಿಕ ಕಾರ್ಯಕಾರಣ ಕಲಾವೇತ್ತ,
ನೂತನವಿಭೂತಿ, ನರಲೋಕದಾರ್ಯ!

ಭಾರತದ ಭಾಗ್ಯಚಕ್ರವ ತಿರುಗಿಸಿದ ತಂತ್ರ-
ಸಾರ, ಸರ್ವೋದ್ಧಾರ, ಸತ್ಯಪೂರ;
ದೂರದರ್ಶನ, ಮುಗ್ಧಹಾಸ, ಮೋಹನದಾಸ,
ಆರು ಹಗೆಗಳ ಗೆದ್ದ ಶಾಂತವೀರ!

ಹಿಡಿದು ಸತ್ಯಾಹಿಂಸೆಯಸ್ತ್ರಗಳ ದುರ್ಮನರ
ಕೆಡೆದ ಕದನಕಪಾಲಿ, ಕರ್ಮಯೋಗಿ;
ನುಡಿದಂತೆ ನಡೆವ ನವದೇವಮಾನವ, ನಮ್ಮ
ಜಡೆಯಿರದ ತವಸಿ, ದಿವ್ಯಾನುರಾಗಿ!

ಈತ ಯುಗಪುರುಷನೆಂದೆನಿಸಿ ಬಾಳಿದ ದೇವ.
ಗೀತ ಯಶನಾಗಿ ಭಾರತವಿಧಾತ;
ನೀತಿನಭದುತ್ತ್ರಭದಿವಾಕರ, ನವೀನಮನು.
ವೀತ ಪಾವನಚರಿತ ಶಾಂತಿದೂತ!

- ಬ.ಹೆ. ಶ್ರೀಧರ

ಭಾರತದ ಮೇಲೆ ಬ್ರಹ್ಮಪುತ್ರಾಸ್ತ್ರ ಬಳಕೆಗೆ ಚೀನಾ ಸಿದ್ಧತೆ

ಬ್ರಹ್ಮಪುತ್ರ ನದಿಯನ್ನು ತಿರುಗಿಸುವ ಮೂಲಕ ಪ್ರಪಂಚದಲ್ಲೇ ಅತಿ ದೊಡ್ಡ ಅಣೆಕಟ್ಟನ್ನು ನಿರ್ಮಿಸಲು ಚೀನಾ ಸಿದ್ಧತೆ ಮಾಡಿಕೊಳ್ಳುತ್ತಿರುವುದಕ್ಕೆ ಮತ್ತೊಂದು ಪುರಾವೆ ಸಿಕ್ಕಿದೆ. ಟಿಬೆಟ್ ಹಾಗೂ ಈಶಾನ್ಯ ಭಾರತಕ್ಕೆ ಹೊಂದಿಕೊಂಡಿರುವ ಬ್ರಹ್ಮಪುತ್ರ ನದಿಯ ಮಹಾ ತಿರುವು ಪ್ರದೇಶದಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ಚೀನ ಸಮರೋಪಾದಿಯಲ್ಲಿ ಅಣಿಯಾಗುತ್ತಿದೆ. ಈ ಅಣೆಕಟ್ಟೆಯಲ್ಲಿ ಭಾರಿ ಪ್ರಮಾಣದ ನೀರನ್ನು ಸಂಗ್ರಹಿಸುವ ಉದ್ದೇಶವನ್ನು ಹೊಂದಿದೆ. ಅಲ್ಲಿನ ಸರಕಾರಿ ವೆಬ್‌ಸೈಟ್ ಹೈಡ್ರೋ-ಚೀನಾ ಪ್ರಕಾರ, ೩೮ ಸಾವಿರ ಮೆಗಾವ್ಯಾಟ್ ವಿದ್ಯುತ್ ಅನ್ನು ಇಲ್ಲಿ ಉತ್ಪಾದಿಸಬಹುದಾಗಿದೆ. ಅಂದರೆ, ಭಾರತ ತನ್ನೆಲ್ಲಾ ಮೂಲಗಳಿಂದ ಉತ್ಪಾದಿಸುವ ವಿದ್ಯುತ್‌ನ ಶೇ. ೨೫ ರಷ್ಟು ವಿದ್ಯುತ್ ಉತ್ಪಾದಿಸಬಹುದಾಗಿದೆ.

ಚೀನಾ-ಭಾರತ ರಕ್ಷಣಾ ವಿಚಾರದಲ್ಲಿ ನೀರು ಬಹುಮುಖ್ಯವಾದ ವಿಷಯವಾಗಿದೆ. ಅಲ್ಲದೆ ಮನಸ್ತಾಪವನ್ನು ಹೆಚ್ಚಿಸುವಲ್ಲಿಯೂ ಈ ವಿಷಯವು ಸಮರ್ಥ ಮೂಲವಾಗಿದೆ. ನೀರೊತ್ತಡದ ಆರ್ಥಿಕ ಸ್ಥಿತಿಯನ್ನು ಚೀನಾ ಮತ್ತು ಭಾರತ ಈಗಾಗಲೇ ಎದುರಿಸುತ್ತಿವೆ. ಕೃಷಿ ಮತ್ತು ಕೈಗಾರಿಕೆಗಳಿಗೆ ಹೆಚ್ಚಿನ ನೀರು ಪೂರೈಕೆ, ಹೆಚ್ಚುತ್ತಿರುವ ಮಧ್ಯಮ ವರ್ಗದ ಜನರ ಬೇಡಿಕೆಗಳಿಂದಾಗಿ ಇನ್ನೂ ಹೆಚ್ಚಿನ ನೀರಿಗಾಗಿ ಹೋರಾಟ ಮಾಡುವಂತಾಗಿದೆ. ಎರಡೂ ದೇಶಗಳು ನೀರಿನ ಶಾಶ್ವತ ಕೊರತೆ ಎದುರಿಸುವ ಯುಗಕ್ಕೆ ಕಾಲಿರಿಸುತ್ತಿವೆ.

ಈಗಾಗಲೇ ನೀರಿನ ತೀವ್ರ ಕೊರತೆ ಇದೆ. ಒಂದು ವೇಳೆ ನೀರಿನ ಬೇಡಿಕೆ ಈಗಿರುವಂತೆ ಹತೋಟಿ ಮೀರಿ ಬೆಳೆದಲ್ಲಿ ಕ್ಷಿಪ್ರ ಆರ್ಥಿಕ ಬೆಳವಣಿಗೆ ಕುಂಠಿತಗೊಳ್ಳುವ ಸಾಧ್ಯತೆ ಇದೆ. ಈ ಎರಡೂ ದೇಶಗಳು ಸಾಕಷ್ಟು ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಹೊಂದಿವೆ. ಆದರೂ ಕೂಡ ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳುವಂತಾಗಿದೆ. ಈ ಬೆಳವಣಿಗೆ ಜಾಗತಿಕ ಆಹಾರ ಸಂಕಷ್ಟ ಸ್ಥಿತಿಯನ್ನು ಒತ್ತಿ ಹೇಳುತ್ತದೆ. ಭಾರತ ೧೬೦.೫ ದಶಲಕ್ಷ ಹೆಕ್ಟೇರ್ ಕೃಷಿ ಯೋಗ್ಯ ಭೂಮಿಯನ್ನು ಹೊಂದಿದೆ. ಚೀನಾ ೧೩೭.೧ ದಶಲಕ್ಷ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಚೀನಾದೊಂದಿಗೆ ಇದನ್ನು ಹೋಲಿಸಿ ನೋಡಿದಾಗ ಭಾರತ ಹೆಚ್ಚು ಕೃಷಿ ಯೋಗ್ಯ ಭೂಮಿಯನ್ನು ಹೊಂದಿದೆ. ಭಾರತದ ಪ್ರಮುಖ ನದಿಗಳ ಮೂಲ ಇರುವುದು ಚೀನಾ ನಿಯಂತ್ರಣದಲ್ಲಿರುವ ಟಿಬೆಟ್‌ನಲ್ಲಿ. ಟಿಬೆಟ್ ಪ್ರಸ್ಥಭೂಮಿಯಲ್ಲಿರುವ ಹೇರಳವಾದ ಹಿಮನದಿಗಳು, ವ್ಯಾಪಕವಾದ ಅಂತರ್ಜಲ ಚಿಲುಮೆಗಳು ಮತ್ತು ಅತಿ ಎತ್ತರ ಪ್ರದೇಶದಲ್ಲಿ ಟಿಬೆಟ್ ಇರುವುದರಿಂದ ಅದು ಜಗತ್ತಿನ ಅತಿ ದೊಡ್ಡ ಶುದ್ಧಜಲ

ಭೂಮಿಯಾಗಿದೆ. ಗಂಗಾ ನದಿಯನ್ನು ಹೊರತುಪಡಿಸಿ, ಏಷ್ಯದ ಪ್ರಮುಖ ನದಿಗಳು ಉಗಮವಾಗುವುದು ಚೀನಾ ಹಿಡಿತದಲ್ಲಿರುವ ಟಿಬೆಟ್ ಪ್ರಸ್ಥಭೂಮಿಯಲ್ಲಿಯೇ. ಗಂಗೆಯ ಉಪನದಿಗಳು ಉಗಮವಾಗುವುದು ಟಿಬೆಟ್‌ನಲ್ಲೇ.

ಚೀನಾ ಮಾತ್ರ ಪ್ರಮುಖ ಅಂತರ್ ಜಲಾನಯನ ಭೂಮಿ ಮತ್ತು ಅಂತರ್ ನದಿ ವರ್ಗಾವಣೆ ಯೋಜನೆಗಳನ್ನು ಟಿಬೆಟ್ ಪ್ರಸ್ಥಭೂಮಿಯಲ್ಲಿ ಕೈಗೊಳ್ಳಲು ಮುಂದಾಗುತ್ತಿದೆ. ಇದರಿಂದ ಅಂತಾರಾಷ್ಟ್ರೀಯ ನದಿಗಳು ಭಾರತ ಮತ್ತು ಇನ್ನಿತರ ನದಿ ಪಾತ್ರದ ದೇಶಗಳಿಗೆ ಹರಿದು ಬರುವುದನ್ನು ಕುಗ್ಗಿಸಿದಂತಾಗುತ್ತದೆ. ಉಳಿದೆಲ್ಲ ದೇಶಗಳಿಗಿಂತಲೂ ಹೆಚ್ಚಾಗಿ ಭಾರತವನ್ನು ಹೆದರಿಸುವುದಕ್ಕಾಗಿಯೇ ಟಿಬೆಟ್‌ನಲ್ಲಿ ಹೈಡ್ರೋ-ಎಂಜಿನಿಯರಿಂಗ್ ಯೋಜನೆಗಳನ್ನು ಚೀನಾ ಕೈಗೆತ್ತಿಕೊಳ್ಳುತ್ತಿದೆ. ಬ್ರಹ್ಮಪುತ್ರ ನದಿ ನೀರು ತಿರುಗಿಸುವುದರಿಂದ ಹೆಚ್ಚು ಸಂಕಷ್ಟಕ್ಕೆ ಒಳಗಾಗುವುದು ಬಾಂಗ್ಲಾದೇಶ.

ಬ್ರಹ್ಮಪುತ್ರ ನದಿ ಬಾಂಗ್ಲಾದೇಶದ ಅತ್ಯಂತ ಪ್ರಮುಖ ನದಿ. ಬ್ರಹ್ಮಪುತ್ರ ನದಿಯನ್ನು ಚೀನಾ ತಿರುಗಿಸುವುದೆಂದರೆ ಬಾಂಗ್ಲಾದೇಶದ ಬಹುತೇಕ ಪ್ರದೇಶಗಳಲ್ಲಿನ ಪರಿಸರ ನಾಶವೆಂದೇ ಅರ್ಥ. ವಾಸ್ತವದ ಸಂಗತಿ ಏನೆಂದರೆ ಮೆಕಾಂಗ್, ಸಾಲ್ವಿನ್, ಬ್ರಹ್ಮಪುತ್ರ ಮತ್ತು ಇರ್ಟಿಶ್‌ಇಲ್ಯಿ ನದಿಗಳ ಪ್ರಮುಖ ಅಣೆಕಟ್ಟೆಗಳಲ್ಲಿ ಪ್ರತ್ಯೇಕ ಜಲಪಾತಕ್ಕೆ ಚೀನಾ ಸದ್ಯಕ್ಕೆ ಮುಂದಾಗುತ್ತಿದೆ. ಆ ಮೂಲಕ ತನ್ನ ನದಿ ಪಾತ್ರದ ನೆರೆ ರಾಷ್ಟ್ರಗಳಾದ ಕಜಕಿಸ್ತಾನದಿಂದ ಮೊದಲುಗೊಂಡು ರಷ್ಯಾ ಮತ್ತು ಭಾರತ, ಇಂಡೋಚೀನ ಪರ್ಯಾಯ ದ್ವೀಪ ರಾಷ್ಟ್ರಗಳ ಜತೆ ನೀರಿನ ವಿವಾದ ಹುಟ್ಟು ಹಾಕುತ್ತಿದೆ.

– ಬ್ರಹ್ಮ ಚೆಲ್ಲಾನಿ

* * *

ಸಂತಾಪ

ಕರ್ನಾಟಕದ ಅಪರೂಪದ ವಿಶಿಷ್ಟ ಮತ್ತು ಗೌರವಾನ್ವಿತ ರಾಜಕಾರಣಿಯಾಗಿದ್ದ ಎಂ.ಪಿ ಪ್ರಕಾಶ್‌ರವರು ಕಳೆದ ಫೆಬ್ರವರಿ ೯ರಂದು ತಮ್ಮ ೭೧ನೇ ವಯಸ್ಸಿನಲ್ಲಿ ದೈವಧೀನರಾದರು. ಇವರು ರಾಜಕಾರಣಿ ಅಷ್ಟೇ ಅಲ್ಲ, ಸಾಹಿತಿ, ನಾಟಕ, ನಿರ್ದೇಶಕ, ಅನುವಾದಕ, ವಾಗ್ಮಿ, ಸಜ್ಜನ ಇತ್ಯಾದಿ ಅವರ ಆಸಕ್ತಿ ಅಭಿರುಚಿಗಳಾಗಿದ್ದವು. ಇವರ ನಿಧನಕ್ಕೆ ಜನಪದ ವಿಚಾರ ತನ್ನ ಸಂತಾಪವನ್ನು ಸೂಚಿಸುತ್ತದೆ.

ಉಪ್ಪಿಗಿಂತ ರುಚಿಯಿಲ್ಲ! ಸರ್ಕಾರದ ನೀತಿ ಸರಿಯಿಲ್ಲ! ಪೊಳ್ಳು ಪ್ರಜಾತಂತ್ರದ ವಿರುದ್ಧ ಕ್ರಾಂತಿ ನಡೆಸದೆ ವಿಧಿಯಿಲ್ಲ!!!

– ಸುರೇಂದ್ರ ಕೌಲಗಿ

ಈಗ ಇತಿಹಾಸ ಮರುಕಳಿಸಬೇಕಿದೆ. ೧೯೩೦ ಮಾರ್ಚ್ ೧೨, ಮಹಾತ್ಮಾ ಗಾಂಧೀ ಉಪ್ಪಿನ ಸತ್ಯಾಗ್ರಹ ನಡೆಸಿ ಅಂದಿನ ಇಂಗ್ಲಿಷ್ ಸರ್ಕಾರದ ತಪ್ಪು ನೀತಿಗಳ ವಿರುದ್ಧ ಅಹಿಂಸಾತ್ಮಕ ಬಂಡಾಯದ ಬಾವುಟ ಹಾರಿಸಿದ್ದರು. ಅಂದಿನ ವೈಸ್‌ರಾಯ್ ಇರ್ವಿನ್ ಪ್ರತಿದಿನ ೭೦೦ ರುಪಾಯಿಗಳನ್ನು ಪಡೆಯುತ್ತಿದ್ದ. ಆದರೆ ಭಾರತೀಯನ ಅಂದಿನ ಒಂದು ದಿನದ ಸರಾಸರಿ ಆದಾಯ ಕೇವಲ ಎರಡು ಆಣೆ ಇತ್ತು! ಅಂದರೆ ವೈಸ್‌ರಾಯ್ ಭಾರತದ ಸರಾಸರಿ ಆದಾಯಕ್ಕಿಂತ ಐದು ಸಾವಿರ ಪಟ್ಟು ಹೆಚ್ಚು ಪಡೆಯುತ್ತಿದ್ದ. ಇಂಗ್ಲೆಂಡಿನ ಪ್ರಧಾನಮಂತ್ರಿಯ ವೇತನ ಅಲ್ಲಿಯ ಆದಾಯಕ್ಕಿಂತ ೯೦ರಷ್ಟು ಇತ್ತು. ಆದ್ದರಿಂದ ಗಾಂಧೀ ಮಂಡಿಯೂರಿ ಇರ್ವಿನ್‌ಗೆ ಈ ದೊಡ್ಡ ತಾರತಮ್ಯ ಪದ್ಧತಿಯ ಬಗ್ಗೆ ಆಲೋಚಿಸಲು ಹೇಳಿದರು. ಅಲ್ಲದೆ, ಇಂಥ ತಾರತಮ್ಯಕ್ಕೆ ಅವಕಾಶ ಮಾಡಿಕೊಡುವ ಪದ್ಧತಿಯನ್ನು ಸಾರಾಸಗಟಾಗಿ ಹೊಸಕಿ ಹಾಕಬೇಕು ಎಂದೂ ಹೇಳಿದರು. ಇಂಗ್ಲಿಷ್ ಸರ್ಕಾರದ ಸಂಘಟಿತ ಹಿಂಸೆಯನ್ನು ಅಹಿಂಸೆ ಮಾತ್ರ ತಡೆಯಬಲ್ಲದೆಂದು ಸಾರಿದರು. ಅದಕ್ಕಾಗಿ ಇದುವರೆಗೆ ಅಂದರೆ ಸುಮಾರು ೩೧ ವರ್ಷಗಳಿಂದ ಅವರ ಜೀವನದಲ್ಲಿ ಘನೀಭೂತವಾಗಿ ಕುಳಿತಿದ್ದ ಅಹಿಂಸಾ ಕುರಿತ ವಿಚಾರವನ್ನು ಪ್ರತ್ಯಕ್ಷ ಕಾರ್ಯರೂಪಕ್ಕೆ ಇಳಿಸಲು ಸನ್ನದ್ಧರಾದರು. ಅತ್ಯಂತ ಬಡ ಭಾರತೀಯನೂ ಕೊಡಬೇಕಾಗಿದ್ದ ಉಪ್ಪಿನ ಮೇಲಿನ ತೆರಿಗೆ ಕಾನೂನನ್ನು ಮುರಿಯುವುದರ ಮೂಲಕ ಬಲಾಢ್ಯವೆನಿಸಿಕೊಂಡಿದ್ದ ಇಂಗ್ಲಿಷ್ ಸಾಮ್ರಾಜ್ಯದ ವಿರುದ್ಧ ಜನತಾ ಆಂದೋಳನದ ಪಾಂಚಜನ್ಯ ಊದಿದರು. ಕೇವಲ ಎಪ್ಪತ್ತೆಂಟು ಆಶ್ರಮವಾಸಿಗಳೊಂದಿಗೆ ದಾಂಡಿಗೆ ನಡಿಗೆ ಯಾತ್ರೆ ಬೆಳೆಸಿದರು. ಇನ್ನೂರು ನಲ್ವತ್ತು ಮೈಲಿ ನಡೆಯಬೇಕಿತ್ತು. ಉರಿ ಬಿಸಿಲು. ಬರಿಗಾಲು. ಅರವತ್ತೊಂದು ವರ್ಷ ವಯಸ್ಸು. ಇಪ್ಪತ್ತನಾಲ್ಕು ದಿನಗಳ ನಡಿಗೆ. ದಾಂಡಿ ತಲುಪುವ ಹೊತ್ತಿಗೆ ಗಾಂಧೀಜಿಯವರೊಂದಿಗೆ ಸೇರಿದ ಜನ ಸಾವಿರಾರು. ಸಮುದ್ರ ತೀರಕ್ಕೆ ಹೋದರು. ಗಾಂಧೀ ಬಾಗಿ ಒಂದು ಹಿಡಿ ಉಪ್ಪನ್ನು ಎತ್ತಿಕೊಂಡು ಸರ್ಕಾರದ ಉಪ್ಪಿನ ಕಾನೂನನ್ನು ಮುರಿದರು. ಪಕ್ಕದಲ್ಲಿದ್ದ ಸರೋಜಿನಿ ನಾಯ್ಡು 'ಬಿಡುಗಡೆಯ ಹರಿಕಾರನಿಗೆ ಜೈ' ಎಂದು ಕೂಗಿದರು. ೧೯೩೦ ಮಾರ್ಚ್ ೧೨ರಿಂದ ಪ್ರಾರಂಭವಾದ ಸ್ವಾತಂತ್ರ್ಯ ಹೋರಾಟ ೧೯೪೮ರ ಜನವರಿ ಮೂವತ್ತರಂದು ಗುಂಡಿಗೆ ಆಹುತಿಯಾಗಿ ಗಾಂಧೀ ಭೂಮಿಗೆ ಬೀಳುವವರೆಗೆ ಹದಿನೆಂಟು ವರ್ಷಗಳ ಕಾಲ ಅಖಂಡವಾಗಿ ನಡೆಯಿತು. ಸ್ವಾತಂತ್ರ್ಯ

ಬಂದು ಇಂದಿಗೆ ಆರು ದಶಕಗಳಾದವು. ಅಂದು ಉಪ್ಪಿನ ಮೇಲಿನ ತೆರಿಗೆಯನ್ನು ಬಡರೈತ ಮೂಗಿಗೆ ಕವಡೆ ಕಟ್ಟಿ ಕೊಡಬೇಕಾಗಿತ್ತು. ಇಂದು ಅದೇ ಭಾರತೀಯ ಹೊಟ್ಟೆ ಕಟ್ಟಿ ತನ್ನ ತಲೆಯ ಮೇಲಿನ ನೂರಾರು ರುಪಾಯಿ ಸಾಲವನ್ನು ತೀರಿಸಬೇಕಿದೆ. ಉಪ್ಪಿನ ಮೆಲೆ ತೆರಿಗೆಯನ್ನು ಹಾಕುವಾಗ ಇಂಗ್ಲಿಷ್ ಸರ್ಕಾರ ಭಾರತೀಯರನ್ನು ಕೇಳಿರಲಿಲ್ಲ. ತನ್ನ ದುಬಾರಿ ಆಡಳಿತದ ಖರ್ಚಿನ ನಿರ್ವಹಣೆಗಾಗಿ ಭಾರತದ ಕಡು ಬಡವನೂ ಉಪ್ಪನ್ನು ಉಪಯೋಗಿಸುವುದಕ್ಕಿಂತ ಮೊದಲು ತನ್ನ ಒಂದು ವರ್ಷದ ಆದಾಯಕ್ಕೆ ಸಮಾನವಾದ ಮೊತ್ತವನ್ನು ಉಪ್ಪಿನ ಮೇಲಿನ ತೆರಿಗೆಗಾಗಿ ಕೊಡಬೇಕಾಗಿತ್ತು. ಇಂದು ಸರ್ಕಾರ ತಾನು ಕೈಗೊಂಡಿರುವ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಜನತೆಯ ಅಭಿಪ್ರಾಯವನ್ನು ಕೇಳಿಲ್ಲ. ಒಂದು ವೇಳೆ ಜನತಾ ಪ್ರತಿನಿಧಿಗಳೆಂದು ಕರೆಯಲ್ಪಡುವವರ ಅಭಿಪ್ರಾಯ ಕೇಳಿದ್ದರೆ ಆ ಅಭಿಪ್ರಾಯ ಅವರು ಪ್ರತಿನಿಧಿಸುವ ಜನತೆಯ ಹಿತಕ್ಕೇ ಮಾರಕವಾದುದಂಥಾಗಿದೆ. ಅಲ್ಲದೆ, ಆ ಪ್ರತಿನಿಧಿಗಳು ಭ್ರಷ್ಟರು, ಸುಳ್ಳರು, ಅಪರಾಧಿಗಳು, ನೈತಿಕವಾಗಿ ದಿವಾಳಿ ಎದ್ದವರು. ಅಂಥ ಪ್ರತಿನಿಧಿಗಳ ಅಭಿಪ್ರಾಯ ಕೇಳಿ ಅಭಿವೃದ್ಧಿಯ ನೀತಿಯನ್ನು ಜನತೆಯ ಮೇಲೆ ಹೇರಿರುವ ಸರ್ಕಾರಗಳ ಸಂಘಟಿತ ಹಿಂಸೆಯ ವಿರುದ್ಧ ಜನತೆ ಸಂಘಟಿತ ಅಹಿಂಸಾತ್ಮಕ ಹೋರಾಟ ನಡೆಸಬೇಕಿದೆ. ೧೯೩೦ರ ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದಂಥ ಜನತಾ ಆಂದೋಲನವನ್ನು ನಡೆಸಬೇಕಿದೆ; ಇತಿಹಾಸವನ್ನು ಪುನರ್ ಮರುಕಳಿಸಬೇಕಿದೆ.

ಸರ್ಕಾರಗಳು ಜಪಿಸುತ್ತಿರುವ ಅಭಿವೃದ್ಧಿಯೆಂಬ ಮಂತ್ರ ದೇಶದ ಹಿತಕ್ಕೆ ವಿರುದ್ಧವಾದ ಪರಿಣಾಮ ಬೀರುತ್ತಿದೆ; ತಿರುಮಂತ್ರವಾಗುತ್ತಿದೆ. ಆಹಾರ ಧಾನ್ಯಗಳ ಬೆಲೆ ಏರುತ್ತಿದೆ; ಜೀವನದ ಪ್ರತಿಯೊಂದು ವ್ಯಾಪಾರವೂ ದುಬಾರಿಯಾಗುತ್ತಿದೆ. ಜನತೆಯ ನಿಃಸಹಾಯಕತೆಯ ಲಾಭವನ್ನು ಪಡೆದು ರಾಜಕೀಯ ಪಕ್ಷಗಳು ಸ್ವೇಚ್ಛೆಯಿಂದ ವರ್ತಿಸುತ್ತಿವೆ; ಜನತಾ ಪ್ರತಿನಿಧಿಗಳು ನಿರಂಕುಶಮತಿಗಳಾಗಿದ್ದಾರೆ; ಅಧಿಕಾರಿಗಳು ಭ್ರಷ್ಟರಾಗಿ ಜನತೆಯ ಶೋಷಣೆ ಮಾಡುತ್ತಿದ್ದಾರೆ. ಇದೆಲ್ಲದರ ಪರಿಣಾಮವಾಗಿ ದೇಶದಲ್ಲಿ 'ಪ್ರಜಾಪ್ರಭುತ್ವ ಮುಖವಾಡದ ಪರೋಕ್ಷ ಸರ್ವಾಧಿಕಾರವೇ' ದೇಶದಲ್ಲಿ ನಡೆಯುತ್ತಿದೆ. ಇತ್ತೀಚಿಗೆ ಮಂಡಿತವಾದ ರಾಜ್ಯದ ಕೃಷಿ ಬಜೆಟ್ ರಾಜ್ಯದ ಲಕ್ಷಾವಧಿ ರೈತರನ್ನು ಸಾಲದ ಸುಳಿಯಲ್ಲಿ ಸಿಕ್ಕಿಸಿದೆ. ಸೈದ್ಧಾಂತಿಕವಾಗಿ 'ಕೃಷಿ ಬಜೆಟ್' ಎಂಬ ವಿಚಾರ ರೋಮಾಂಚಕಾರಿಯಾಗಿದೆ. ವಸ್ತುತಃ ಅದು ಸಿಹಿಲೇಪನದ ವಿಷ ಮಾತ್ರೆಯಾಗಿದೆ. ಗ್ರಾಮೀಣ ಜನರ ಅಭಿವೃದ್ಧಿಯ ಹೆಸರಿನಲ್ಲಿ ಮಂಡಿತವಾದ ಕೃಷಿ ಬಜೆಟ್ ಮೂಲತಃ ಗ್ರಾಮಗಳ ಅಸ್ತಿತ್ವವನ್ನೇ ಮರೆತಿದೆ! ಗ್ರಾಮಗಳನ್ನು ಬೆಳೆಯುತ್ತಿರುವ ನಗರಗಳೆಂಬ ಬಕಾಸುರನ ಹೊಟ್ಟೆಗೆ ಆಹಾರ ಮಾಡಿಕೊಟ್ಟ ಸರ್ಕಾರ ಇಂದು ಕೃಷಿ ಬಜೆಟ್ ಎಂಬ ಮಾತನ್ನು ಹೇಳಿ ಜನತೆಯನ್ನು ಮೋಡಿಗೆ ಒಳಪಡಿಸಿ ಅವರ ವಿಚಾರಶಕ್ತಿಯನ್ನೂ, ಅವರ ಕ್ರಿಯಾಶಕ್ತಿಯನ್ನೂ, ಅವರ ಸಂಘಟನಾ ಶಕ್ತಿಯನ್ನೂ ಅಪಹರಿಸಿದೆ. ಜೊತೆಗೆ ಅಭಿವೃದ್ಧಿಯ ನೆಪದಲ್ಲಿ ಗ್ರಾಮ ಪಂಚಾಯ್ತಿಗಳಿಗೆ ಹಣದ ಹೊಣೆಯನ್ನು ಹರಿಸಿ ಆ ಪಂಚಾಯ್ತಿಗಳು ಜನತೆಯ ಪುರುಷಾರ್ಥದ ಕೇಂದ್ರಗಳಾಗುವುದರ ಬದಲು ಸರ್ಕಾರಗಳಿಗೆ 'ಜೀ ಹುಝೂರ್' ಎನ್ನುವ ಏಜೆಂಟ್‌ಗಳಾಗಿವೆ. ಸರ್ಕಾರಗಳ ರಾಜಕೀಯ ನೀತಿಯ ಪಿಟೀಲಿನ ಸ್ವರಕ್ಕೆ ತಕ್ಕಂತೆ ಕುಣಿಯುವ ಸಂಸ್ಥೆಗಳಾಗಿವೆ. ಇಲ್ಲಿಯ ವಿಪರ್ಯಾಸವೇನೆಂದರೆ ಗ್ರಾಮ ಜೀವನದ ಎಲ್ಲ ಗುಣಲಕ್ಷಣಗಳನ್ನು ನಾಶಮಾಡಿ ಗ್ರಾಮವೆಂಬ ಕೃತಕ ಬಿದಿರು ಬೊಂಬೆಗಳನ್ನೇ ಗ್ರಾಮ ಪಂಚಾಯ್ತಿಯೆಂದು ಕರೆಯಲಾಗುತ್ತಿರುವುದು.

ಏಕಕಾಲಕ್ಕೆ ನಗರಗಳನ್ನೂ ಬೆಳೆಸುತ್ತಾ, ಗ್ರಾಮೀಣ ಅಭಿವೃದ್ಧಿಯೆಂದೂ ಹೇಳುತ್ತಾ ಇರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿ ಜನತೆಯನ್ನು ಮೋಸಮಾಡುವ, ವಂಚನೆ ಮಾಡುವ ನೀತಿಯಲ್ಲದೆ ಇನ್ನೇನು? ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳ ತರುವಾಯವೂ ಸರ್ಕಾರಗಳು ಗ್ರಾಮಗಳು ಮುಖ್ಯವೋ, ನಗರಗಳು ಮುಖ್ಯವೋ ಎಂಬುದನ್ನು ಖಚಿತವಾಗಿ ಜನತೆಗೆ ತಿಳಿಸದೆ ಮೋಸ ಮಾಡುತ್ತಿವೆ; ಜನತೆಯ ನೆಮ್ಮದಿಯನ್ನು ಹಾಳು ಮಾಡಿವೆ.

ನಮ್ಮ ಇಂದಿನ ಸರ್ಕಾರಗಳು ಏಕಕಾಲಕ್ಕೆ ದೇಶೀಯ ಸರ್ಕಾರಗಳಾಗುವುದರ ಜೊತೆಗೆ ವಿದೇಶಿ ಸರ್ಕಾರಗಳಾಗಿಯೂ ಕೆಲಸ ಮಾಡುತ್ತಿವೆ.

ಸ್ವಾತಂತ್ರ್ಯ ಚಳುವಳಿಯ ಕಾಲಕ್ಕೆ ನಮ್ಮ ದೇಶಕ್ಕೆ ಸ್ವರಾಜ್ಯ ಬರಬೇಕು ಮತ್ತು ಸ್ವದೇಶಿ ಸರ್ಕಾರಗಳ ರಚನೆಯಾಗಬೇಕೆಂಬ ಸದಿಚ್ಛೆ ಭಾರತೀಯರದಾಗಿತ್ತು. ಆದರೆ ಸ್ವಾತಂತ್ರ್ಯ ಬಂದ ಕೂಡಲೆ ನಮ್ಮ ದೇಶದಲ್ಲಿ ರಚಿತವಾದ ಸರ್ಕಾರಗಳು ಸ್ವದೇಶಿಯಾಗಿರದೆ ಕಾಯಾ, ವಾಚಾ, ಮನಸಾ ವಿದೇಶಿ ಸರ್ಕಾರಗಳಾಗಿಯೇ ಕೆಲಸ ಮಾಡಲು ಪ್ರಾರಂಭಿಸಿದವು. ಅವುಗಳ ಆಡಳಿತದ ರೀತಿ ಪಾಶ್ಚಿಮಾತ್ಯ ದೇಶಗಳಲ್ಲಿಯ ಸರ್ಕಾರಗಳ ಆಡಳಿತ ರೀತಿಯಂತೆಯೇ ಪ್ರಾರಂಭವಾಯಿತು; ಅವುಗಳ ಬಾಯಿಂದ ಬರುವ ಮಾತುಗಳೆಲ್ಲ ಪಾಶ್ಚಿಮಾತ್ಯ ದೇಶಗಳ ಸಂಸ್ಕೃತಿಯ ಮಾತುಗಳೇ ಆದವು; ಅವುಗಳ ಮನಸ್ಸು ಕೂಡ ಪಾಶ್ಚಿಮಾತ್ಯ ದೇಶಗಳಲ್ಲಿಯ ಸರ್ಕಾರಗಳ ಮನಸ್ಸಿನಂತೆಯೇ ಆಯಿತು. ತತ್ಪರಿಣಾಮವಾಗಿ ಸ್ವದೇಶಿ ಪೋಷಾಕಿನ ವಿದೇಶಿ ಸ್ವಭಾವದ ಸರ್ಕಾರಗಳು ಭಾರತವನ್ನು ಆಳಲಾರಂಭಿಸಿದವು. ಆದ್ದರಿಂದ ಭಾರತದಲ್ಲಿಯೂ ಕೊಳ್ಳುಬಾಕ ಸಂಸ್ಕೃತಿ ಆರ್ವಿಭವಿಸಿತು; ಅದರೊಂದಿಗೆ ಸೈನ್ಯ ಕಟ್ಟುವಿಕೆ, ಅಂತರಿಕ್ಷಯಾನ ಮುಂತಾದ ಅನಗತ್ಯ ಯೋಜನೆಗಳೇ ಬಹು ಅಗತ್ಯ ಯೋಜನೆಗಳೆಂದು ಅಂಗೀಕೃತಗೊಂಡವು. ಭಾರತೀಯ ಶಿಕ್ಷಣ ಪದ್ಧತಿಯ ಸ್ಥಳದಲ್ಲಿ ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿ ಸ್ಥಾಪಿತಗೊಂಡಿತು. ಪಾಶ್ಚಿಮಾತ್ಯ ದೇಶದಿಂದ ಬಿಡುಗಡೆ ಹೊಂದಿ ಎಲ್ಲ ವಿಚಾರದಲ್ಲಿಯೂ ಸ್ವದೇಶಿಯಾಗಿ ಉಳಿಯುತ್ತ ಜಗತ್ತಿನ ಬೇರೆ ದೇಶಗಳಿಗೆಲ್ಲ ಮಾದರಿಯಾಗಬೇಕಿದ್ದ ಭಾರತ ಪಾಶ್ಚಿಮಾತ್ಯ ದೇಶಗಳಿಂದ ಬಂದ ಸ್ವಾರ್ಥಪೂರ್ಣ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಎಂಬ ಅರ್ಥನೀತಿಗೆ ತನ್ನನ್ನು ಮಾರಿಕೊಂಡಿತು. ಆದ್ದರಿಂದ ಇಂದು ಭಾರತ ಎಲ್ಲ ಕ್ಷೇತ್ರಗಳಲ್ಲಿ – ಅದು ರಾಜಕಾರಣವಾಗಿರಬಹುದು, ಕೈಗಾರಿಕೆ ಆಗಿರಬಹುದು, ಶಿಕ್ಷಣ ಆಗಿರಬಹುದು, ರಕ್ಷಣಾಕ್ಷೇತ್ರ ಆಗಿರಬಹುದು, ಕ್ರೀಡಾಕ್ಷೇತ್ರ ಆಗಿರಬಹುದು, ಮನೋರಂಜನಾಕ್ಷೇತ್ರ ಆಗಿರಬಹುದು, ಕೃಷಿ ಕ್ಷೇತ್ರ ಆಗಿರಬಹುದು, ಮಾಧ್ಯಮ ಕ್ಷೇತ್ರವಾಗಿರಬಹುದು, ಆಡಳಿತ ಕ್ಷೇತ್ರವಾಗಿರಬಹುದು, ಅಭಿವೃದ್ಧಿ ಕ್ಷೇತ್ರವಾಗಿರಬಹುದು ಇತ್ಯಾದಿ ಎಲ್ಲ ಕ್ಷೇತ್ರಗಳೂ ವಿದೇಶಿ ಕ್ಷೇತ್ರಗಳಾಗಿ ವಿಜೃಂಭಿಸುತ್ತಿವೆ. ಭಾರತ ತನ್ನ ಅಸ್ಮಿತೆಯನ್ನು ಕಳೆದುಕೊಳ್ಳುತ್ತಿದೆ. ಪರೋಕ್ಷವಾಗಿ ಭಾರತದ ಆರ್ಥಿಕ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯದ ಅಪಹರಣವಾಗುತ್ತಿದೆ. ಈ ಅಪಹರಣ ಸ್ವದೇಶಿಯರಿಂದಲೂ ಆಗುತ್ತಿದೆ, ವಿದೇಶಿಯರಿಂದಲೂ ಆಗುತ್ತಿದೆ. ಸ್ವದೇಶಿ ಸರ್ಕಾರಗಳು ಪ್ರತಿವರ್ಷ ಯಂತ್ರವತ್ತಾಗಿ ಮಂಡಿಸುವ ಸಾಮಾನ್ಯ ಜನರಿಗೆ ಅರ್ಥವಾಗದ ಅಂಕಿಸಂಖ್ಯೆಗಳ ಮಾಯಾಜಾಲದ ಬಜೆಟ್‌ಗಳ ಮೂಲಕ ಪ್ರಜೆಗಳ ಸ್ವಾತಂತ್ರ್ಯದ ಹರಣವನ್ನು ವ್ಯವಸ್ಥಿತವಾಗಿ ಮಾಡುತ್ತಿವೆ. ಅದೇ ರೀತಿ ವಿಶ್ವಬ್ಯಾಂಕ್, ಅಂತರ್ ರಾಷ್ಟ್ರೀಯ ನಿಧಿ ಸಂಸ್ಥೆ, ಏಶಿಯಾ ಅಭಿವೃದ್ಧಿ ಸಂಸ್ಥೆ, ವಿಶ್ವ ವಾಣಿಜ್ಯ ಸಂಸ್ಥೆ ಮುಂತಾದ ಸಂಸ್ಥೆಗಳು ಕೊಡಮಾಡುವ ಸಹಾಯಧನ ಹಾಗು ಆಗಿಂದಾಗ್ಗೆ ಅಮೇರಿಕಾ

ಮತ್ತು ಇತರ ಶ್ರೀಮಂತ ದೇಶಗಳು ಬೀರುವ ಲಕ್ಷ್ಮೀ ಕಟಾಕ್ಷ ಇತ್ಯಾದಿಗಳಿಂದ ದೇಶದ ಆರ್ಥಿಕ ಸ್ವಾತಂತ್ರ್ಯದ ಹರಣ ಆಗುತ್ತಿದೆ. ಇವು ಸಾಲದೆಂಬಂತೆ ಸ್ವತಃ ಭಾರತೀಯರೇ ಭ್ರಷ್ಟಾಚಾರದ ಮೂಲಕ ಸಂಪಾದಿಸುವ ಕಳ್ಳಹಣವನ್ನು ವಿದೇಶದಲ್ಲಿಯ ಬ್ಯಾಂಕುಗಳಿಗೆ ರವಾನಿಸುವ ಹಣವೂ ದೇಶದ ಆರ್ಥಿಕ ಸ್ವಾತಂತ್ರ್ಯದ ಅಪಹರಣಕ್ಕೆ ಬಹುವಾಗಿ ಕಾರಣವಾಗಿದೆ. ಇತ್ತೀಚಿಗೆ ಎಮ್.ಆರ್.ವೆಂಕಟೇಶ್ ಎಂಬುವವರು ಪ್ರಕಟಿಸಿರುವ ಸೆನ್ಸ್, ಸೆನ್ಸೆಕ್ಸ್ ಮತ್ತು ಸೆಂಟಿಮೆಂಟ್ಸ್ ಎಂಬ ತಮ್ಮ ಪುಸ್ತಕದಲ್ಲಿ ಈ ಕಳ್ಳಹಣದ ರಫ್ತಿಗೆ ಸಂಬಂಧಿಸಿದ ವಿಷಯಗಳನ್ನು ಬಹಿರಂಗಪಡಿಸಿದ್ದಾರೆ. ಅವರ ಪ್ರಕಾರ ಜಗತ್ತಿನ ರಾಷ್ಟ್ರಗಳ ಸಮೂಹದಲ್ಲಿ ಈ ಕಳ್ಳಹಣ ರಫ್ತಿನ ವ್ಯವಹಾರದಲ್ಲಿ ಭಾರತ ಐದನೇ ಸ್ಥಾನದಲ್ಲಿದೆ. ಪ್ರತಿವರ್ಷ ಭಾರತದಿಂದ ೨೨ ರಿಂದ ೨೭ ಬಿಲಿಯನ್ ಅಮೇರಿಕ ಡಾಲರ್‌ನಷ್ಟು ಕಳ್ಳಹಣ ಭಾರತದ ಹೊರಗೆ ಹೋಗುತ್ತದೆ. ಇಷ್ಟು ಅಗಾಧ ಪ್ರಮಾಣದ ಹಣ ದೇಶದ ಹೊರಕ್ಕೆ ಅವ್ಯಾಹತವಾಗಿ ಮತ್ತು ಯಾವ ಅಡೆತಡೆಯೂ ಇಲ್ಲದೆ ಹರಿದು ಹೋದರೆ ಭಾರತದಲ್ಲಿ ಉಳಿಯುವುದು ಕೇವಲ ಬಡತನ, ಭ್ರಷ್ಟಾಚಾರ ಮತ್ತು ಹಿಂಸೆ. ಕೇಂದ್ರ ಸರ್ಕಾರದ ಯಾವ ಆಡಳಿತಾತ್ಮಕ ಸಂಸ್ಥೆಯೂ ಕಳ್ಳಹಣದ ಈ ರಫ್ತಿಗೆ ಕಡಿವಾಣ ಹಾಕಲು ಅಸಮರ್ಥವಾಗಿರುವುದು ಈ ಸಮಸ್ಯೆ ಉಲ್ಬಣಗೊಳ್ಳುತ್ತಾ ಹೋಗಲು ಕಾರಣವಾಗಿದೆ. ಹಣದ ಈ ಲೂಟಿ ೧೯೪೭ರಿಂದಲೇ ಪ್ರಾರಂಭವಾಗಿದೆ. ಅಂದರೆ ಲೂಟಿಯ ಅಧ್ಯಾಯ ಪ್ರಾರಂಭವಾಗಿ ಅರವತ್ತು ವರ್ಷಗಳೇ ಆದವು ಲೂಟಿಯನ್ನು ನಿಲ್ಲಿಸುವ ಯಾವುದೇ ಪರಿಣಾಮಕಾರಿ ರಾಜಕೀಯ ಇಚ್ಛಾಶಕ್ತಿ ಇದುವರೆಗೆ ಕಂಡು ಬಂದಿಲ್ಲ. ಆದ್ದರಿಂದಲೇ ಆ ಇಚ್ಛಾಶಕ್ತಿಯನ್ನು ಮೆರೆದ ಜನತಾ ಕ್ರಾಂತಿಯೊಂದು ಕೂಡಲೇ ಪ್ರಾರಂಭವಾಗಬೇಕಿದೆ.

ಇಂಗ್ಲಿಷ್ ಸರ್ಕಾರದ ೧೫೦ ವರ್ಷದ ಆಳ್ವಿಕೆಯ ಕಾಲದಲ್ಲಿ ಆ ಸರ್ಕಾರ ಭಾರತವನ್ನು ಲೂಟಿ ಮಾಡಿ, ಜನರನ್ನು ನಿಷ್ಕ್ರಿಯಗೊಳಿಸಿ ನೂರಾರು ವರ್ಷಗಳ ಕಾಲ ಚೇತರಿಸಿಕೊಳ್ಳಬೇಕಾದಂಥ ನೋವು-ಸಂಕಟಗಳನ್ನು ಬಿಟ್ಟು ಹೋಯಿತು. ಅದಕ್ಕೂ ಮುನ್ನ ಮುಸ್ಲಿಂರ ಸುಮಾರು ೪೦೦ ವರ್ಷಗಳ ಆಳ್ವಿಕೆಯಲ್ಲಿ ಭಾರತ ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಡತನದ ರೇಖೆಯ ಕೆಳಗೆ ತಳ್ಳಲ್ಪಟ್ಟಿತು. ಒಟ್ಟು ಸುಮಾರು ಆರು ನೂರು ವರ್ಷಗಳ ದಾಸ್ಯತೆಯಿಂದ ಬಿಡುಗಡೆಗೊಂಡ ಭಾರತ ಆ ದಾಸ್ಯತೆಯ ಕಾಲದ ಎಲ್ಲ ನೋವು-ಸಂಕಟಗಳಿಂದ ಮುಕ್ತವಾಗುವುದೆಂದು ತಿಳಿಯಲಾಗಿತ್ತು. ಆದರೆ ಆ ಹಳೆಯ ಸಮಸ್ಯೆಗಳ ಜಾಗದಲ್ಲಿ ಈಗ ಹೊಸ ಸಮಸ್ಯೆಗಳು ಬಂದು ಕೂತಿವೆ. ಅಂದಿನ ಆ ಸಮಸ್ಯೆಗಳಿಗೆ ಪ್ರಾಚೀನತೆಯ ಲೇಪವಿತ್ತು. ಇಂದಿನ ಸಮಸ್ಯೆಗಳಿಗೆ ಆಧುನಿಕತೆಯ ಲೇಪವಿದೆ. ಅಂದಿಗೂ ಇಂದಿಗೂ ಇಷ್ಟೇ ವ್ಯತ್ಯಾಸ. ಮುಸ್ಲಿಂರ ಕಾಲದಲ್ಲೂ ಸ್ವಾತಂತ್ರ್ಯಕ್ಕಾಗಿ ಅಲ್ಲಲ್ಲಿ ಯುದ್ಧಗಳು-ಬಂಡಾಯಗಳು ಆಗುತ್ತಲೇ ಇದ್ದವು. ಇಂಗ್ಲಿಷರ ಆಳ್ವಿಕೆಯ ಕಾಲದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ವ್ಯವಸ್ಥಿತವಾಗಿ ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟವೇ ನಡೆಯಿತು. ಭಾರತ ಸ್ವಾತಂತ್ರ್ಯಗೊಂಡಿತು. ಪುನಃ ಹೊಸ ರೂಪದ ಸಮಸ್ಯೆಗಳು ಭಾರತೀಯರನ್ನು ಕಾಡುತ್ತಿವೆಯಾದ್ದರಿಂದ ಭಾರತೀಯರು ಪ್ರಜಾಪ್ರಭುತ್ವದ ಮುಖವಾಡದ ಸರ್ವಾಧಿಕಾರತ್ವದ ವಿರುದ್ಧ ಇನ್ನೊಂದು ಬಾರಿ ಅಹಿಂಸಾತ್ಮಕ ಹೋರಾಟ ನಡೆಸಬೇಕಿದೆ.

ಸ್ವಾತಂತ್ರ್ಯ ಬಂದ ಮೇಲೆ ಉದ್ಭವಿಸಿರುವ ಮುಖ್ಯ ಸಮಸ್ಯೆಗಳು ಇಂತಿವೆ:-

೧) ಸರ್ಕಾರವು ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿ ನೀತಿಯನ್ನು ಅನುಷ್ಠಾನಕ್ಕೆ ತರುವ ಪ್ರಯತ್ನದಲ್ಲಿ ದೇಶದ ಪ್ರಕೃತಿ, ಪರಿಸರ, ಖನಿಜ ಸಂಪತ್ತು, ಅರಣ್ಯ, ನೀರು

ಮುಂತಾದ ನೈಸರ್ಗಿಕ ಸಂಪನ್ಮೂಲಗಳು ಭರದಿಂದ ನಾಶವಾಗುತ್ತಿವೆ. ಅಲ್ಲದೆ ಪಟ್ಟಭದ್ರ ಹಿತಗಳ ಕೈವಶವಾಗುತ್ತಿವೆ. ಇದಕ್ಕೊಂದು ಉದಾಹರಣೆ ಹೀಗಿದೆ:– ಮಲೆನಾಡಾದ ಕೊಡಗಿನಲ್ಲಿ ೧೯೩೦ರಲ್ಲಿ ಒಟ್ಟು ಭೂಪ್ರದೇಶದ ಶೇ.೮೬.೧೧ ರಷ್ಟು ಅರಣ್ಯ ಇತ್ತು. ಇದು ೨೦೧೦ರ ವೇಳೆಗೆ ಅಂದರೆ, ಎಂಭತ್ತು ವರ್ಷಗಳ ಅಂತರದಲ್ಲಿ ಶೇ.೧೦.೪೫ಕ್ಕೆ ಕುಸಿದಿದೆ. ಈ ಕುಸಿತ ಇನ್ನೂ ಭರದಿಂದ ಸಾಗಿದೆ. ಈ ಪ್ರಮಾಣದಲ್ಲಿಯೇ ಕೊಡಗಿನ ಅರಣ್ಯ ನಾಶವಾಗುತ್ತ ಹೋದರೆ ಇನ್ನು ಕೆಲವೇ ವರ್ಷಗಳಲ್ಲಿ ಕೊಡಗು ಬೆಂಗಾಡಾಗುತ್ತದೆ. ಇಂಥದೇ ಪರಿಸ್ಥಿತಿ ಹಿಮಾಲಯ ಪ್ರದೇಶದಲ್ಲಿಯ ಕಾಡಿನಿಂದ ಹಿಡಿದು ಕೇರಳದ ಶಾಂತಿ ಕಣಿವೆಯ ವರೆಗೆ ಇದೆ. ಸಹ್ಯಾದ್ರಿ ಕಾಡೂ ಅಪಾಯದ ಅಂಚಿಗೆ ಸಿಕ್ಕಿಕೊಂಡಿದೆ.

೨) ಅಭಿವೃದ್ಧಿಯ ಹೆಸರಿನಲ್ಲಿ ದೇಶದಲ್ಲಿದ್ದ ಎಂಟು ಲಕ್ಷ ಹಳ್ಳಿಗಳನ್ನು ಸರ್ಕಾರವೇ ವಿನಾಶದ ಕೂಪಕ್ಕೆ ತಳ್ಳಿದೆ. ಗಾಂಧೀ ಗ್ರಾಮ ಸ್ವರಾಜ್ಯ, ಗ್ರಾಮ ಗಣರಾಜ್ಯಗಳ ಕನಸನ್ನು ಕಂಡಿದ್ದರು ಮತ್ತು ಅದರಲ್ಲಿಯೇ ದೇಶದ ನಿಜವಾದ ಹಿತವಿದೆಯೆಂದು ಹೇಳಿದ್ದರು. ಆದರೆ ಇಂದು ಗ್ರಾಮಗಳು ವಾಸ ಯೋಗ್ಯವಾಗಿಲ್ಲ; ಹಳ್ಳಿಗರು ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆ; ಗ್ರಾಮದ ಭೂಮಿಯನ್ನು ವಿಮಾನ ನಿಲ್ದಾಣಗಳು, ರೈಲ್ವೆ ಜಾಲಗಳು, ವಿಶೇಷ ಆರ್ಥಿಕ ವಲಯಗಳು, ಹೆದ್ದಾರಿಗಳು, ಕೈಗಾರಿಕಾ ಕಟ್ಟಡಗಳು, ವಿಶ್ವವಿದ್ಯಾನಿಲಯಗಳು, ಶಿಕ್ಷಣ ಸಂಸ್ಥೆಗಳು, ನಗರಗಳ ಬಡಾವಣೆಗಳು, ರಕ್ಷಣಾ ಇಲಾಖೆಯ ಬೇಡಿಕೆಗಳು ಆಕ್ರಮಿಸಿಕೊಳ್ಳುತ್ತಿವೆ. ಅತಿ ಹೆಚ್ಚು ಪರಿಹಾರದ ಆಸೆ ತೋರಿಸಿ ಸರ್ಕಾರವೇ ರೈತರಿಂದ ಕೃಷಿ ಭೂಮಿಯನ್ನು ಕಿತ್ತುಕೊಳ್ಳುತ್ತಿದೆ. ಇದರ ಪರಿಣಾಮವಾಗಿ ಆಹಾರ ಉತ್ಪಾದನೆ ಕಡಿಮೆಯಾಗುತ್ತಿದೆ. ಹೆಚ್ಚು ಆಹಾರ ಬೆಳೆಯಲು ಸರ್ಕಾರ ಅನೇಕ ಪ್ರಕಾರದ ರಿಯಾಯ್ತಿಗಳನ್ನು ಕೊಡಬೇಕಾಗುತ್ತದೆ. ಗ್ರಾಹಕರಿಗೂ ರಿಯಾಯ್ತಿ ಕೊಡಬೇಕಾಗುತ್ತದೆ. ಹೀಗೆ ಇಬ್ಬದಿಯ ರಿಯಾಯ್ತಿ ಸರ್ಕಾರದ ಖಜಾನೆಯ ಮೇಲೆ ಬಹುದೊಡ್ಡ ಹೊರೆಯಾಗುತ್ತದೆ. ದೇಶದಲ್ಲಿಯ ೧.೨ಬಿಲಿಯನ್ ಜನರಿಗೆ ಆಹಾರ ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ಹೊತ್ತುಕೊಂಡಿದೆ. ಇಷ್ಟು ದೊಡ್ಡ ಗಾತ್ರದ ಜನಸಂಖ್ಯೆಗೆ ಬೇಕಾದ ಆಹಾರವನ್ನು ಆಮದು ಮಾಡಿಕೊಳ್ಳುವುದೆಂದರೆ ದೇಶದ ಆದಾಯದ ಸಿಂಹಪಾಲನ್ನು ಆಮದಿಗೋಸ್ಕರವೇ ಇಡಬೇಕಾಗುತ್ತದೆ. ಅಲ್ಲದೆ ಜಾಗತಿಕ ಮಟ್ಟದಲ್ಲೂ ಆಹಾರ ಧಾನ್ಯಗಳ ಬೆಲೆ ಏರುತ್ತಲೇ ಇದೆ. ಕಳೆದ ೨೦೦೯ ಮತ್ತು ೨೦೧೦ರ ಅವಧಿಯಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬಲೆ ಶೇಕಡಾ ೨೫ರಷ್ಟು ಹೆಚ್ಚಾಗಿತ್ತು. ಯೋಜನಾಯುಗ ಪ್ರಾರಂಭವಾಗುತ್ತಿದ್ದಂತೆಯೇ ಆಹಾರ ಸ್ವಾವಲಂಬಿತ ಗ್ರಾಮಗಳ ಯೋಜನೆ ರೂಪಿಸದ್ದರೆ ದೇಶದ ಆಹಾರ ಸಮಸ್ಯೆ ಸುಲಭವಾಗಿ ಬಗೆಹರಿಯುತ್ತಿತ್ತು.

೩) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಂಡಿಸುತ್ತಿರುವ ಬಜೆಟ್‌ಗಳು ಸ್ಪಷ್ಟವಾಗಿ ರಾಜಕೀಯ ಉದ್ದೇಶ್ಯದಿಂದ ಕೂಡಿರುತ್ತವೆ. ಉದಾಹರಣೆಗೆ ಕೃಷಿ ಬಜೆಟ್ ಎಂಬ ಕಲ್ಪನೆಗೆ ನಾಂದಿ ಹಾಡಿದ ಕರ್ನಾಟಕದ ಕೃಷಿ ಬಜೆಟ್ಟನ್ನೇ ನೋಡೋಣ. ಈ ಬಜೆಟ್ ಮೂಲಕ ಆಡಳಿತಾರೂಢ ಪಕ್ಷವು ಮುಂಬರುವ ಚುನಾವಣೆಯ ಮೇಲೆ ಕಣ್ಣಿಟ್ಟುಕೊಂಡೇ ಚಪ್ಪಾಳೆ ಗಿಟ್ಟಿಸುವ ಬಜೆಟ್ ಮಂಡಿಸಿದೆ. ಜೊತೆಗೆ ರೈತರನ್ನು ಅವರ ಸರ್ವತೋಮುಖ ಅಭಿವೃದ್ಧಿಯ ಹೆಸರಿನಲ್ಲಿ ರಾಜ್ಯದ ಎಲ್ಲ ರೈತರು ಒಂದಲ್ಲ ಒಂದು ಯೋಜನೆಯ ಫಲಾನುಭವಿಯಾಗುವುದರ ಮೂಲಕ ತನಗರಿಯದಂತೆಯೇ ಸಾಲದ ಸುಳಿಯಲ್ಲಿ ಸಿಕ್ಕಿಕೊಳ್ಳುವಂತೆ ಈ ಕೃಷಿ ಬಜೆಟ್ ಮಾಡಿದೆ ಎಂಬ ಭೀತಿ ಕಾಡದೇ ಇಲ್ಲ.

ಈ ಸಾಲದ ಭೀತಿಗಿಂತ ರೈತರು ಹೆಚ್ಚು ಹೆಚ್ಚಾಗಿ ಸರ್ಕಾರವನ್ನು ಅವಲಂಬಿಸುವಂತಾಗಿದೆ. ಪರರಿಗೆ ಉಪಕಾರಿಗಳಾದ ರೈತರೇ ಸರ್ಕಾರಗಳ ಬಂಧಿಯಾಗಿದ್ದಾರೆ. ಸರ್ಕಾರದ ಕೃಪೆಯಿಲ್ಲದೆ ಇದ್ದರೆ ಅವರ ಅಭಿವೃದ್ಧಿ ಕುಂಠಿತವಾಗುವ ಭೀತಿಯ ಕತ್ತಿ ಸದಾ ರೈತರ ನೆತ್ತಿಯ ಮೇಲೆ ನೇತಾಡುತ್ತಿರುತ್ತದೆ. ಇಂಥ ಕೃಷಿ ಬಜೆಟ್‌ನಿಂದ ಗ್ರಾಮಗಳೂ ಪರಾಧೀನ, ಗ್ರಾಮದಲ್ಲಿರುವ ಹಳ್ಳಿಗರೂ ಪರಾಧೀನವಾಗುವಂಥ ಸನ್ನಿವೇಶ ಉಂಟಾಗುತ್ತದೆ. ಗ್ರಾಮಗಳಲ್ಲಿಯ ಮಾನವ ಸಂಪನ್ಮೂಲ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ವೈಜ್ಞಾನಿಕ ಜೋಡಣೆಯಿಂದ ಗ್ರಾಮಗಳು ಆಹಾರದ ವಿಷಯದಲ್ಲಿ, ಜೀವನದ ಎಲ್ಲ ಪ್ರಾಥಮಿಕ ಅವಶ್ಯಕತೆಗಳಲ್ಲಿ, ಉದ್ಯೋಗ ಸೃಷ್ಟಿಯಲ್ಲಿ ಸ್ವಾವಲಂಬಿಯಾಗುವಂಥ ಪ್ರಯತ್ನ ಅಥವಾ ದೃಷ್ಟಿ ಕೃಷಿ ಬಜೆಟ್‌ನಲ್ಲಿ ಪ್ರದಾನವಾಗಿರಬೇಕಿತ್ತು. ಕೃಷಿಯ ಮತ್ತು ಗ್ರಾಮಗಳ ಏಳಿಗೆಯ ಉದ್ದೇಶ್ಯ ಕೃಷಿ ಬಜೆಟ್‌ದ್ದಾಗಿದ್ದರೆ ಮೊಟ್ಟ ಮೊದಲು ಸರ್ಕಾರವು ಗ್ರಾಮಗಳ ಭೂಮಿ ಗ್ರಾಮಗಳ ಒಡೆತನಕ್ಕೇ ಸೇರಿದ್ದೆಂದು ಘೋಷಣೆ ಮಾಡಬೇಕಿತ್ತು. ಆದರೆ ಬದಲಿಗೆ ಇಂದು ಸರ್ಕಾರವು ಯಾವ ಕ್ಷಣದಲ್ಲಾದರೂ, ಯಾವ ನೆಪದಲ್ಲಾದರೂ ಗ್ರಾಮಗಳ ಭೂಮಿಯನ್ನು ತನ್ನ ಸ್ವಾಧೀನಕ್ಕೆ ಪಡೆದು ಕೃಷಿಯಿಲ್ಲದ ಗ್ರಾಮಗಳನ್ನಾಗಿ ಮಾಡಬಹುದಾಗಿದೆ!

೫) ಇನ್ನು ರೈಲ್ವೆ ಬಜೆಟ್. ಹೊಸ-ಹೊಸ ರೈಲು ಮಾರ್ಗಗಳನ್ನು ಸೃಷ್ಟಿಸುವ ಮೂಲಕ ಭೂಕಬಳಿಕೆ ರಾಜಾರೋಷವಾಗಿ ನಡೆಯುತ್ತಿದೆ. ಕರ್ನಾಟಕಕ್ಕೆ ಇನ್ನೂ ಹೆಚ್ಚು ರೈಲು ಮಾರ್ಗ ಏಕೆ ಸಿಕ್ಕಿಲ್ಲವೆಂದರೆ ರಾಜ್ಯ ಸರ್ಕಾರವು ರೈಲ್ವೆ ಇಲಾಖೆಗೆ ಭೂಮಿ ಒದಗಿಸಿಕೊಡಲು ಸಾಧ್ಯವಾಗಿಲ್ಲದೇ ಇರುವುದಕ್ಕಾಗಿ. ಅಂದರೆ ರೈಲು ಸಂಚಾರದ ಅಭಿವೃದ್ಧಿ ನೇರವಾಗಿ ಭೂ ಸ್ವಾಧೀನತೆಯನ್ನು ಅವಲಂಬಿಸಿದೆ.

ಗಾಂಧೀಜಿಯವರ ದೃಷ್ಟಿಕೋನದ ಪ್ರಕಾರ ದೇಶದಲ್ಲಿ ರೈಲು ಜಾಲ ಹೆಚ್ಚಾದಷ್ಟು ದೇಶದ ಆರ್ಥಿಕ ಸ್ಥಿತಿ ಮುಖ್ಯವಾಗಿ ಪ್ರಾದೇಶಿಕ ಆರ್ಥಿಕ ಸ್ಥಿತಿ ಸದಾ ಡೋಲಾಯಮಾನವಾಗಿಯೇ ಇರುತ್ತದೆ. ಖನಿಜಗಳ ಲೂಟಿಗೆ, ಅರಣ್ಯದ ನಾಶಕ್ಕೆ ರೈಲು ಬಹಳಷ್ಟು ತನ್ನ ಕಾಣಿಕೆಯನ್ನು ಸಲ್ಲಿಸಿದೆ. ರೈಲ್ವೆ ಮಂತ್ರಿಗಳು ತಮ್ಮ-ತಮ್ಮ ಪಕ್ಷಗಳ ಹಿತ ಸಾಧನೆಗಾಗಿ ರೈಲ್ವೆ ಬಜೆಟ್ ಮಂಡಿಸುತ್ತಾರೆಯೇ ಹೊರತು ದೇಶದ ನಿಜವಾದ ಏಳಿಗೆಯ ದೃಷ್ಟಿಯಿಂದ ಮಂಡಿಸುವುದಿಲ್ಲ. ಅಲ್ಲದೆ ದೇಶದ ಅಭಿವೃದ್ಧಿ ರೈಲು ಸಂಚಾರದ ಅಭಿವೃದ್ಧಿ, ಹೆದ್ದಾರಿಗಳ ಅಭಿವೃದ್ಧಿ, ವಿಮಾನಯಾನಗಳ ಅಭಿವೃದ್ಧಿಯನ್ನೇ ಅವಲಂಬಿಸಿದೆ ಎಂಬ ಭ್ರಾಂತಿ ನಮ್ಮ ದೇಶದ ಯೋಜಕರ ತಲೆಯನ್ನು ಹೊಕ್ಕಿದೆ. ಜೊತೆಗೆ ಈ ವಿಷಯದಲ್ಲಿ ಬೇರೆ ದೇಶಗಳ ಜೊತೆ ಹೋಲಿಕೆ ಮಾಡಕೊಂಡು ಮುಂದುವರಿಯುವ ಪ್ರವೃತ್ತಿಯೂ ಅವರ ಮನಸ್ಸಿನಲ್ಲಿ ಬೇರೂರಿದೆ. ಈ ಎಲ್ಲ ಕಾರಣಗಳಿಂದ ಬಜೆಟ್ ಎಂಬುದು ದೇಶಾಭಿವೃದ್ಧಿಗೆ ಸಂಬಂಧಿಸಿದ ಭ್ರಾಮಕ ವಿಷಯವಾಗಿದೆ. ಮುಖ್ಯವಾಗಿ ಇಡೀ ದೇಶವನ್ನೇ ಖೋತಾ ಬಜೆಟ್‌ಗಳ ಮೂಲಕ ಸಾಲದ ಶೂಲಕ್ಕೆ ಏರಿಸುವ ಭಯಾನಕ ಸಂಗತಿಗಳಾಗಿವೆ.

ಇಂಥ ಪೊಳ್ಳು-ಸುಳ್ಳು ಮತ್ತು ಸಾಮಾಜಿಕ ಆರೋಗ್ಯವನ್ನೂ ಹಾಳುಮಾಡುವ, ಆರ್ಥಿಕ ಅಸಮಾನತೆಯನ್ನು ಹೆಚ್ಚು ಮಾಡುವ ಬಜೆಟ್‌ಗಳ ವಿರುದ್ಧ ಜನ ಧ್ವನಿ ಎತ್ತಬೇಕಾಗಿದೆ. ಗಗನ ಕುಸುಮವನ್ನು ತೋರಿಸುವ ಬಜೆಟ್‌ಗಳ ಬದಲಾಗಿ ಭೂಮಿಯ ಮೇಲಿನ ಹಸಿರು ಗರಿಕೆಯನ್ನು ಕಾಪಾಡುವ ಬಜೆಟ್‌ನ ಬೇಡಿಕೆಗಾಗಿ ಜನ ಆಂದೋಲನ ನಡೆಸಬೇಕಿದೆ.

೬) ಗಾಂಧೀ ತಮ್ಮ ದಾಂಡಿ ಯಾತ್ರೆಯ ಮೂಲಕ ಭಾರತ ದೇಶ ಹಳ್ಳಿಗಳಲ್ಲಿದೆ

ಎಂದು ಸಾರಿದರು. ಆದರೆ ಇಂದಿನ ಸರ್ಕಾರಗಳು ಹಳ್ಳಿಗಳನ್ನು ಉಚ್ಚಾಟಿಸುತ್ತಿವೆ ಇಲ್ಲವೆ ಹಳ್ಳಿಗಳನ್ನೇ ನಗರಗಳನ್ನಾಗಿ ಪರಿವರ್ತಿಸುತ್ತಿವೆ. ಹಳ್ಳಿಯ ಜನರನ್ನು ನಿರಾಶ್ರಿತರನ್ನಾಗಿ ಮಾಡುವ ದೊಡ್ಡ ಕಾಯಕವನ್ನೇ ಯೋಜನಾಬದ್ಧವಾಗಿ ಮಾಡುತ್ತಿವೆ. ಉಪ್ಪು ಸ್ವತಂತ್ರ ಭಾರತದಲ್ಲಿ ಎಲ್ಲರಿಗೂ ಉಚಿತವಾಗಿ ದೊರೆಯಬೇಕೆಂದು ರಾಷ್ಟ್ರಪಿತ ಬಯಸಿದ್ದರು. ಆದರೆ ಇಂದು ಉಪ್ಪು ತಯಾರಿಕೆ ಕೇಂದ್ರೀಕೃತ ಬಹುರಾಷ್ಟ್ರೀಯ ಕಂಪನಿಗಳ ಅಧೀನಕ್ಕೆ ಒಳಪಟ್ಟು ದುಬಾರಿ ವಸ್ತುವಾಗಿದೆ. ಉಪ್ಪಿನ ವಿಷಯಕ್ಕೆ ಸಂಬಂಧಿಸಿದಂತೆ ಜನ ಸಾಮಾನ್ಯರಿಗೆ ಪರತಂತ್ರ ಸರ್ಕಾರದ ಆಡಳಿತಕ್ಕೂ, ಸ್ವತಂತ್ರ ಸರ್ಕಾರದ ಆಡಳಿತಕ್ಕೂ ಮಧ್ಯ ಇರುವ ವ್ಯತ್ಯಾಸವೆ ಅನುಭವಕ್ಕೆ ಬರುತ್ತಿಲ್ಲ. ಇದೇ ವಿಚಾರ ಜೀವನದ ಎಲ್ಲ ಉಪಭೋಗಿ ವಸ್ತುಗಳ ವಿಷಯದಲ್ಲೂ ಅನುಭವಾಗುತ್ತಿದೆ.

೭) ಕರ್ನಾಟಕ ರಾಜ್ಯದಲ್ಲಿ ಇನ್ನು ಎರಡು ವರ್ಷಗಳಲ್ಲಿ ಮತ್ತು ಅಸ್ಸಾಂ, ತಮಿಳುನಾಡು, ಪುದುಚೇರಿ, ಕೇರಳ ಮತ್ತು ಪಶ್ಚಿಮಬಂಗಾಳ ರಾಜ್ಯಗಳಲ್ಲಿ ಸದ್ಯದಲ್ಲಿಯೇ ಚುನಾವಣೆಗಳು ನಡೆಯಲಿವೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ ಚುನಾವಣೆ ಆಗಿದೆ. ಚುನಾವಣೆಗಳೇ ಭ್ರಷ್ಟಾಚಾರದ ಉಗಮಸ್ಥಾನವೆಂಬುದು ಎಲ್ಲರ ಅನುಭವವಾಗಿದೆ. ಚುನಾವಣಾ ಪದ್ಧತಿಯಲ್ಲಿ ಸುಧಾರಣೆಯ ಅನೇಕ ಕ್ರಮಗಳನ್ನು ಚುನಾವಣಾ ಆಯೋಗ ಕೈಗೊಂಡಿದೆ. ಆದರೆ ಎಲ್ಲಕ್ಕಿಂತ ಮುಖ್ಯವಾದ ಸುಧಾರಣೆಯೊಂದು ಆಗಬೇಕಿದೆ. ಭ್ರಷ್ಟ ಮತ್ತು ಅಯೋಗ್ಯರೆಂದು ಸಾಬೀತಾಗುವ ಪ್ರತಿನಿಧಿಗಳನ್ನು ಜನತೆ ಹಿಂದಕ್ಕೆ ಕರೆಸಿಕೊಳ್ಳುವ ಅಧಿಕಾರ ಮತದಾರರಿಗೆ ದೊರೆಯಬೇಕು. ಮತಹಾಕುವವನಿಗೆ ತನ್ನ ಮತ ತಡೆಹಿಡಿಯುವ ಮತ್ತು ತನ್ನ ಮತ ಪಡೆದ ಪ್ರತಿನಿಧಿಯನ್ನು ಹಿಂದಕ್ಕೆ ಕರೆಸಿಕೊಳ್ಳುವ ಪ್ರಕ್ರಿಯೆಗೆ ಚುನವಣಾ ಪದ್ಧತಿಯ ಒಟ್ಟಾರೆ ವ್ಯವಸ್ಥೆಯಲ್ಲಿ ಸ್ಥಾನ ದೊರೆಯುವ ವರೆಗೆ ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಅಪೂರ್ಣವೆಂದೇ ಭಾವಿಸಬೇಕಾಗುವುದು.

ಇಂದಿನ ಪಂಚಾಯತ್ ರಾಜ್ಯ ವ್ಯವಸ್ಥೆಯಿಂದ ದೇಶದ ಪ್ರತಿಯೊಂದು ಹಳ್ಳಿಯೂ ರಾಜಕೀಯ ವೈಷಮ್ಯದ ಕಾರಣದಿಂದ, ಅಧಿಕಾರಗ್ರಹಣಕ್ಕಾಗಿ ನಡೆಯುವ ಪೈಪೋಟಿಯಿಂದ ಕುರುಕ್ಷೇತ್ರವಾಗಿವೆ; ಮನೆ-ಮನೆಗಳಲ್ಲಿಯೂ ವಿರಸ ಉಂಟಾಗಿದೆ. ಆದ್ದರಿಂದ ಇಂದು ಹಳ್ಳಿಗಳಲ್ಲಿ ಯಾವುದೇ ಒಳ್ಳೆಯ ವಿಚಾರದ ಕೆಲಸವನ್ನು ಮಾಡಲು ಸಾಧ್ಯವಿಲ್ಲದಂತಾಗಿದೆ. ಊರಿನಲ್ಲಿ ಒಗ್ಗಟ್ಟಿಲ್ಲ. ಹಳ್ಳಿಯ ಜನರ ಮತವೂ ಒಡೆದಿದೆ, ಮನವೂ ಒಡೆದಿದೆ. ಇಂಥ ಹಳ್ಳಿಯ ಏಳಿಗೆಯನ್ನು ಸರ್ಕಾರ ಹಣದ ಬಲದಿಂದ, ಅಧಿಕಾರದ ಬಲದಿಂದ ಮಾಡಲು ಹೊರಟಿದೆ. ಕೂಡಿದ ಮನ, ಕೂಡಿದ ಮತ ಮಾಡಬಹುದಾದ ಕೆಲಸವನ್ನು ಹಣದಿಂದ ಮಾಡಬಹುದೆಂಬ ಭ್ರಮೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇವೆ. ಎಲ್ಲಿಯ ವರೆಗೆ ಗ್ರಾಮಗಳಲ್ಲಿ ಒಗ್ಗಟ್ಟಿನ ಮನೋಭಾವವನ್ನು ಮೂಡಿಸಲಾಗುವುದಿಲ್ಲವೋ ಅಲ್ಲಿಯ ವರೆಗೆ ಹಳ್ಳಿಗಳ ಏಳಿಗೆ ಸಾಧ್ಯವಿಲ್ಲ. ಹಳ್ಳಿಯಲ್ಲಿರುವ ಭೂಮಿ, ಕಾಡು ಮತ್ತು ನೀರುಗಳ ಮೇಲಿನ ಒಡೆತನ ಹಳ್ಳಿಯದೇ ಆಗಿರಬೇಕು. ಇಂದು ಇವುಗಳ ಮೇಲೆ ಸರ್ಕಾರದ ನಿಯಂತ್ರಣ ಇರುವುದರಿಂದ ಈ ಮೂರು ಪ್ರಾಕೃತಿಕ ಸಂಪತ್ತುಗಳು ಪಟ್ಟಭದ್ರ ಹಿತಗಳ ಕೈ ಸೇರಿವೆ. ಇವುಗಳ ಮೇಲಿನ ಹಿಡಿತಕ್ಕಾಗಿ ಈಗ ಅಸ್ತಿತ್ವಕ್ಕೆ ಬಂದಿರುವ ದೇಶದ ಎಲ್ಲ ಗ್ರಾಮ ಪಂಚಾಯಿತ್ತಿಗಳು ಸರ್ವಾನುಮತದಿಂದ ತೀರ್ಮಾನಮಾಡಿ ಭೂಮಿ, ಅರಣ್ಯ ಮತ್ತು ನೀರನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು. ಗ್ರಾಮಸಭೆಗಳು ಈ ಸಂಬಂಧವಾದ ಘೋಷಣೆಯನ್ನು ಕೂಗಬೇಕು, ಅದು ದಿಲ್ಲಿಯವರೆಗೂ ಕೇಳಬೇಕು. ಭ್ರಷ್ಟಾಚಾರ

ನಿರ್ಮೂಲನದ ಮಾತನ್ನು ಎಲ್ಲರೂ ಆಡುತ್ತೇವೆ. ಆ ಮಾತು ಸಾಕಾರಗೊಳ್ಳಬೇಕಾದರೆ ಅಲ್ಲಿಯ ಪ್ರಕೃತಿ ಸಂಪತ್ತು ಅಲ್ಲಿಯ ಗ್ರಾಮ ಪಂಚಾಯ್ತಿಗಳಿಗೇ ಸೇರುವಂತೆ ಮಾಡಬೇಕು.

ಈ ಅರವತ್ತು ವರ್ಷಗಳಿಂದ ದೇಶದ ರಾಜ್ಯಭಾರ ತಲೆಕೆಳಕಾಗಿ ನಡೆದಿದೆ. ದಿಲ್ಲಿಯ ಮಾತನ್ನು ಹಳ್ಳಿಗಳು ಕೇಳುವುದಲ್ಲ; ಬದಲಿಗೆ ಹಳ್ಳಿಗಳ ಮಾತನ್ನು ದಿಲ್ಲಿ, ಬೆಂಗಳೂರು, ಚೆನ್ನೈ, ಮುಂಬೈ, ಕೊಲ್ಕತ್ತಾ ಕೇಳುವಂತಾಗಬೇಕು. ದೇಶದ ಯುವಕರಿಗೆ ಆಗ ನಾಯಕತ್ವದ ತರಬೇತಿ ಸಿಗುತ್ತದೆ. ಇಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿಯ ಮಂತ್ರಿಗಳು ಹಳ್ಳಿಗಳಿಗೆ ಹೊರೆಯಾಗಿದ್ದಾರೆ. ಜನತಾ ಪ್ರತಿನಿಧಿಗಳೂ ಹೊರೆಯಾಗಿದ್ದಾರೆ. ರಾಷ್ಟ್ರಪತಿ, ಪ್ರಧಾನಮಂತ್ರಿ, ಎಂ.ಪಿ.ಗಳು, ಎಮ್.ಎಲ್.ಎ.ಗಳು, ಅಧಿಕಾರಿಗಳು ಇಂದಿನ ಶ್ರೀ ಸಾಮಾನ್ಯನ ಒಂದು ದಿನದ ಆದಾಯಕ್ಕಿಂತ ನೂರು ಪಟ್ಟು ಹೆಚ್ಚು ಆರ್ಥಿಕ ಲಾಭ ಪಡೆಯುತ್ತಿದ್ದಾರೆ. ಇದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರವು ಪ್ರತಿವರ್ಷದ ಬಜೆಟ್‌ನಲ್ಲೂ ರಕ್ಷಣಾ ವ್ಯವಸ್ಥೆಗಾಗಿ ಬಜೆಟ್‌ನ ಒಟ್ಟು ಮೊತ್ತದ ಶೇಕಡಾ ಮೂವತ್ತಕ್ಕೂ ಹೆಚ್ಚು ಮೊತ್ತವನ್ನು ಮೀಸಲಾಗಿಡುತ್ತದೆ. ಈ ಬಗ್ಗೆಯೂ ಜನತೆ ಆಲೋಚಿಸಬೇಕಿದೆ. ಚಂದ್ರಯಾನ, ಮಂಗಳಯಾನ ಮುಂತಾದ ವಿವಿಧ ಗ್ರಹಗಳ ಯಾನ ಈಗ ಅಗತ್ಯವೇ, ಸರ್ಕಾರ ಅದಕ್ಕಾಗಿ ಬಿಲಿಯನ್‌ಗಟ್ಟಲೆ ಹಣವನ್ನು ಖರ್ಚು ಮಾಡುವುದು ಸರಿಯೇ ಎಂದು ಜನತೆ ಪ್ರಶ್ನಿಸಬೇಕಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ಅರವತ್ತು ವರ್ಷಗಳ ಕಾಲಮಾನಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಅರವತ್ತು ವರ್ಷಗಳ ನಂತರ ಮನುಷ್ಯನ ಹೊಸ ಜೀವನ ಪ್ರಾರಂಭವಾಗುತ್ತದೆಂದು ತಿಳಿಯಲಾಗಿದೆ. ಅದೇ ರೀತಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತು ಮೂರು ವರ್ಷಗಳಾದವು. ಆದ್ದರಿಂದ ಇನ್ನು ಮುಂದೆ ದೇಶದ ರಾಜಕೀಯ-ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಜೀವನಕ್ಕೆ ಕಾಯಕಲ್ಪ ಮಾಡಬೇಕಾದ ತುರ್ತು ಅಗತ್ಯ ಉಂಟಾಗಿದೆ. ಅದಕ್ಕಾಗಿ ಈಗಿನ ಪೊಳ್ಳು ಪ್ರಜಾತಂತ್ರ ವ್ಯವಸ್ಥೆಯ ಸ್ಥಾನದಲ್ಲಿ ಗ್ರಾಮ ಕೇಂದ್ರಿತ ಗಟ್ಟಿ ಪ್ರಜಾತಂತ್ರ ತರುವುದಕ್ಕಾಗಿ ಕ್ರಾಂತಿಯನ್ನು ನಡೆಸಬೇಕಿದೆ.

ಗಾಂಧೀಜಿ ೧೯೩೦ರಲ್ಲಿ ನಡೆಸಿದ ಉಪ್ಪಿನ ಸತ್ಯಾಗ್ರಹ ಸಂದರ್ಭದಲ್ಲಿ ಇಂಗ್ಲಿಷರ ಆಡಳಿತದಲ್ಲಿ ಯಾವೆಲ್ಲ ಸಮಸ್ಯೆಗಳಿದ್ದವೋ ಆ ಸಮಸ್ಯೆಗಳು ಇಂದಿನ ಅತ್ಯಂತ ಪರಿಣಾಮಕಾರಿ ಪ್ರಜಾಪ್ರಭುತ್ವದ ಸರಕಾರವೆಂದು ಕರೆಯಲ್ಪಡುತ್ತಿರುವ ಇಂದಿನ ಸನ್ನಿವೇಶದಲ್ಲೂ ಆ ಸಮಸ್ಯೆಗಳಿವೆ. ಜೊತೆಗೆ ಭ್ರಷ್ಟಾಚಾರ ಎಲ್ಲ ಸಮಸ್ಯೆಗಳನ್ನು ಉಲ್ಬಣಗೊಳಿಸಿವೆ. ನಮ್ಮದು ನಿಜವಾದ ಪ್ರಜಾಪ್ರಭುತ್ವವೇ ಅಥವಾ ಪ್ರಜಾಪ್ರಭುತ್ವದ ಮುಖವಾಡ ಧರಿಸಿದ ಕೆಲವೇ ಪಕ್ಷಗಳ ಅಥವಾ ಬಲಾಢ್ಯ ರಾಜಕಾರಣಿಗಳ ಸರ್ವಾಧಿಕಾರವೇ ಎಂಬುದು ನಿರ್ಧಾರವಾಗಬೇಕಿದೆ. ದಿಲ್ಲಿಯಿಂದ ನಡೆಯುತ್ತಿರುವ ಕೇಂದ್ರಿತ ಆಡಳಿತ ಪದ್ಧತಿ ಹೋಗಿ ಹಳ್ಳಿಗಳಲ್ಲಿ ಗ್ರಾಮಸ್ವರಾಜ್ಯ ಮಾದರಿಯ ಆಡಳಿತ ಪದ್ಧತಿ ಜಾರಿಗೆ ಬರಬೇಕಿದೆ. ಅದಕ್ಕಾಗಿ ಗಾಂಧೀಜಿಯವರು ಹೂಡಿದ್ದ ದಾಂಡಿ ಸತ್ಯಾಗ್ರಹದಂಥ, ವಿನೋಬಾರ ಭೂದಾನ ಯಜ್ಞ ಆಂದೋಲನದಂಥ, ಜಯಪ್ರಕಾಶ ನಾರಾಯಣರ ಸಂಪೂರ್ಣ ಕ್ರಾಂತಿ ಆಂದೋಲನದಂಥ ಅಥವಾ ಈ ಮೂರೂ ಆಂದೋಲನಗಳ ಸಮನ್ವಯಿತ ರೂಪದ ರಾಷ್ಟ್ರವ್ಯಾಪಿ ಅಹಿಂಸಾತ್ಮಕ ಚಳುವಳಿ ನಡೆಯಬೇಕಾಗಿರುವುದು ಇಂದಿನ ಯುಗದ ಕರೆಯಾಗಿದೆ.

* * *

ಲೌಕಿಕ ರಾಜ್ಯ

– ಡಿ.ವಿ.ಜಿ

(ಮಾರ್ಚ್ ೧೭ ಡಿ.ವಿ.ಜಿ ಯವರ ಜನ್ಮದಿನ. ಆ ಸವಿನೆನಪಿನಲ್ಲಿ. ಈ ಲೇಖನ. - ಸಂ)

ಇಂಡಿಯಾ ದೇಶಕ್ಕೆ ಈಗ ಒಂದು ಹೊಸ ನಿಬಂಧನೆ ತಯಾರಾಗುತ್ತಿದೆಯಷ್ಟೆ? ಆ ನಿಬಂಧನೆಯು ನಮ್ಮ ರಾಜ್ಯವನ್ನು ಮತಧರ್ಮ ಸಂಪರ್ಕವಿಲ್ಲದ ರಾಜ್ಯವನ್ನಾಗಿ ಮಾಡಯತ್ನಿಸಿದೆ. ಇಂಥಾ ರಾಜ್ಯವ್ಯವಸ್ಥೆಯನ್ನು ಇಂಗ್ಲೀಷಿನಲ್ಲಿ **'ಸೆಕ್ಯುಲರ್ ಸ್ಟೇಟ್'** ಎಂದು ಕರೆಯುವುದು ವಾಡಿಕೆ. 'ಸೆಕ್ಯುಲರ್' ಎಂದರೆ ಐಹಿಕ, ಸದ್ಯಃ ಪ್ರಪಂಚಕ್ಕೆ ಮಾತ್ರ ಸಂಬಂಧಪಟ್ಟ, ಪರಲೋಕ ವಿಚಾರಕ್ಕೆ ಅನ್ವಯವಾಗದ–ಎಂದು ಅರ್ಥ. ಈ ಅಭಿಪ್ರಾಯಲ್ಲಿ, ರಾಜ್ಯವೆಂಬ ಏರ್ಪಾಟಿಗೂ ಮತ ಧರ್ಮಕ್ಕೂ ಪರಸ್ಪರ ದ್ವೇಷವೆಂಬ ಭಾವವೇನೂ ಇಲ್ಲ. ಪ್ರಪಂಚದ ನಾನಾ ದೇಶಗಳಲ್ಲಿ ಆದಿಕಾಲದಿಂದಲೂ ರಾಜ್ಯಗಳು ಬಹುಮಟ್ಟಿಗೆ ಮತರ್ಧರ್ಮಗಳ ಸಂಸರ್ಗದಲ್ಲಿ ಬೆಳೆದುಕೊಂಡುಬಂದಿವೆ. ಪೂರ್ವಕಾಲದ ಹಿಂದೂ ರಾಜ್ಯದಲ್ಲಿ ರಾಜನು ವರ್ಣಾಶ್ರಮಧರ್ಮದ ಪಾಲಕನು; ಇಂಗ್ಲೆಂಡಿನಲ್ಲಿ ಇಂದಿಗೂ ರಾಜನು ಕ್ರೈಸ್ತಮತ ಪರಿಪಾಲಕನು; ಮೊನ್ನೆ ಮೊನ್ನೆಯವರೆಗೆ ಯೂರೋಪಿನಲ್ಲಿ ಇತರ ಕೆಲವು ದೇಶಗಳ ರಾಜರುಗಳು ರೋಮ್ ಮತದ ಪೋಪ್ ಗುರುವಿನ ವಶವರ್ತಿಗಳು. ಈ ಬಗೆಯ ಗಣನೆ ಎಷ್ಟೋ ಹಿಂದಿನಿಂದ ಬೆಳೆದು ಬಂದಿತ್ತು. ಆದರೆ ಹೀಗೆ ರಾಜರುಗಳೂ, ರಾಜ್ಯಾಧಿಕಾರಿಗಳೂ ಯಾವುದೋ ಒಂದು ಮತಧರ್ಮಕ್ಕೆ ವಿಧೇಯರಾಗಿದ್ದಲ್ಲಿ ಅವರ ರಾಜ್ಯದಲ್ಲಿಯ ಇತರ ಮತಧರ್ಮಿಗಳು ತಮಗೆ ಅನ್ಯಾಯ ಅಪಕಾರಗಳು ನಡೆದಾವೆಂದು ಶಂಕೆಪಡುವುದು ಸ್ವಾಭಾವಿಕವಾಗಿದೆ.

ಅನೇಕ ಶತವರ್ಷಗಳ ಅನುಭವದಿಂದ, ರಾಜ್ಯಸಂಸ್ಥೆಯೂ, ಮತಧರ್ಮಸಂಸ್ಥೆಯೂ ಬೆರೆತುಕೊಂಡಿರುವುದು ಯುಕ್ತವಲ್ಲವೆಂದೂ, ಅವೆರಡೂ ಪ್ರತ್ಯೇಕವಾಗಿ ಪರಸ್ಪರ ಸ್ವತಂತ್ರವಾಗಿರುವುದೇ ಎರಡಕ್ಕೂ ಲೇಸೆಂದೂ ಜನ ಜನಾಂಗಗಳಿಗೆ ಕಂಡುಬಂದಿದೆ. ಸ್ವತಂತ್ರವೆಂದರೆ ವಿರೋಧವಲ್ಲ. ರಾಜ್ಯವು ಮತಾಚಾರಕ್ಷೇತ್ರದಲ್ಲಿ ಪ್ರವೇಶಮಾಡತಕ್ಕದ್ದಲ್ಲವೆಂದು ಹೇಳುವುದರಿಂದ ರಾಜ್ಯವೆಂಬುದು ಮತಧರ್ಮಕ್ಕೆ ಶತ್ರುವೆಂದು ಸಿದ್ಧವಾಗುವುದಿಲ್ಲ. ಹಾಗೆಯೇ ಮತಾಧಿಕಾರಿಗಳೂ, ಕುಲಾಚಾರ ಗುರುಗಳೂ ರಾಜಕೀಯ ಕ್ಷೇತ್ರಗಳೆಂದು ಸಿದ್ಧವಾಗುವುದಿಲ್ಲ. ಮನುಷ್ಯನ ಜೀವನೋತ್ಕರ್ಷಗೆ ರಾಜ್ಯವೂ ಬೇಕು, ಮತ ಧರ್ಮವೂ ಬೇಕು. ಆದರೆ ಅವೆರಡೂ ಬೇರೆ ಬೇರೆಯಾಗಿ ತಮ್ಮ ತಮ್ಮ ಕೆಲಸಗಳನ್ನು ನಡೆಸಬೇಕು. ಒಳ್ಳೆಯ ಆಧ್ಯಾತ್ಮಿಕ ಜೀವನಕ್ಕೆ ಸಹಾಯವಾಗುವುದು ಮತಧರ್ಮದ ಕೆಲಸ. ಪರಿಣಾಮದಲ್ಲಿ ಎರಡು ಸಂಸ್ಥೆಗಳ ಫಲಿತಾರ್ಥಗಳೂ ಒಂದುಗೂಡುತ್ತವೆ. ಆದರೆ ಅವೆರಡೂ ಬೇರೆಬೇರೆಯಾಗಿಯೇ ತಮ್ಮ ತಮ್ಮ ವ್ಯಾಪಾರಗಳನ್ನು ನಡಸುತ್ತಿರಬೇಕು. ಹಾಗೆ

ಹುಟ್ಟಿದ್ದು ಕೇವಲ ಲೌಕಿಕ ರಾಜ್ಯದ ಭಾವನೆ.

ನಮ್ಮ ದೇಶದ ಪೂರ್ವಕಾಲದ ರಾಜ್ಯಗಳು ವಾಸ್ತವವಾಗಿ ಲೌಕಿಕ ರಾಜ್ಯಗಳಾಗಿಯೇ ಇದ್ದುವು. ರಾಜನು ವೇದಮತಕ್ಕೆ ಸೇರಿದವನಾಗಿದ್ದರೂ, ಅವನ ಆ ಮತಾನುಸರಣೆಯಿಂದ ಅವನ ಪ್ರಜೆಗಳ ಮತಾಚಾರಗಳಿಗೆ ಯಾವ ಬಾಧೆಯೂ ಉಂಟಾಗುತ್ತಿರಲಿಲ್ಲ. ಬಹು ಹಿಂದಿನ ಪೂರ್ವಕಾಲದಲ್ಲಿ ಸಮಾಜವೆಲ್ಲವೂ ಏಕೈಕ ಮತದ್ದಾಗಿರಬೇಕು. ಅದು ರಾಜ್ಯಸಂಸ್ಥೆಗೆ ಪ್ರಾರಂಭದಶೆಯ ಕಾಲ; ಮತಕ್ಕೂ ಪ್ರಾರಂಭದ ಕಾಲವೇ. ಆಗ ರಾಜನೂ ಪ್ರಜೆಗಳೂ ಮತಾಚಾರದ ದೃಷ್ಟಿಯಿಂದ ಪರಸ್ಪರ ವಿಷಮವಾಗುವ ಕಾರಣವಿದ್ದಿರದು. ರಾಜನಾದವನು, ಬಹುಶಃ ಅವನ ರೂಪಪ್ರಭಾವದ ಕಾರಣದಿಂದಲೋ, ಶೌರ್ಯದ ಕಾರಣದಿಂದಲೋ, ವಾಕ್ಚಾತುರ್ಯದ ಕಾರಣದಿಂದಲೋ, ಇತರ ಗುಣಾತಿಶಯದ ಕಾರಣದಿಂದಲೋ, ಅಸಾಧಾರಣ ಮನುಷ್ಯನೆಂದೂ, ಆದಕಾರಣ ಅವನು ದೇವಾಂಶಪುಷನೆಂದೂ ಇತರರಿಂದ ಗಣಿಸಲ್ಪಟ್ಟವನಾಗಿ, ಹಾಗೆ ತನ್ನ ಜನದ ಗೌರವ, ವಿಧೇಯತೆಗಳಿಗೆ ಪಾತ್ರನಾಗಿದ್ದನು. ಅವನ ಆ ಪ್ರಶಸ್ತಿಯನ್ನು ಪೋಷಿಸುವುದಕ್ಕೆ ಅವನ ಪೋಷಣೆಯಿಂದ ಬದುಕುತ್ತಿದ್ದ ದೈವಜ್ಞರು–ಎಂದರೆ, ಮಂತ್ರತಂತ್ರಗಳಿಂದ ದೇವತೆಗಳನ್ನು ಒಲಿಸಿಕೊಳ್ಳಬಲ್ಲವರು, ಪುರೋಹಿತರಾಗಿಯೂ ಮಂತ್ರಿಗಳಾಗಿಯೂ ಇರುತ್ತಿದ್ದರು. ಹೀಗೆ ರಾಜಮತ ಪ್ರಜಾಮತಗಳು ಒಂದೇ ಆಗಿ ಬೆಳೆಯುತ್ತಿದ್ದುವು.

ಆದರೆ ಮನುಷ್ಯ ಸಮಾಜ ಬೆಳೆದು, ಜನಜೀವನವು ಬಹುಮುಖಗಳನ್ನು ತಾಳಿ, ಅದರ ಅನುಭವಗಳು ವಿಧವಿಧವಾಗಿ ಅಭಿವೃದ್ಧಿ ಹೊಂದಿದಂತೆಲ್ಲಾ ಜನದ ಮನಸ್ಸಿನಲ್ಲಿ ಸಂಶಯಗಳೂ ಸ್ವಾಭಾವಿಕವಾಗಿ ಹುಟ್ಟಿಕೊಳ್ಳುತ್ತ ಬಂದುವು. ಈ ಜನಜಿಜ್ಞಾಸೆಯಿಂದ ಒಂದು ಮತವಿದ್ದಕಡೆ ಕ್ರಮೇಣ ನಾಲ್ಕಾರು ಮತಗಳು ತಲೆದೋರುವಂತಾದುವು. ಅಂಥ ಸ್ಥಿತಿಯಲ್ಲಿ ರಾಜನ ಮತವೂ, ಪ್ರಜೆಯ ಮತವೂ ಎರಡೂ ಒಂದೇ ಆಗಿ ಉಳಿಯುವುದು ಸಾಧ್ಯವಾಗಿದ್ದಿರದು. ಆದರೆ ನಮ್ಮ ದೇಶದ ಹಿಂದಿನ ರಾಜರುಗಳ ವಿಶೇಷ ಗುಣವೇನೆಂದರೆ, ಅವರು ಮತಭೇದದ ಕಾರಣದಿಂದ ತಮ್ಮ ಪ್ರಜಾಸಂಬಂಧದಲ್ಲಿ ಭೇದಕ್ಕೆ ಅವಕಾಶಕೊಡಲಿಲ್ಲವೆಂಬುದು. ಮತಧರ್ಮವೆಂಬುದು ಏನಿದ್ದರೂ ಅತೀಂದ್ರಿಯವಾದ, ಲೋಕಾತೀತವಾದ, ರಹಸ್ಯ ವಸ್ತುವನ್ನು ಅವಲಂಬಿಸಿದ್ದು. ರಾಜ್ಯಸಂಸ್ಥೆಯಾದರೋ ಇಂದ್ರಿಯಗೋಚರವಾದ, ಲೋಕಸ್ಥಿತವಾದ ಪ್ರತ್ಯಕ್ಷ ವಿಷಯಗಳನ್ನು ಅವಲಂಬಿಸಿದ್ದು. ಮತಸಂಸ್ಥೆಗಳಿಗೆ ಭೇದವು ಹೀಗೆ ನೈಜವಾಗಿಯೂ ಆಮೂಲಾಗ್ರವಾಗಿಯೂ ಇರುವುದರಿಂದ, ರಾಜ್ಯ ಧರ್ಮವೆಂಬುದು ಮತಧರ್ಮದಿಂದ ಪ್ರತ್ಯೇಕವಾಗಿ ಇರತಕ್ಕದ್ದೆಂದೂ, ಅವುಗಳಲ್ಲಿ ಒಂದು ಮತ್ತೊಂದಕ್ಕೆ ಕೈಹಚ್ಚುವುದು ಯುಕ್ತವಲ್ಲವೆಂದೂ ನಮ್ಮ ಪೂರ್ವದ ರಾಜರುಗಳು ಗ್ರಹಿಸಿದ್ದರು. ಒಬ್ಬಾನೊಬ್ಬ ಪ್ರಜೆಯ ಮತ ಎಂಥಾದ್ದೇ ಆಗಿರಲಿ, ಅದರಿಂದ ಇತರ ಪ್ರಜೆಯ ಸುಖ ಸಮಾಧಾನಗಳಿಗೆ ಭಂಗವಾಗದೆ ಇದ್ದಪಕ್ಷದಲ್ಲಿ, ಆ ಮತದ ಮತ್ತು ಅದರ ಆಚಾರ ಸಂಪ್ರದಾಯಗಳ ಸಾಧುತ್ವ ಅಸಾಧುತ್ವಗಳ ವಿಚಾರ

ರಾಜ್ಯಕ್ಕೆ ಅಪ್ರಸಕ್ತವಾದ್ದು; ಇತರ ಮತಗಳಿಗೆ ರಕ್ಷಣೆಕೊಟ್ಟಂತೆಯೇ ಆ ಮತಕ್ಕೂ ಸಂರಕ್ಷಣೆ ಕೊಡುವುದು ರಾಜ್ಯದ ಕರ್ತವ್ಯ ಎಂಬ ತತ್ತ್ವವನ್ನು ಆ ರಾಜರುಗಳು ಮನಗಂಡವರಾಗಿದ್ದರು. ಆ ಕಾರಣದಿಂದಲೇ ಸಾಮಾನ್ಯವಾಗಿ, ಎಂದರೆ ಅಲ್ಲೊಂದು ಇಲ್ಲೊಂದು ಸಂದರ್ಭವನ್ನು ಬಿಟ್ಟರೆ, ರಾಜನು ವೈಷ್ಣವನಾಗಿರಲಿ, ಶೈವನಾಗಿರಲಿ, ಜೈನನಾಗಿರಲಿ, ಅವನ ರಾಜ್ಯದಲ್ಲಿ ಶೈವ, ವೈಷ್ಣವ, ಜೈನ, ಬೌದ್ಧ, ಶಾಕ್ತೇಯ, ಕಾಪಾಲಿ ಮೊದಲಾದ ಹತ್ತಾರು ಮತಗಳ ಜನರು ಏಕಪ್ರಕಾರವಾದ ಹಕ್ಕು ಬಾಧ್ಯತೆಗಳುಳ್ಳವರಾಗಿ ಯಾವ ಆತಂಕವೂ ಇಲ್ಲದೆ ಬಕುಕುತ್ತಿದ್ದರು. ರಾಜನ ಮತದಿಂದ ಪ್ರಜೆಯ ಮತಾಂತರಕ್ಕೆ ಧಕ್ಕೆ ತಗಲದೆ, ಪೋಷಣೆಯೇ ದೊರೆಯುತ್ತಿದ್ದದ್ದರ ನಿದರ್ಶನಗಳು ಕನ್ನಡ ದೇಶದಲ್ಲಿಯೇ ಯಥೇಷ್ಟವಾಗಿ ದೊರೆಯುತ್ತವೆ. ಹೊಯ್ಸಳ ವಿಷ್ಣುವರ್ಧನ ರಾಜನ ಕಾಲದಲ್ಲಿ ಜೈನ, ವೈಷ್ಣವ, ಶೈವ ಮತಗಳೂ, ಆ ಮತಗಳಲ್ಲಿ ದ್ವೈತಾ–ದ್ವೈತ ವಿಶಿಷ್ಟಾದ್ವೈತಾದಿ ಅಂತಃಪ್ರಭೇದಗಳೂ ನಿರಾತಂಕವಾಗಿ ಜೀವಿಸುತ್ತಿದ್ದುವು. ರಾಜಾಶ್ರಯ ಅವೆಲ್ಲಕ್ಕೂ ಸಮಾನವಾಗಿ ದೊರಕುತ್ತಿತ್ತು. ವಿಜಯನಗರದ ಕಾಲದಲ್ಲಿಯೂ ಹಾಗೆಯೇ ಇತ್ತೆಂಬುದನ್ನು ಅನೇಕ ಶಿಲಾಶಾಸನಗಳು ಸಾರುತ್ತಿವೆ. ಮೈಸೂರಿನಲ್ಲಿ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರವರು ಅದೇ ಸಂಪ್ರದಾಯವನ್ನು ಕಾಪಾಡಿದ್ದನ್ನು ನಾವು ಕಂಡಿದ್ದೇವೆ. ಹೀಗೆ ಇಂಡಿಯ ದೇಶದಲ್ಲಿ ಪೂರ್ವದಿಂದ ನಡೆದುಕೊಂಡು ಬಂದಿರುವ ರಾಜ್ಯವು ಕಾರ್ಯಪರಿಣಾಮದಲ್ಲಿ ಲೌಕಿಕ ರಾಜ್ಯವೇ. ಅದು ಮತವಿಹೀನ ರಾಜ್ಯವಲ್ಲ. ಸರ್ವಮತ ಸಮಾನರಾಜ್ಯ.

ಹಿಂದಿನ ಕಾಲದ ರಾಜ್ಯಕ್ಕೂ ಈಗ ಇಂಡಿಯ ದೇಶದಲ್ಲಿ ಏರ್ಪಡುತ್ತಿರುವ ರಾಜ್ಯಕ್ಕೂ ಮತದೃಷ್ಟಿಯಿಂದ ವ್ಯತ್ಯಾಸವೇನೆಂದರೆ, ಹಿಂದಿನ ರಾಜ್ಯಗಳಲ್ಲಿ ರಾಜನೆಂಬಾತನೊಬ್ಬನಿರುತ್ತಿದ್ದ; ಆತನ ಮತದ ಹೆಸರನ್ನು ಆತನ ರಾಜ್ಯದ ಹೆಸರಿಗೆ ಅಂಟಿಸುವುದು ವಾಡಿಕೆಯಾಗಿತ್ತು. ಆತನ ಮತಕ್ಕೆ ಸೇರಿದ ಜನರ ಉತ್ಸವ ಸಂಭ್ರಮಗಳಲ್ಲಿ ಹೆಚ್ಚು ವಿಜೃಂಭಣೆ ಕಾಣುತ್ತಿದ್ದಿರಬಹುದು. ಇನ್ನು ಮುಂದಿನ ರಾಜ್ಯದಲ್ಲಿ ರಾಜನು ಇಲ್ಲದಿರುವುದರಿಂದ ಯಾವ ಮತದ ಹೆಸರನ್ನೂ ರಾಜ್ಯದ ಹೆಸರಿಗೆ ಅಂಟಿಸಲು ಕಾರಣವಿಲ್ಲ. ಆದರೂ ಯಾವ ಮತಸ್ಥರ ಸಂಖ್ಯೆ ಹೆಚ್ಚಾಗಿರುತ್ತದೆಯೋ ಅಥವಾ ಯಾವ ಮತದವರಲ್ಲಿ ಹಣ ಹೆಚ್ಚಾಗಿರುತ್ತದೆಯೋ ಅವರ ಉತ್ಸವ ಸಂಭ್ರಮಗಳಲ್ಲಿ ಹೆಚ್ಚಿನ ವಿಜೃಂಭಣೆ ಕಾಣಬರುವುದು ಇನ್ನುಮುಂದೆಯೂ ಸ್ವಾಭಾವಿಕವಾಗಿಯೇ ಇರುತ್ತದೆ.

ಆದರೆ ನಾವು ವಿಚಾರಮಾಡಬೇಕಾದದ್ದು ಉತ್ಸವಕಾಲದ ವಿಜೃಂಭಣೆಗಳನ್ನಲ್ಲ. ಜನಕ್ಕೆ ರಾಜ್ಯದ ಶಾಸನ ವಿಧಿಗಳಿಂದಲೂ, ಕಾರ್ಯಯುಕ್ತಿಗಳಿಂದಲೂ ಆಗುವ ಫಲಾಫಲಗಳಲ್ಲಿ ಮತಭೇದಿಂದ ಪ್ರಯೋಗಭೇದವೇನಾದರೂ ಆಗುತ್ತಿದೆಯೆ? ಮತದ ಕಾರಣದಿಂದ ರಾಜ್ಯದ ಕರಣಗಳು ಪಕ್ಷಪಾತವನ್ನೇನಾದರೂ ಮಾಡುತ್ತಿವೆಯೆ? ಎಂಬುದು. ಈ ಪ್ರಶ್ನೆಯ ದೃಷ್ಟಿಯಿಂದ ನೋಡಿದರೆ ಇಂಡಿಯದ ಹೊಸ ರಾಜ್ಯವ್ಯವಸ್ಥೆ ನ್ಯಾಯ ಸಮ್ಮತವಾದದ್ದೆಂದು ಎಲ್ಲರೂ ಅಂಗೀಕಾರ ಮಾಡಬೇಕಾಗುತ್ತದೆ.

ದೇಶದಲ್ಲಿರುವ ಹತ್ತಾರು ಮತಗಳಲ್ಲಿ ಯಾವ ಒಂದಕ್ಕಾಗಲಿ ಮಿಕ್ಕವಕ್ಕಿಂತ ಹೆಚ್ಚಿನ ಪುರಸ್ಕಾರ ಈ ರಾಜ್ಯದಿಂದ ದೊರೆಯತಕ್ಕದ್ದಾಗಿಲ್ಲ. ಯಾವ ಒಂದು ಮತಕ್ಕೂ ತಿರಸ್ಕಾರವೂ ಇದರಿಂದ ಆಗಲಾರದು. ರಾಜ್ಯಶಾಸನ ದೃಷ್ಟಿಯಲ್ಲಿ ಎಲ್ಲ ಮತಗಳೂ ಒಂದೇ ಸ್ಥಾನದಲ್ಲಿರತಕ್ಕವು. ಯಾವ ಮತವೂ ರಾಜ್ಯದ್ದಲ್ಲವೆಂದರೆ ಏನು ಅರ್ಥವೋ. ಎಲ್ಲ ಮತಗಳೂ ರಾಜ್ಯದ್ದೆಂದರೂ ಅದೇ ಅರ್ಥ. ನಮ್ಮ ಈಗಿನ ಲೌಕಿಕ ರಾಜ್ಯ ಹಿಂದಿನ ಸರ್ವಮತ ಸಮಾನ ರಾಜ್ಯದ ಒಂದು ರೂಪ.

ಇಂಗ್ಲೆಂಡ್ ಮೊದಲಾದ ಹಳೆಯ ಪಾಶ್ಚಾತ್ಯ ರಾಜ್ಯಗಳಲ್ಲಿ ಲೌಕಿಕ ರಾಜ್ಯದ ಆದರ್ಶವು ಬಹುಮಟ್ಟಿಗೆ ಅಂಗೀಕೃತವಾಗಿದೆ. ಆದರೂ ಅದು ಇನ್ನೂ ಎಲ್ಲ ರಾಜ್ಯ ಸಂದರ್ಭಗಳಲ್ಲಯೂ ರೂಪುಗೊಂಡಿಲ್ಲ. ಹಿಂದಿನ ಏಕಮತ ಪ್ರಾಬಲ್ಯದ ಗುರುತುಗಳು ರಾಜ ಪದವಿಯ ಕೆಲವು ಸಂಪ್ರದಾಯ ನಿಯಮಗಳಲ್ಲಯೂ, ಇನ್ನು ಕೆಲವು ಅಧಿಕಾರಸ್ಥಾನಗಳ ಆಚಾರ ವಿಧಿಗಳಲ್ಲಿಯೂ ಕೊಂಚ ಕಾಣಬರುತ್ತಿವೆ. ಆದರೆ ಇವು ಕೇವಲ ನಾಮ ಮಾತ್ರದ ಅವಶೇಷಗಳು; ಕಾರ್ಯದಲ್ಲಿ ಅವು ಫಲಿಸಬಲ್ಲುವಾಗಿಲ್ಲ. ಭಿನ್ನ ಭಿನ್ನ ಮತಗಳ ಪ್ರಜೆಗಳಿಗೆ ಈ ಪೂರ್ವ ಮತಾವಶೇಷಗಳಿಂದ ಯಾವ ತೊಂದರೆಯೂ ಉಂಟಾಗುತ್ತಿಲ್ಲ. ಇಂದಿನ ರಷ್ಯ ಮೊದಲಾದ ಹೊಸ ರಾಜ್ಯಗಳಲ್ಲಿಯಾದರೋ, ಮತದ ಪ್ರಸಕ್ತಿ ಎಷ್ಟು ಮಾತ್ರವೂ ಇಲ್ಲ. ಏಷ್ಯ ಖಡದ ಟರ್ಕಿ ಮೊದಲಾದ ಕೆಲವು ಹೊಸ ರಾಜ್ಯಗಳಲ್ಲಿ ಸಹ ರಾಜ್ಯವ್ಯವಹಾರಗಳಲ್ಲಿ ಮತದ ಪ್ರಸಕ್ತಿ ಇಲ್ಲವೆಂದು ಹೇಳುತ್ತಾರೆ.

ಒಟ್ಟಿನಮೇಲೆ, ನಮ್ಮ ರಾಜಕೀಯದೊಳಕ್ಕೆ ಮತಾಚಾರ ಕುಲಾಚಾರ ಮೊದಲಾದ ಅಪ್ರಸಕ್ತ ವಿಷಯಗಳ ಪ್ರವೇಶವಿಲ್ಲದೆ ಇರುವುದು ಮತಸಂಸ್ಥೆಗೂ ಒಳ್ಳೆಯದು; ರಾಜ್ಯ ಸಂಸ್ಥೆಗಂತೂ ಬಹಳ ಅವಶ್ಯವಾದದ್ದು. ಮತಧರ್ಮದ ಉಪಕಾರ ರಾಜ್ಯಕ್ಕೆ ಏನಿದ್ದರೂ ಪರೋಕ್ಷವಾಗಿ ನಡೆಯಬೇಕಾದದ್ದು. ಮತಧರ್ಮವು ಜನರ ಶೀಲಸ್ವಭಾವಗಳನ್ನು ಪರಿಶುದ್ಧಿಗೊಳಿಸಿ ಅವರ ನಯನೀತಿಗಳನ್ನು ಉತ್ತಮಪಡಿಸಲಿ. ಪ್ರಜೆ ಹಾಗೆ ಸುಸಂಸ್ಕೃತರಾಗಿದ್ದಲ್ಲಿ, ಅವರ ನೀತಿಬಲವೇ ಪ್ರಜಾರಾಜ್ಯಕ್ಕೆ ಒಂದು ದೊಡ್ಡ ಸಂಪತ್ತಾಗುತ್ತದೆ. ರಾಜ್ಯವು ನಾನಾ ಮತಗಳಿಗೆ ಕೊಡುವ ಸಂರಕ್ಷಣೆಗೆ ಪ್ರತ್ಯುಪಕಾರವಾಗಿ ಆ ಮತಗಳು ಸಲ್ಲಿಸಬಲ್ಲ ಸೇವೆ ಯಾವುದೆಂದರೆ, ಪ್ರಜೆಗೆ ಅವು ಮಾಡಿಸಬಲ್ಲ ನೀತಿ ಸಂಸ್ಕಾರ.

* * *

-: ವೇದದಲ್ಲಿಯ ಮುತ್ತುಗಳು :-

ವಿಶ್ವಾಮಿತ್ರ - ನದಿ ಸಂವಾದ

- ವಿನೋಬಾ

ಅರ್ಹನ್ನಿದಂ ದಯಸೆ ವಿಶ್ವಂಭವಂ

ಈ ತುಚ್ಛ ಜಗತ್ತಿನ ಮೇಲೆ ತುಚ್ಛ ವಿಶ್ವದ ಮೇಲೆ ನೀನು ದಯೆ ಇಡುತ್ತ ಹೋಗು. ಆಗ ವಿಶ್ವಕ್ಕೆ ಒಳ್ಳೆಯದಾಗುವುದು.

* * *

ಹಿಂದಿನ ಕಾಲದಲ್ಲಿ ಸಹೋದರಿಯರು ನೇಯುತ್ತಿದ್ದರು. ಗೃತ್ಸಮದ ಋಷಿ ನೇಕಾರ್ತಿಯರ ಜೀವನ ಕಾವ್ಯದ ವರ್ಣನೆ ಮಾಡಿದ್ದಾನೆ.

ಪುನಃ ಸಮವ್ಯದ್ ವಿತತಂ ವಯಂತೀ
ಮಧ್ಯಾ ಕರ್ತೋರ್ ನಧಾಚ್ಛಕ್ಮ ಧೀರಃ

ಸಾಯಂಕಾಲ ಸೂರ್ಯ ತನ್ನ ಕಿರಣಗಳನ್ನು ಹೇಗೆ ಕ್ರೂಢೀಕರಿಸಿಕೊಳ್ಳುತ್ತಾನೊ ಅದೇ ರೀತಿ ನೇಕಾರ್ತಿ ಕೂಡ ತನ್ನ ಅರ್ಧ ನೇಯ್ಗೆಯ ತಂತುಗಳನ್ನು ಮಡಚಿಕೊಳ್ಳುತ್ತಾಳೆ. ವಯಂತೀ ಶಬ್ದ ಸ್ತ್ರೀಲಿಂಗ. ಅದರ ಅರ್ಥ ನೇಕಾರ್ತಿ.

ಋಷಿ ಸರಸ್ವತಿಯ ಪ್ರಶಂಸೆ ಮಾಡುತ್ತಿದ್ದಾರೆ:-

ಅಂಬಿತಮೆ ನದೀತಮೆ ಸರಸ್ವತಿ
ಅ ಪ್ರಶಸ್ತಾ ಇವಸ್ಮಸಿ ಪ್ರಶಸ್ತಿ ಮಂಬ ನಸ್ ಕೃಧಿ

ಹೇ, ಸರ್ವೋತ್ತಮ ಮಾತೆಯೇ, ಸರಸ್ವತಿಯೇ ನೀನು ಸರ್ವೋತ್ತಮ ನದಿಯಂತೆ ಇದ್ದೀಯೆ. ಪ್ರಕಟವಾಗಿ ಹರಿಯುವ ಗಂಗಾ-ಯಮುನಾ ನದಿಗಳು ಉತ್ತಮವಾಗಿವೆ. ಆದರೆ ನಿನ್ನ ಪ್ರವಾಹ ಗುಪ್ತವಾಗಿದೆ. ಆದ್ದರಿಂದ ನೀನು ಸರ್ವೋತ್ತಮ. ನೀನು ಎಲ್ಲ ದೇವತೆಗಳಲ್ಲಿ ಶ್ರೇಷ್ಠ ಮತ್ತು ಪ್ರಕಾಶ ಕೊಡುವವಳು. ನಮ್ಮ ಜೀವನವು ಅಪ್ರಶಸ್ತವಾಗಿದೆ. ಹೇ ಮಾತೆ ನೀ ಅದನ್ನು ಪ್ರಶಸ್ತಗೊಳಿಸು. ನಾವು 'ನೆಗ್ಲೆಟೆಡ್ಸ್'. ನಿಂದಿತ ಉಪೇಕ್ಷಿತರಾಗಿದ್ದೇವೆ. ಹೇ ಮಾತೆ, ನೀನು ನಮ್ಮ ಪ್ರಶಸ್ತಿ ಮಾಡು.

* * *

ಯುವಾ ಸುವಾಸಾಃ ಪರಿವೀತ ಆಗಾತ್
ಸ ಉ ಶ್ರೇಯಾನ್ ಭವತಿ ಜಾಯಮಾನಃ

ಮಗು ಬಟ್ಟೆ ಧರಿಸಿದಾಗ ಸಭ್ಯವಾಗುತ್ತದೆ. ಅದಕ್ಕೆ ಸಂಸ್ಕಾರ ದೊರೆಯುತ್ತದೆ. ಬಟ್ಟೆ ಸಭ್ಯತೆಯ ಗುರುತಾಗಿದೆ. ಅನ್ನ ಮೊದಲವಸ್ತು ಎಂದೂ, ಬಟ್ಟೆ

ಎರಡನೆಯದೆಂದೂ ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ ವಿಷಯ ಹೀಗಲ್ಲ. ಬಟ್ಟೆ ಮೊದಲನೆಯ ವಸ್ತು. ನಾನು ನಾಲ್ಕು ದಿನ ಹಸಿವೆಯಿಂದ ಇರಬಲ್ಲೆ. ಆದರೆ ಬಟ್ಟೆ ಬೇಕೇಬೇಕು. ಬಟ್ಟೆ ಇಲ್ಲದೆ ಒಂದು ದಿನ ಕೂಡ ನಡೆಯುವುದಿಲ್ಲ.

ಅಗ್ನಿರಸ್ಮಿ ಜನ್ಮನಾ ಜಾತವೇದಾಃ ಘೃತಂ ಮೆ ಚಕ್ಷುರಮೃತಂ ಮ ಆಸನ್

ನಾನು ಹುಟ್ಟುವಾಗಲೇ ಅಗ್ನಿಯಾಗಿಯೇ ಹುಟ್ಟಿದೆ. ನನ್ನ ಕಣ್ಣುಗಳಲ್ಲಿ ತುಪ್ಪ ಇದೆ ಮತ್ತು ಬಾಯಲ್ಲಿ ಮಧು ಇದೆ. ನನ್ನ ಕಣ್ಣಲ್ಲಿ ತುಪ್ಪ ಇದೆ ಎಂದು ವಿಶ್ವಾಮಿತ್ರ ಹೇಳುವ ಮಾತಿನ ಅರ್ಥ ಕಣ್ಣುಗಳಲ್ಲಿ ಯಾವುದೇ ಪ್ರಕಾರದ ಪಾಪವನ್ನು ಗ್ರಹಣ ಮಾಡದಷ್ಟು ಶಕ್ತಿ ಇದೆ. ಏಕೆಂದರೆ ಕಣ್ಣುಗಳು ಅಷ್ಟು ಪವಿತ್ರವಾಗಿವೆ. ಅವು ಅತ್ಯಂತ ನಿರ್ಮಲ ಮತ್ತು ಸ್ವಚ್ಛ. ಕಣ್ಣುಗಳಿಂದ ಮಾತನಾಡುವಷ್ಟು ನಾವು ಬಾಯಿಂದ ಮಾತನಾಡುವುದಿಲ್ಲ. ನಮಗೆ ಕೋಪ ಬಂದಾಗ ಕಣ್ಣುಗಳು ಮಾತನಾಡುತ್ತವೆ. ಒಳಗೆ ಕರುಣೆ ಇದ್ದರೆ ಕಣ್ಣುಗಳು ಮಾತನಾಡುತ್ತವೆ. ಶಬ್ದಗಳಿಗಿಂತ ಹೆಚ್ಚು ಬೆಳಕನ್ನು ಕಣ್ಣು ಕೊಡುತ್ತದೆ. ನನ್ನ ಎಂಟೂವರೆ ವರ್ಷದ ಯಾತ್ರೆಯಲ್ಲಿ ಇಷ್ಟೊಂದು ಪ್ರಾಚೀನ ಸ್ಥಾನಗಳಿಗೆ ಎಂದೂ ಬಂದಿರಲಿಲ್ಲ. ಈ ಪೃಥ್ವಿ ಎರಡು ನೂರು ಕೋಟಿ ವರ್ಷದ್ದಿದೆ. ಆದ್ದರಿಂದ ನಾನು ಎಲ್ಲಿಯೇ ಹೆಜ್ಜೆ ಇಟ್ಟರೂ ಅದು ಪ್ರಾಚೀನ ಸ್ಥಾನವೇ ಆಗಿರುತ್ತದೆ. ಆದರೆ ಈ ಪ್ರಾಚೀನ, ಅರ್ವಾಚೀನ ಇತ್ಯಾದಿ ನಾವಾಡುವ ಮಾತುಗಳು ಇತಿಹಾಸದ ದೃಷ್ಟಿಯಿಂದ ಮಾತನಾಡುವಂಥವು. ಇಂದು ನಾವು ಕುಳಿತಿರುವ ಈ ಸ್ಥಾನದ ವಿಷಯ ವೇದದಲ್ಲಿ ಬರುತ್ತದೆ. ಅಂದರೆ ಈ ಸ್ಥಾನ ಹತ್ತು ಸಾವಿರ ವರ್ಷಗಳಿಗಿಂತಲೂ ಹಳೆಯದಾಗಿರಬೇಕು. ಕಾಶಿ ಮತ್ತು ಕುರುಕ್ಷೇತ್ರ ಕೂಡ ಹಳೆಯ ಸ್ಥಾನಗಳು. ಭಗವದ್ಗೀತೆಯಲ್ಲಿ ಎರಡೂ ಸ್ಥಾನಗಳ ಪ್ರಸ್ತಾಪ ಬರುತ್ತದೆ. ಐತಿಹಾಸಿಕ ದೃಷ್ಟಿಯಿಂದ ನನ್ನ ನಕ್ಷೆಯಲ್ಲಿ ಎಲ್ಲಕ್ಕಿಂತ ಹಳೆಯ ನಗರ ಕಾಶಿ. ಆದರೆ ಕಾಶಿಯ ಉಲ್ಲೇಖ ವೇದದಲ್ಲಿ ಬರುವುದಿಲ್ಲ. ವೇದದಲ್ಲಿ ಸ್ಪಷ್ಟವಾಗಿ ಉಲ್ಲೇಖಗೊಳ್ಳುವಂಥ ಸ್ಥಾನ ಇದಾಗಿದೆ. ವೇದದಲ್ಲಿ ರೂಮೇ ರೂಷ್ಮಮೇ ಇತ್ಯಾದಿಗಳ ಪ್ರಸ್ತಾಪ ಬರುತ್ತದೆ. ಆಧುನಿಕರು ಇವುಗಳನ್ನು ರೋಮ್ ಮತ್ತು ರಷಿಯಾ ಎಂದೆಲ್ಲ ಹೇಳುತ್ತಾರೆ. ಆದರೆ ಈ ಬಗ್ಗೆ ನಿಶ್ಚಿತವಾಗಿ ನಾನು ಏನೂ ಹೇಳಲಾರೆ. ವೇದದ ಯಾವ ಭಾಗದಲ್ಲಿ ರೂಷ್ಮಮೆಯ ಪ್ರಸ್ತಾಪ ಬರುತ್ತದೋ ಅದು ಹೋಲಿಕೆಯ ದೃಷ್ಟಿಯಿಂದ ಅರ್ವಾಚೀನ ಎಂದು ತಿಳಿಯಲಾಗುತ್ತದೆ.

ನಾಲ್ಕು ವೇದಗಳಲ್ಲಿ ಅತಿ ಹೆಚ್ಚು ಪ್ರಾಚೀನವಾದುದು ಋಗ್ವೇದ. ಅದರಲ್ಲಿ ಭಗವಂತನ ಸ್ತುತಿ ಮಾಡುವ ಮಂತ್ರಗಳಿವೆ. ಇವುಗಳನ್ನು ಸೂಕ್ತವೆಂದು ಕರೆಯಲಾಗುತ್ತದೆ. ವೇದದಲ್ಲಿ ಭಗವಂತನ ಸ್ತುತಿಯ ಹೊರತಾಗಿ ಇನ್ನು ಯಾವ ವಿಷಯವಿಲ್ಲ. ಉದಾಹರಣೆಗೆ ಹಳೆ ಒಡಂಬಡಿಕೆಯಲ್ಲಿ ಪಾಮ್ಸ್ ಬರುವಂತೆ. ಅವು ಭಗವಂತನ ಸ್ತೋತ್ರಗಳೇ ಆಗಿವೆ. ಭಗವಂತನ ಸ್ತುತಿಗೆ ಸಂಬಂಧಿಸಿದ ಅತಿ ಪ್ರಾಚೀನ ಗ್ರಂಥ ವೇದವೆಂದು ತಿಳಿಯಲಾಗಿದೆ. ಬಹುಶಃ ವೇದ ಜಗತ್ತಿನ ಮೊಟ್ಟ ಮೊದಲನೆಯ ಗ್ರಂಥವಾಗಿರಬಹುದು. ಋಗ್ವೇದದಲ್ಲಿ ೧೦೨೮ ಸೂಕ್ತಗಳಿವೆ. ಇವು ಹತ್ತು ಮಂಡಲಗಳಲ್ಲಿ ಹಂಚಲ್ಪಟ್ಟಿವೆ. ಅವುಗಳಲ್ಲಿ ಎರಡು, ಮೂರು, ನಾಲ್ಕು ಮತ್ತು

ಐದನೆಯ ಮಂಡಲಗಳು ಬಹುಶಃ ಅತಿ ಹೆಚ್ಚು ಪುರಾತನ ಮಂಡಲಗಳಾಗಿವೆ. ಇದು ಸಂಶೋಧಕರ ಅಭಿಪ್ರಾಯ. ಇದು ನನಗೂ ಸಹ ಒಪ್ಪಿಗೆ. ಆರು ಮತ್ತು ಏಳನೇ ಮಂಡಲಗಳು ಕೂಡ ಹಳೆಯದಾಗಿವೆ. ಆದರೆ ಅಷ್ಟು ಹಳೆಯದಲ್ಲ. ಒಂದು, ಎಂಟು, ಒಂಭತ್ತು ಮತ್ತು ಹತ್ತು ಈ ಮಂಡಲಗಳು ಒಂದು ಲೆಕ್ಕಾಚಾರದ ಪ್ರಕಾರ ಅರ್ವಾಚೀನ. ಋಗ್ವೇದದ ಮೂರನೇ ಮಂಡಲದಲ್ಲಿ ೩೫ ಸೂಕ್ತಗಳಿವೆ. ಇದರ ಹೆಸರು 'ವಿಶ್ವಾಮಿತ್ರ - ನದಿ - ಸಂವಾದ'. ಇದು ಹತ್ತು ಸಾವಿರ ವರ್ಷಗಳಷ್ಟು ಹಳೆಯ ಸೂಕ್ತವಾಗಿದೆ. ವಿಶ್ವಾಮಿತ್ರ ಭಾರತೀಯರನ್ನು ಕರೆದುಕೊಂಡು ನದಿ ದಾಟಲು ಬಯಸುತ್ತಾರೆ. ನದಿಯಲ್ಲಿ ಪ್ರವಾಹ ಬಂದಿದೆ. ಆದ್ದರಿಂದ ವಿಶ್ವಾಮಿತ್ರ ನದಿಗೆ ಹೀಗೆ ಪ್ರಾರ್ಥಿಸುತ್ತಾರೆ:- "ನನ್ನ ತಾಯಿಯೇ, ನೀನು ನನಗಾಗಿ ನಿಂತು ಬಿಡು ಮತ್ತು ನನಗೆ ದಾರಿ ಕೊಡು." ಆಗ ನದಿ ಉತ್ತರಿಸುತ್ತದೆ, "ಯಾವ ರೀತಿ ತಾಯಿ ಮಗುವಿಗಾಗಿ ಬಾಗುತ್ತಾಳೊ ಅಥವಾ ಯಾವ ರೀತಿ ಕನ್ಯೆ ತಂದೆಯ ಸೇವೆಗಾಗಿ ಬಾಗುತ್ತಾಳೊ ಆ ರೀತಿ ನಾನು ನಿನಗಾಗಿ ಬಾಗುತ್ತೇನೆ." ಹೀಗೆ ಹೇಳಿ ನದಿ ಬಾಗಿತು ಮತ್ತು ವಿಶ್ವಾಮಿತ್ರ ದಾಟಿ ಹೋದರು. ಇದರಲ್ಲಿ ವಿಶ್ವಾಮಿತ್ರ ಮಾತನಾಡುತ್ತಿದ್ದಾರೆ ಮತ್ತು ನದಿ ಅದಕ್ಕೆ ಉತ್ತರ ಕೊಡುತ್ತಿದೆ. ಕಾವ್ಯದ ದೃಷ್ಟಿಯಿಂದ ಅದು ಅದ್ಭುತವಾದ ಸಮಯ ಕಾವ್ಯವಾಗಿದೆ. ನಾನು ಋಗ್ವೇದ ಓದಿದಾಗಿನಿಂದಲೂ ಬ್ಯಾಸ ಮತ್ತು ಸಟ್ಲೆಜ್‌ಗಳ ಸಂಗಮಗಳ ಸ್ಥಾನವನ್ನು ತಿಳಿದಿದ್ದೆ. ವಿಶ್ವಾಮಿತ್ರ ಇಲ್ಲಿಗೆ ಬಂದಿದ್ದರ ಪ್ರಸ್ತಾಪ ವೇದದಲ್ಲಿ ಬರುತ್ತದೆ. ವೇದವನ್ನು ಓದುವಂಥವರಿಗೆ ಮಾತ್ರ ಈ ವಿಷಯ ಗೊತ್ತಿದೆ. ಉಳಿದಂತೆ ಬೇರೆಯವರಿಗೆ ಇದು ನಮ್ಮ ಸಂಸ್ಕೃತಿ ದೃಷ್ಟಿಯಿಂದ ಒಂದು ಪವಿತ್ರಸ್ಥಾನವೆಂದು ಗೊತ್ತಿಲ್ಲ. ಹೊರಗೆ ಸ್ಥೂಲ ಜಗತ್ತು ಕಾಣುತ್ತದೆ. ದರ್ಶನ ಸಮಗ್ರವಾಗಿ ಒಳಗಿರುತ್ತದೆ. ಆದರೂ ಕೂಡ ನನಗೆ ಈ ಮೂಲಕವೇ ಹೋಗ ಬೇಕಾಗಿತ್ತು. ಆದ್ದರಿಂದ ನನ್ನ ಸ್ವಇಚ್ಛೆಯಿಂದ ಇಂದಿನ ಬಿಡದಿಯನ್ನು ಇಲ್ಲಿ ಏರ್ಪಡಿಸಲಾಯಿತು.

* * *

ಸೂಕ್ತ ಸ್ತುತಿಯೊಂದಿಗೆ ಆರಂಭವಾಗುತ್ತದೆ.

ಪ್ರ ಪರ್ವತಾನಾಮುಶತಿ ಉಪಸ್ಥಾದಶ್ವೆ ಇವಂ ವಿಷಿತೆ ಹಾಸಮಾನೇ
ಗಾವೇವ ಶುಭ್ರೆ ಮಾತರಾ ರಿಹಾಣೆ ವಿಪಾಟ್ ಚ್ಛು ತುದ್ರೀ ಪಯಸಾ ಜವೇತೆ

ನನ್ನ ಈ ಇಬ್ಬರೂ ಮಾತೆಯರು ಪರ್ವತಗಳ ಅಪ್ಪುಗೆಯಿಂದ ಹೊರ ಬಂದು ಬಹು ಪ್ರೀತಿಯಿಂದ ಓಡುತ್ತಿದ್ದಾರೆ. ಪರ್ವತ ಇಲ್ಲಿಂದ ಬಹು ದೂರವಿದೆ. ಆದರೆ ಅವರಿಗೆ ಈ ನದಿಗಳು ಪರ್ವತದ ಅಪ್ಪುಗೆಯಿಂದ ಬರುತ್ತಿವೆಯೆಂದು ಅನಿಸುತ್ತದೆ. ಇಂದು ಈ ರೀತಿ ಅನಿಸುವುದಿಲ್ಲ. ಇದರ ಅರ್ಥ ಆ ಕಾಲದಲ್ಲಿ ನದಿಗಳು ವೇಗವಾಗಿ ಹರಿಯುತ್ತಿದ್ದಿರಬಹುದು. ಕಾಲುವೆಗಳ ಕಾರಣದಿಂದ ಈಗ ನದಿಯ ಆ ರೂಪ ಇಲ್ಲ. ಮಳೆಯ ಕಾರಣದಿಂದ ಆ ಕಾಲದಲ್ಲಿ ನದಿಗಳಲ್ಲಿ ಬಲವಾದ ಪ್ರವಾಹ ಬಂದಿರಬಹುದು. ಆದ್ದರಿಂದ ಅವರಿಗೆ ಪರ್ವತದ ಸ್ಮರಣೆ ಆಗಿರಬಹುದು! ಯಾವ ರೀತಿ ಇಬ್ಬರು ವಾತ್ಸಲ್ಯ ಪೂರ್ಣ ಮಾತೆಯರು ಅಥವಾ ಎರಡು ತಾಯಿ ಕುದುರೆಗಳು ನೆಗೆಯುತ್ತಾ, ಕೂಗುತ್ತಾ, ಹಾರುತ್ತಾ ತಮ್ಮ ಮರಿಗಳೊಂದಿಗೆ ಸೇರಲು

ಓಡುತ್ತಿವೆಯೆಂದು ಋಷಿಗಳು ಮುಂದೆ ವರ್ಣಿಸಿದ್ದಾರೆ. ಈ ರೀತಿ ಎರಡು ನದಿಗಳು ಓಡುತ್ತಿವೆ. ಅವುಗಳಲ್ಲಿಯ ಓಡುವ ವೇಗವನ್ನು ತಿಳಿಸುವುದಕ್ಕಾಗಿ ಹೆಣ್‌ಗುದುರೆಗಳನ್ನು ಜ್ಞಾಪಿಸಿಕೊಳ್ಳಲಾಗಿದೆ. ವಾತ್ಸಲ್ಯ ಭಾವವನ್ನು ತಿಳಿಸುವುದಕ್ಕಾಗಿ ಗೋಮಾತೆಯನ್ನು ಸ್ಮರಿಸಿಕೊಳ್ಳಲಾಗಿದೆ. ನದಿಗೆ ಯಾವಾಗಲೂ ಹಸುವಿನ ಉಪಮೆಯನ್ನು ಕೊಡಲಾಗುತ್ತದೆ. ಹೀಗೆ ನದಿಯ ಸ್ತುತಿ ಮಾಡಿ ವಿಶ್ವಾಮಿತ್ರ ಪ್ರಾರ್ಥನೆ ಮಾಡುತ್ತಾರೆ. ಅದು ಅದ್ಭುತವಾಗಿದೆ:-

ರಮಧ್ವಂ ಮೆ ವಚಸೆ ಸೋಮ್ಯಾಯ ಋತಾ ವರೀ ರೂಪ
ಮಹೋರ್ತ ಮೆ ವೈಃ

ನನ್ನ ಸೌಮ್ಯ, ಮಧುರ, ನಮ್ರ ಧ್ವನಿ ಕೇಳಿ ನೀನು ಸ್ವಲ್ಪ ನಿಲ್ಲು ಅಥವಾ ಶಾಂತವಾಗು. ನೀನು ಸತ್ಯದ ಕಡೆಗೆ ಓಡುತ್ತಲಿದ್ದೀಯೆ. ಸತ್ಯಗಾಮಿನಿ ಇದ್ದೀಯೆ. ಸತ್ಯ ಶೋಧನೆ ಮಾಡುತ್ತಿದ್ದೀಯೆ. ನಿನ್ನ ಸತ್ಯ ಶೋಧನೆ ನಡೆಯುತ್ತಲೇ ಇರುವುದು. ಆದರೆ ನನ್ನ ನಮ್ರ ಧ್ವನಿ ಕೇಳಿ ಒಂದು ಮುಹೂರ್ತದ ಮಟ್ಟಿಗೆ ಶಾಂತಳಾಗು. ಮುಹೂರ್ತವೆಂದರೆ ೪೮ ನಿಮಿಷ. ಆಗ ನದಿ ಅನ್ನುತ್ತದೆ:-

ಇಂದ್ರೋಂ ಅಸ್ಮಾ ಅರದದ್ ವಜ್ರ ಬಾಹುರಪಾಹನ್ ವೃತ್ರಂ ಪರಿಧಿಂ
ದೇವೋನಯತ್ ಸವಿತಾ ಸುಪಾಣಿ ಸ್ತಸ್ಯ ನದೀನಾಮ್ ವಯಂ ಪ್ರಸವೇ ಯಾಮಉರ್ವೀಃ

ನಾವು ಭಗವಂತನ ಆಜ್ಞೆಯಿಂದ ಹರಿಯುತ್ತೇವೆ. ಭಗವಂತ ಬೇರೊಂದು ಆಜ್ಞೆ ಕೊಡುವವರೆಗೂ ನಾವು ಹರಿಯುತ್ತಲೇ ಹೋಗಬೇಕು. ನಿಸರ್ಗ ನಮಗೆ ಕೊಟ್ಟಿರುವ ಪ್ರೇರಣೆ ಎಂದೂ ನಿಲ್ಲಲಾರದು.

* * *

ಓ ಷು ಸ್ವಸಾರಃ ಕಾರವೆ ಷುಣೋತ ಯಯೌ ವೊ ದೂರಾದನಸಾ ರಥೇನ
ನೀ ಷೂ ನಮಧ್ವಂ ಭವತಾ ಸುಪಾರಾಃ ಅದೋಕ್ಷಾಃ ಸಿಂಧವಃ ಸ್ರೋತ್ಯಾಭಿಃ

ನಾನು ಭಾರತೀಯರನ್ನು ಕರೆದುಕೊಂಡು ಹೋಗುತ್ತಿದ್ದೇನೆ. ಆದ್ದರಿಂದ ನೀನು ಕೊಂಚ ಬಗ್ಗು. ಮೊದಲು 'ರಮಧ್ವಂ' ಅಂದರೆ ನಿಲ್ಲು ಎಂದು ಹೇಳಿದ್ದ. ಈಗ ಅವನು ನಮಧ್ವಂ ಅಂದರೆ ಬಾಗು ಎಂದು ಹೇಳುತ್ತಾನೆ. ಹೇ ನದಿ ನೀನು ಬಗ್ಗು ಮತ್ತು ನನಗಾಗಿ 'ಸುಪರಾ' ಆಗು. ಹರಿಯುತ್ತಿರುವ ನಿನ್ನ ಪ್ರವಾಹ ಹರಿಯುತ್ತಿರಲಿ ಆದರೆ ನನ್ನ ಗಾಡಿಯ ಅಕ್ಷದ ಕೆಳವರೆಗೆ ನೀನು ಬಾಗಿದಲ್ಲಿ ನನ್ನ ಗಾಡಿ ಹೊರಟು ಹೋಗುವುದು. ಮುಂದೆ ವಿಶ್ವಾಮಿತ್ರ "ನಾನು ಕೌಶಿಕ ಗೋತ್ರದವನು. ನನ್ನ ಹೆಸರು ವಿಶ್ವಾಮಿತ್ರ" ಎಂದು ಹೇಳುತ್ತಾನೆ. ನಾನು ಬಾಲ್ಯದಲ್ಲಿ "ಕೌಶಿಕ ಗೋತ್ರ ತ್ವ ನಃ ಆಹಂ" ಎಂದು ಹೇಳುತ್ತಿದ್ದೆ. ನಂತರ ನದಿಗಳು "ನಮಗೆ ಇಂದ್ರ ಜನ್ಮಕೊಟ್ಟ ಮತ್ತು ಸವಿತಾ ದೇವನ ಪ್ರೇರಣೆಯಿಂದ ಓಡುತ್ತಲಿದ್ದೇವೆ" ಎಂದು ಹೇಳಿದವು. "ನಿಮಗೆ ಇಂದ್ರ ಜನ್ಮ ಕೊಟ್ಟದ್ದಕ್ಕಾಗಿ ನಾನು ಇಂದ್ರನಿಗೆ ತುಂಬಾ ಆಭಾರಿಯಾಗಿದ್ದೇನೆ. ನಿಮಗೆ ಅವನು ಓಡುವ ಆಜ್ಞೆ ಕೊಟ್ಟದ್ದಕ್ಕಾಗಿ ಭಗವಾನ್ ಇಂದ್ರನ ಸ್ತುತಿಯನ್ನು ನಿರಂತರ ಮಾಡುತ್ತೇನೆ. ನಾನು ಬಹಳ ದೂರದಿಂದ ಗಾಡಿಗಳನ್ನು ಹೊಡೆದುಕೊಂಡು ಬಂದಿದ್ದೇನೆ" ಎಂದು

ವಿಶ್ವಾಮಿತ್ರ ಹೇಳಿದ. ನದಿ ಹೇಳಿದವು "ಯಾವ ರೀತಿ ಪರಿಪುಷ್ಪ ಮಾತೆ ತನ್ನ ಮಗುವನ್ನು ಎತ್ತಿಕೊಳ್ಳಲು ಬಾಗುತ್ತಾಳೊ ಅಂತೆಯೇ, ಋಷಿಯೇ ನಾನು ನಿನಗಾಗಿ ಬಾಗುತ್ತೇನೆ". ಈ ಒಂದು ಉದಾಹರಣೆ ಕೊಟ್ಟು ನದಿ ಪುನಃ ಅಂದಿತು, "ಯಾವ ರೀತಿ ಕನ್ಯೆ ತಂದೆಯ ಸೇವೆಗಾಗಿ ಬಾಗುತ್ತಾಳೊ ಅದೇ ರೀತಿ ನಿನ್ನ ಸೇವೆಗಾಗಿ ಬಾಗುತ್ತಲಿದ್ದೇನೆ. ನೀನು ಬಹಳ ದೂರದಿಂದ ಬಂದಿದ್ದೀಯೆ. ಆದ್ದರಿಂದ ನಿನಗಾಗಿ ಬಾಗುತ್ತೇನೆ". ನಂತರ ನದಿ ಬಾಗಿದವು ಆ ಎಲ್ಲಾ ಭಾರತೀಯರು ದಾಟಿದರು. ಎಂಬುದಾಗಿ ಈ ಸೂಕ್ತದಲ್ಲಿ ಹೇಳಿದೆ.

ಇಲ್ಲಿ ಎರಡು ಉದಾಹರಣೆಗಳನ್ನು ಕೊಡಲಾಗಿದೆ. ಅವು ಪರಮ ರಮಣೀಯವಾಗಿವೆ. ಅತ್ಯಂತ ಸ್ವಾಭಾವಿಕ ರೀತಿಯಲ್ಲಿ ನಾವು ನದಿಗೆ ತಾಯಿಯೆಂದು ಕರೆಯುತ್ತೇವೆ. ಕನ್ಯೆಯೆಂದು ಕರೆಯುವುದಿಲ್ಲ. ವಿಶ್ವಾಮಿತ್ರ ಕೂಡ ಮೊದಲು ನದಿಗೆ ತಾಯಿಯೆಂದು ಕರೆದ. ನದಿ ಕೂಡ ಮೊದಲು ಇದೇ ಮಾತನ್ನು ಹೇಳಿತ್ತು. ಅಷ್ಟರಲ್ಲಿ ಈ ಮನುಷ್ಯ ಓರ್ವ ಮಹಾನ್ ಜ್ಞಾನಿ ಋಷಿ ಇದ್ದಾನೆ. ಅವನ ಬಳಿ ಚೈತನ್ಯಮಯ ಜ್ಞಾನ ಇದೆ. ನಾವು ಅವನ ಕನ್ಯೆಯರು ಮತ್ತು ಅವನು ತಮ್ಮ ತಂದೆ ಎಂದು ನಂತರ ನದಿಗೆ ಜ್ಞಾಪಕ ಬಂತು.

ಈ ಎರಡೂ ಉದಾಹರಣೆ ಬಗ್ಗೆ ಆಗಾಗ್ಗೆ ಆಲೋಚಿಸಿದಾಗ ಈ ಎರಡೂ ನದಿಗಳಲ್ಲಿ ದೊಡ್ಡ ನದಿಯಾದ ಸಟ್ಲೆಜ್ ತನ್ನನ್ನು ತಾಯಿಯೆಂದೂ ಮತ್ತು ವಿಶ್ವಾಮಿತ್ರನನ್ನು ಪುತ್ರನೆಂದು ಹೇಳಿರ ಬಹುದು. ಚಿಕ್ಕ ನದಿ ಬ್ಯಾಸ ತನ್ನನ್ನು ಕನ್ಯೆಯೆಂದೂ ಮತ್ತು ಅವನನ್ನು ತಂದೆ ಎಂದೂ ತಿಳಿದಿರಬಹುದು ಎಂದು ನನಗೆ ಅನಿಸುತ್ತದೆ. ಇಲ್ಲಿ ಮುಖ್ಯವಾದ ಮಾತೇನೆಂದರೆ ನದಿಗಳು ಅತ್ಯಂತ ಪ್ರೇಮವನ್ನು ತೋರಿಸಿ ನಂತರ ಪರಮ ಆದರ ತೋರಿಸಿದವು.

ಇವು ಸಾಧಾರಣ ನದಿಗಳು. ಆದರೆ ಸಂಸಾರ–ನದಿ, ಮಾಯಾ–ನದಿ ಬಹು ವೇಗ ಗತಿಯಿಂದ ಹರಿಯುತ್ತಿವೆ. ನಾವು ಆ ನದಿಗಳ ಆಚೆಗೆ ಹೋಗುವುದು ಕಷ್ಟವೆನಿಸುತ್ತದೆ. ಭವ ನದಿ ದಾಟಲು ವಿಶ್ವಾಮಿತ್ರನಂತೆ ನಮ್ರ ಮತ್ತು ಪ್ರಯತ್ನಶೀಲರಾದಲ್ಲಿ ನಾವು ಕೂಡ ಸಂಸಾರವೆಂಬ ನದಿಯನ್ನು ದಾಟಬಹುದು. ಇಂಥ ಶ್ರದ್ಧೆ ಈ 'ವಿಶ್ವಾಮಿತ್ರ – ನದಿ – ಸಂವಾದ'ದಿಂದ ನಮಗೆ ದೊರೆಯುತ್ತದೆ.

(ಮುಂದುವರಿಯುವುದು...)

* * *

(ಕಳೆದ ಸಂಚಿಕೆಯಿಂದ ಮುಂದುವರೆದದ್ದು...)

ಒಂದಾಗಿ ಒಳ್ಳೆಯವರಾಗಿ

- ವಿನೋಬಾ

ನಾನು ನಿಮಗೆ ಒಂದು ಮಾತನ್ನು ಹೇಳುತ್ತೇನೆ. ಹಿಂದೂಸ್ತಾನದಲ್ಲಿ ಐದು ಲಕ್ಷ ಚಿಕ್ಕ ಚಿಕ್ಕ ಹಳ್ಳಿಗಳಿವೆ. ಈ ಲೆಕ್ಕದಿಂದ ಒಂದು ಹಳ್ಳಿ ಸರಾಸರಿ ೬೦೦ ಜನರದ್ದಾಗಿರುತ್ತದೆ. ಈ ಚಿಕ್ಕ ಚಿಕ್ಕ ಹಳ್ಳಿಗಳಲ್ಲಿಯ ಜನರು ಬೇರೆ ಬೇರೆಯಾಗಿದ್ದರೆ, ಇವರಿಗೆ ಹೊರಗಿನಿಂದ ಯಾವುದೇ ಸಹಾಯ ದೊರೆಯದಿದ್ದರೆ ಈ ಹಳ್ಳಿಗಳ ಶಕ್ತಿ ಹೇಗೆ ತಾನೆ ಬೆಳೆಯಲು ಸಾಧ್ಯ? ಅವು ಬಹಳ ದುರ್ಬಲವಾಗುವವು. ಆದ್ದರಿಂದ ಅವುಗಳ ಶಕ್ತಿ ಹೆಚ್ಚಿಸುವ ಯುಕ್ತಿಯನ್ನು ನಾನು ಹೇಳುತ್ತೇನೆ. ಹಳ್ಳಿಗಳದು ಒಂದು ಪರಿವಾರವಾಗಬೇಕು. ಆಗ ಅದನ್ನು ಹಳ್ಳಿ ಎನ್ನದೆ ಕುಟುಂಬ ಎಂದು ಹೇಳಿ. ನಮ್ಮ ಕುಟುಂಬದಲ್ಲಿ ೨೫೦ ಜನ ಅಥವಾ ೩೦೦ ಜನ ಇದ್ದಾರೆ ಎಂದು ಹೇಳಿದಲ್ಲಿ ನಮ್ಮ ಶಕ್ತಿ ಬೆಳೆಯುವುದು. ನೀವು ಬಲವಾನರಾಗುವಿರಿ. ಹೆಣ್ಣು ಮಕ್ಕಳು ಇವರು ನನ್ನ ಮೂರು ಅಥವಾ ನಾಲ್ಕು ಮಕ್ಕಳು ಎಂದು ಮಾತನಾಡದೇ ಹಳ್ಳಿಯಲ್ಲಿ ಎಷ್ಟು ಮಕ್ಕಳಿದ್ದಾರೊ ಅವರೆಲ್ಲರೂ ನನ್ನ ಮಕ್ಕಳೆಂದು ಮಾತನಾಡಲಿ. ಚಿಕ್ಕ ಚಿಕ್ಕ ಹಳ್ಳಿಗಳಲ್ಲಿ ನೀವು ಬೇರೆ ಬೇರೆ ಪರಿವಾರವಾಗಿ ಇದ್ದರೆ, ನೆರಹೊರೆಯವರು ಪರಸ್ಪರ ಕಾಳಜಿ ಮಾಡದಿದ್ದರೆ ನೀವು ಸುಖಿಗಳಾಗುವಿದಿಲ್ಲ ಬದಲಿಗೆ ಈ ಹಳ್ಳಿಗಳು ಕುಟುಂಬಗಳಾದರೆ ಅವುಗಳಷ್ಟು ಸುಖಿಗಳು ಯಾರಾದರೂ ಆಗಬಹುದು.

ನಗರಗಳಲ್ಲಿ ಒಂದು ಪರಿವಾರವನ್ನು ಮಾಡುವುದು ಕಷ್ಟಸಾಧ್ಯ. ಇಂದು ದೊಡ್ಡ ದೊಡ್ಡ ನಗರಗಳಲ್ಲಿ ಜನಸಂಖ್ಯೆ ಹತ್ತು ಲಕ್ಷ, ಇಪ್ಪತ್ತು ಲಕ್ಷ ಅಥವಾ ಅರವತ್ತು ಲಕ್ಷ ಹೀಗೆ ಇರುತ್ತದೆ. ಈ ನಗರಗಳ ಎದಿರು ನಾವು ಬಹಳ ದುರ್ಬಲರೆಂದು ಹಳ್ಳಿಯವರು ಆಲೋಚಿಸುತ್ತಾರೆ. ಆದ್ದರಿಂದ ಹಳ್ಳಿಯವರು ತಮ್ಮದೇ ಒಂದು ಪರಿವಾರವನ್ನಾಗಿ ಮಾಡಿಕೊಂಡರೆ ಬಲವಾನರಾಗುವರು.

ಒಂದು ಪರಿವಾರ ಮಾಡಬೇಕೆಂಬುದರ ಅರ್ಥ ಎಲ್ಲರ ಅಡಿಗೆ ಒಂದೇ ಕಡೆ ಆಗುತ್ತದೆ ಎಂದಲ್ಲ. ಸೌಕರ್ಯದ ದೃಷ್ಟಿಯಿಂದ ಇಂದಿನಂತೆಯೇ ಬೇರೆ ಬೇರೆ ಅಡಿಗೆ ಮಾಡುವುದು ಒಳ್ಳೆಯದೇ. ಆದರೆ ಹಳ್ಳಿಯ ಎಲ್ಲ ಭೂಮಿ ಹಳ್ಳಿಯದ್ದಾಗುವುದು. ಭೂಮಿ ನಮ್ಮ ಆಧಾರ. ನಮಗೆ ಭೂಮಿಯಿಂದ ಊಟ ಸಿಗುತ್ತದೆ. ನಮ್ಮ ಹಸುಗಳು ಭೂಮಿಯ ಮೇಲೆ ಮೇಯುತ್ತವೆ. ನಮ್ಮ ಮನೆಗಳು ಭೂಮಿಯ ಮೇಲೆ ನಿರ್ಮಾಣವಾಗುತ್ತವೆ. ಅಲ್ಲದೇ ಮಣ್ಣಿನಿಂದಲೇ ರಚಿತವಾಗುತ್ತವೆ. ನಾವು ಸತ್ತರೆ ಮಣ್ಣಿನೊಂದಿಗೆ ಸೇರಿ ಬಿಡುತ್ತೇವೆ. ಈ ಭೂಮಿ ನಮ್ಮ ತಾಯಿ. ನಾವು ಅವಳ ಮಕ್ಕಳು. ಭೂಮಾತೆಯ ಮಾಲೀಕರಾಗಲು ಯಾರಿಗೂ ಸಾಧ್ಯವಿಲ್ಲ. ಆದರೆ ಇಂದು ಕೆಲವು ಜನರು ಮಾಲೀಕರಾಗಿ ಕುಳಿತಿದ್ದಾರೆ. ಬಹಳಷ್ಟು ಜನರು ಭೂಮಿ ಹೀನರಿದ್ದಾರೆ. ಗೆದ್ದಲು ಕಟ್ಟಿದ ಮನೆಯನ್ನು ನೀವು ನೋಡಿರಬಹುದು. ಚಿಕ್ಕ ಚಿಕ್ಕ ಇರುವೆಗಳು ಒಟ್ಟುಗೂಡಿ ಕೆಲಸಮಾಡಿ ಎಷ್ಟೊಂದು ಸುಂದರವಾದ ಮನೆಯನ್ನು

ನಿರ್ಮಿಸುತ್ತವೆ. ನಾನಂತೂ ಅಂಥ ಮನೆಗೆ 'ಭುವನೇಶ್ವರ' ಎಂದು ಹೆಸರು ಇಟ್ಟಿದ್ದೇನೆ. ಹುಲಿಗಳಿರುವ ಕಾಡುಗಳಲ್ಲಿ ಕೂಡ ಅವು ನಿರ್ಭರತೆಯಿಂದ ಬಾಳುತ್ತವೆ. ಅವುಗಳಿಂದ ನಾವು ಪಾಠ ಕಲಿಯಬೇಕು ಒಂದು ವೇಳೆ ಆ ಗೆದ್ದಲು ಬೇರೆ ಬೇರೆ ಇದ್ದರೆ ಅವು ಈ ಜಗತ್ತಿನಲ್ಲಿ ಉಳಿಯಬಲ್ಲವೇ? ಆದರೆ ಅವು ಒಟ್ಟಿಗೆ ಇರುತ್ತವೆ ಮತ್ತು ಈ 'ಭುವನೇಶ್ವರ' ನಮ್ಮದೆಂದು ಹೇಳುತ್ತವೆ. ಅವು 'ನನ್ನದು-ನನ್ನದು' ಎನ್ನುವುದಿಲ್ಲ. ಇದೇ ರೀತಿ ನಾವು ಕೂಡ 'ನನ್ನದು-ನನ್ನದು' ಎಂದು ಹೇಳುವುದನ್ನು ಬಿಟ್ಟರೆ ಸುಖಿಗಳಾಗುವೆವು.

ಹಳ್ಳಿಯ ಇಡೀ ಭೂಮಿ ನಮ್ಮದು, ಎಲ್ಲ ಐಶ್ವರ್ಯ ನಮ್ಮದು. ನಾವೆಲ್ಲರೂ ಅಣ್ಣ-ತಮ್ಮಂದಿರು. ಅನುಕೂಲಕ್ಕಾಗಿ ಪ್ರತಿಯೊಂದು ಮನೆಗೆ ಸ್ವಲ್ಪ ಸ್ವಲ್ಪ ಭೂಮಿಯನ್ನು ಹಂಚಲಾಗುವುದು. ಆದರೆ ಹಳ್ಳಿಯೇ ಒಡೆಯ. ಯಾರಿಗಾದರೂ ಹೊಲದ ಕೆಲಸಕ್ಕಾಗಿ ಸಹಾಯ ಬೇಕಿದ್ದಲ್ಲಿ ಅವನು ತನ್ನ ಹಕ್ಕೆಂದು ಎಲ್ಲರನ್ನು ಕರೆಯುವನು. ಹೊಲದಲ್ಲಿ ಬೆಳೆ ಕಡಿಮೆ ಬಂದರೆ ಹಳ್ಳಿಯ ಜನರು ತಮ್ಮ ಬೆಳೆಯಲ್ಲಿ ಒಂದು ಭಾಗವನ್ನು ಅವನಿಗೆ ಕೊಡುವರು. ಭೂಮಿಯಂತೂ ಎಲ್ಲರದ್ದಾಗಿದೆ. ಏಕೆಂದರೆ ಅದನ್ನು ಭಗವಂತ ನಿರ್ಮಿಸಿದ್ದಾನೆ. ನಾವು ಒಂದು ಮುಷ್ಟಿಯಷ್ಟು ಮಣ್ಣನ್ನೂ ಹುಟ್ಟಿಸಲಾರೆವು. ಪಾಂಡವರು ಐವರಿದ್ದರು. ಅವರು ಕಾಡುಮೇಡುಗಳಲ್ಲಿ ಅಲೆಯಬೇಕಾಗಿ ಬಂತು. ಆದರೂ ಅವರು ನಿರ್ಭಯರಾಗಿದ್ದರು! ಏಕೆಂದರೆ ಅವರು ಒಟ್ಟಾಗಿಇರುತ್ತಿದ್ದರು. ಭಗವಂತನು ಕೂಡ ಅವರ ಪಕ್ಷಕ್ಕೆ ತನ್ನ ಬಲವನ್ನು ಕೊಟ್ಟ. ಈ ರೀತಿಯಾಗಿ ಯಾರು ಒಟ್ಟಾಗಿರುತ್ತಾರರೊ, ಪರಸ್ಪರರಿಗಾಗಿ ತ್ಯಾಗ ಮಡುತ್ತಾರೊ ಅವರು ಚಿಕ್ಕವರಾಗಿರುವುದಿಲ್ಲ. ಭಗವಂತ ಅವರಿಗೆ ನೆರವಾಗುತ್ತಾನೆ.

ಇಂದು ಜಗತ್ತಿನಲ್ಲಿ ಬಹು ಅಶಾಂತಿಯಿದೆ. ಹಿಂದೂಸ್ತಾನದಲ್ಲಿ ಬಹಳಷ್ಟು ದುಃಖವಿದೆ. ಆದರೆ ದುಃಖದ ಪ್ರಮಾಣದಷ್ಟು ಅಶಾಂತಿಯಿಲ್ಲ. ದುಃಖ ಹೆಚ್ಚು, ಅಶಾಂತಿ ಕಡಿಮೆ. ಏಕೆಂದರೆ ಇಲ್ಲಿಯ ಜನರ ಮನಸ್ಸಿನಲ್ಲಿ ಶಾಂತಿ ತುಂಬಿದೆ. ಸಂತರು ಕೊಟ್ಟ ಶಿಕ್ಷಣದಿಂದಾಗಿ ಇಲ್ಲಿಯ ಜನರ ಬುದ್ಧಿ ವಿಪತ್ತಿನಲ್ಲಿ ಕೂಡ ಶಾಂತವಾಗಿರುತ್ತದೆ. ಈ ಲೆಕ್ಕಾನುಸಾರವಾಗಿ ಇಂದು ಜಗತ್ತಿನಲ್ಲಿ ಅಶಾಂತಿ ಬಹು ಹೆಚ್ಚಾಗಿದೆ. ಒಬ್ಬರು ಇನ್ನೊಬ್ಬರಿಗೆ ಹೆದರುತ್ತಾರೆ. ಬಹಳಷ್ಟು ಶಸ್ತ್ರ ಹೆಚ್ಚಿಸಿಕೊಳ್ಳುತ್ತಾರೆ. ಲಕ್ಷಾವಧಿ ಜನರನ್ನು ಮುಗಿಸಿಬಿಡುವಂಥ ಬಾಂಬ್ ತಯಾರಿಸುತ್ತಾರೆ.

ಹಿಂದೂಸ್ತಾನದವರ ಮೂಳೆಗಳಲ್ಲಿ, ರಕ್ತದಲ್ಲಿ ಶಾಂತಿ ಇದೆ. ಅದ್ದರಿಂದ ಇಲ್ಲಿಯ ಜನರು ವಿಪತ್ತಿನಲ್ಲೂ ಶಾಂತವಾಗಿರುತ್ತಾರೆ. ನಾವು ಈ ವಿಪತ್ತುಗಳನ್ನು ಹಾಗೂ ದಾರಿದ್ರ್ಯವನ್ನು ಅಳಿಸಿಹಾಕಿದಲ್ಲಿ ಇಲ್ಲಿ ಬಹಳಷ್ಟು ಶಾಂತಿ ಉಂಟಾಗುವುದು. ಜೊತೆಗೆ ಐಕ್ಯತೆ ಬೆಳೆಯುವುದು. ನಮಗಿಂತಲೂ ಹೆಚ್ಚು ದುಃಖಿಗಳು ಮತ್ತು ಬಡವರು ಆಗಿರುವಂಥವರ ಕಡೆಗೆ ನಾವು ಗಮನ ಹರಿಸಬೇಕು. ಹಳ್ಳಿ-ಹಳ್ಳಿಗಳಲ್ಲಿಯ ಜನರು ಜೊತೆಗೂಡಿ ಕೆಲಸಮಾಡಿದರೆ ಹಳ್ಳಿಯಲ್ಲಿ ಯಾರೂ ದುಃಖಿ ಇರುವುದಿಲ್ಲ. ಇಡೀ ಜಗತ್ತಿನಲ್ಲಿ ಶಾಂತಿ ಇರಬೇಕೆಂದು ನಾವು ಬಯಸುವುದಾದರೆ ನಾವು ಹಳ್ಳಿ-ಹಳ್ಳಿಯಲ್ಲಿಯ ಒಡೆತನವನ್ನು ಅಳಿಸಿಹಾಕಬೇಕು. ಭೂಮಿ ಹಳ್ಳಿಯದಾಗಬೇಕು. ಕಾರ್ಖಾನೆ ದೇಶದ್ದಾಗಬೇಕು. ಮಾಲೀಕರೆಂದು ಯಾರೂ ಇರಕೂಡದು. ಸುಖಪ್ರಾಪ್ತಿಗೆ

ಇದೇ ಸಾಧನ. 'ನಾನು', 'ನನ್ನದು', 'ನೀನು', 'ನಿನ್ನದು', ಎಂದೆಲ್ಲ ನಾವು ಏನು ಮಾತನಾಡುತ್ತೇವೊ ಆ ಭೇದದ ಕಾರಣದಿಂದ ಮನಸ್ಸುಗಳು ಒಡೆದುಹೋಗಿವೆ. ನೆರೆಹೊರೆಯವರಲ್ಲಿ ದೇಶಗಳ ಮಧ್ಯದಲ್ಲಿ, ಜಾತಿಗಳ ಮಧ್ಯದಲ್ಲಿ ಭೇದ ಉಂಟಾಗಿದೆ. ನಾವು ಈ ಎಲ್ಲ ಭೇದಗಳನ್ನು ಅಳಿಸಬೇಕಿದೆ.

ಮನುಷ್ಯನ ಹೃದಯ ಮತ್ತು ಚಿಂತನೆಯಲ್ಲಿ ಶಕ್ತಿಯಿದೆ. ಜಗತ್ತಿನಲ್ಲಿ ಒಂದು ವಿಚಾರದ ಶಕ್ತಿ, ಎರಡನೆಯದು ಪ್ರೇಮದ ಶಕ್ತಿ, ಮೂರನೆಯದು ಧರ್ಮದ ಶಕ್ತಿ, ನಾಲ್ಕನೆಯ ಶಕ್ತಿ ಇಲ್ಲವೇ ಇಲ್ಲ. ಕಾನೂನಿನ ಶಕ್ತಿಯಂತೂ ಹಿಂದೆ ಹಿಂದೆ ಬರುತ್ತದೆ. ಆದ್ದರಿಂದ ಜನರು ಪ್ರೇಮ, ಧರ್ಮ ಮತ್ತು ಸತ್ಯವನ್ನು ಅರ್ಥಮಾಡಿಕೊಳ್ಳಲಿ. ಆಗ ಇಡಿ ಸಮಾಜವೆ ಬದಲಾಗುವುದು. ಲಕ್ಷಾವಧಿ ಕೋಟ್ಯಾವಧಿ ಜನರು ತಮ್ಮ ಜೀವನ ನಡೆಸುತ್ತಾರೆ. ಕಾನೂನಿನ ಅರಿವೇ ಅವರಿಗೆ ಇರುವುದಿಲ್ಲ. ಹಿಂದೂಸ್ತಾನದಲ್ಲಿ ಕೋಟ್ಯಾವಧಿ ಜನರು ಸ್ನಾನವಿಲ್ಲದೆ ಊಟಮಾಡುವುದಿಲ್ಲ. ಹಾಗದರೆ ಇದಕ್ಕಾಗಿ ಯಾವುದಾದರೂ ಕಾನೂನು ರಚಿತವಾಗಿದೆಯೆ? ಇಲ್ಲಿ ಸ್ನಾನವಿಲ್ಲದೆ ಊಟ ಮಾಡಬಾರದೆಂದು ಸಾವಿರಾರು ವರ್ಷಗಳಿಂದ ಪ್ರಚಾರವಾಗಿದೆ. ಸತ್ಪುರುಷರು ಹಳ್ಳಿ ಹಳ್ಳಿಗಳಿಗೆ ಹೋಗಿ ಪ್ರಚಾರ ಮಾಡಿದ್ದಾರೆ. ಈ ದೇಶವನ್ನು ಸತ್ಪುರುಷರು ನಿರ್ಮಿಸಿದ್ದಾರೆ. ಇಲ್ಲಿಯ ಜನರು ಎಂದೂ ಐಶ್ವರ್ಯಕ್ಕೆ ಉಚ್ಚಸ್ಥಾನವನ್ನು ಕೊಡುವುದಿಲ್ಲ. ಕೆಲವರು ವಿಲಾಸ ಜೀವನ ನಡೆಸುತ್ತಿರಬಹುದು. ಅಂಥವರನ್ನು ಇಲ್ಲಿಯ ಜನ ದೊಡ್ಡವರೆಂದು ಒಪ್ಪುವುದಿಲ್ಲ. ಯಾರೊಬ್ಬರ ಬಳಿ ರಾಕ್ಷಸನಂಥ ಶಕ್ತಿ ಇರಬಹುದು ಅಥವಾ ಶಸ್ತ್ರಾಸ್ತ್ರ ಇರಬಹುದು. ಅವನನ್ನು ದೊಡ್ಡವನೆಂದು ಭಾವಿಸುವುದಿಲ್ಲ. ಯಾರ ಮನಸ್ಸಿನಲ್ಲಿ ಪ್ರೇಮವಿದೆಯೊ, ಜೀವನದಲ್ಲಿ ತ್ಯಾಗವಿದೆಯೊ, ದೇವರ ಭಕ್ತರಿದ್ದಾರೊ ಅವರನ್ನೇ ಇಲ್ಲಿಯ ಜನ 'ದೊಡ್ಡವರೆಂದು' ಭಾವಿಸುತ್ತಾರೆ. ಸಿಕಂದರ್ ಬಾದಷಹ ಹಿಂದೂಸ್ತಾನದ ರಾಜರನ್ನು ಸೋಲಿಸಿದ. ಸ್ವತಃ ಮಾಲೀಕನಾದ. ಒಂದು ದಿನ ಅವನು ದಾರಿಯಲ್ಲಿ ಹೋಗುತ್ತಿದ್ದ. ದಾರಿಯ ಪಕ್ಕದಲ್ಲಿ ಸಾಧು ಕುಳಿತದ್ದನ್ನು ನೋಡಿದ. ಆ ಸಾಧು ಸಿಕಂದರನನ್ನು ನೋಡಿ ನಮಸ್ಕಾರ ಮಾಡಲಿಲ್ಲ, ಎದ್ದೂ ನಿಲ್ಲಲಿಲ್ಲ. ಸಿಕಂದರ್ ಆತನನ್ನು ಕೇಳಿದ, "ನೀನು ಯಾರು?". ಉತ್ತರವಾಗಿ ಸಾಧು ಹೇಳಿದ, "ನಾನು ಜಗತ್ತಿನ ಮಾಲೀಕ" . ಸಿಕಂದರ್ ಗಾಬರಿಗೊಂಡ. ನಾನು ಜಗತ್ತನ್ನು ಗೆಲ್ಲಲು ಇಷ್ಟೊಂದು ಪ್ರಯತ್ನಮಾಡುತ್ತಿದ್ದೇನೆ. ನನ್ನ ಬಳಿ ಇಷ್ಟೊಂದು ದೊಡ್ಡ ಸೇನೆ ಇದೆ. ಈ ಸಾಧು ಬಳಿ ಏನೂ ಇಲ್ಲ. ಆದರೂ ಕೂಡ ಈತ ಜಗತ್ತಿನ ಮಾಲೀಕನಾಗಲು ಹೇಗೆ ಸಾಧ್ಯ? ಎಂದೆಲ್ಲಾ ಸಿಕಂದರ್ ಆಲೋಚಿಸಿದ. ಸಾಧು ಹೇಳಿದ, "ನನಗೆ ನಿನ್ನ ಪರಿಚಯವೇ ಇಲ್ಲ ಅಂದ ಮೇಲೆ ನೀನು ಜಗತ್ತಿನ ಮಾಲೀಕ ಹೇಗಾದೆ?". ಇಂಥ ಫಕೀರರು ಹಿಂದೂಸ್ತಾನದಲ್ಲಿ ಮೊದಲೂ ಇದ್ದರು, ಈಗಲೂ ಇದ್ದಾರೆ. ಹಿಂದೂಸ್ತಾನದ ಜನರು ಸಂಸಾರ ನಡೆಸುತ್ತಿದ್ದರೂ ಅವರ ಮನಸ್ಸೆಲ್ಲಾ ಪರಮೇಶ್ವರನಲ್ಲಿರುತ್ತದೆ. ಸಂಸಾರಕ್ಕೆ ಅವರು ಹೆಚ್ಚಿನ ಮಹತ್ವ ಕೊಡುವುದಿಲ್ಲ. ಈ ಮಾತು ಸರಿಯೇ. ಏಕೆಂದರೆ ಈ ಮಾತಿನಿಂದಾಗಿಯೇ ಹಿಂದೂಸ್ತಾನದ ಜನರು ಹತ್ತು ಸಾವಿರ ವರ್ಷಗಳಿಂದ ಬಾಳಿ ಬಂದಿದ್ದಾರೆ. ಕೂಡಿಕೊಂಡು ಕೆಲಸ ಮಾಡುವುದನ್ನು ಕಲಿತರೆ ನಿಮಗೆ ಹೊರಗಿನ ಸಹಾಯ ಸುಲಭವಾಗಿ ಸಿಗುವುದು. ಒಳಗಿನ ನಿಮ್ಮ

ಶಕ್ತಿಯು ಹೆಚ್ಚುವುದು ಮತ್ತು ಈಶ್ವರನ ಕೃಪೆಯು ದೊರಕುವುದು. ನಿಮ್ಮ ಹಳ್ಳಿಯಲ್ಲಿ ಮಧುರವಾಣಿಯೇ ಕೇಳುವಂತಾಗಬೇಕು. ಕಟು ಶಬ್ದಗಳು ಕೇಳುವಂತಾಗಬಾರದು. ಯಾವಾಗಲೂ ಸತ್ಯವನ್ನೇ ಮಾತನಾಡಬೇಕು. ನೀವು ಎರಡು ಕೈಗಳಿಂದ ಕೆಲಸ ಮಾಡುವಿರಿ. ಪರಸ್ಪರ ಪ್ರೀತಿಸುವಿರಿ ಮತ್ತು ಇದರೊಂದಿಗೆ ರಾಮನಾಮದ ಜಪ ಮಾಡುವಿರಿ. ಆಗ ಸುಖಿಗಳಾಗುವಿರಿ. ಇಂದು ಪ್ರತಿಯೊಬ್ಬರೂ ಪ್ರತ್ಯೇಕ-ಪ್ರತ್ಯೇಕವಾಗಿ ಚಿಂತಿಸುತ್ತಾರೆ. ಇನ್ನು ಮುಂದೆ ಯಾರೂ ಈ ರೀತಿ ಚಿಂತಿಸುವ ಅಗತ್ಯವಿರುವುದಿಲ್ಲ. ಪ್ರತಿಯೊಬ್ಬರು ಗ್ರಾಮ ಸಮಾಜ ಹೇಗೆ ಒಳ್ಳೆಯದಾಗುವುದು ಎಂದು ಆಲೋಚಿಸುವನು. ಪ್ರತಿಯೊಬ್ಬರು ಈ ರೀತಿ ಆಲೋಚಿಸಿದರೆ ಅವರ ಬುದ್ಧಿಯ ವಿಕಾಸವಾಗುವುದು. ಇಡೀ ಹಳ್ಳಿಗಾಗಿ ಆಲೋಚಿಸುವ ಅಭ್ಯಾಸ ಉಂಟಾದರೆ ಮನುಷ್ಯ ಉನ್ನತನಾಗುವನು. ಹೃದಯ ಶುದ್ಧವಾಗುವುದು. ಬೆಳೆ ವೃದ್ಧಿಸುವುದು. ದುಃಖ ಮತ್ತು ದಾರಿದ್ರ್ಯ ಕಡಿಮೆಯಾಗುವುದು.

ಹಳ್ಳಿಯ ಜನರು ತಮ್ಮ ಹಳ್ಳಿಯೊಳಗೆ ಹೊರಗಡೆಯಿಂದ ಬಟ್ಟೆ ಬರದಂತೆ ಮಾಡುವರು ತಮ್ಮ ಬಟ್ಟೆಯನ್ನು ಹಳ್ಳಿಯಲ್ಲಿಯೇ ತಯಾರಿಸುವರು. ಇಂದು ಹಳ್ಳಿಯಲ್ಲಿ ಪ್ರತಿಯೊಬ್ಬನು ತನ್ನ ತನ್ನ ಇಚ್ಛೆಗನುಸಾರ ಹೊರಗಿನ ವಸ್ತುಗಳನ್ನು ಖರೀದಿಸುತ್ತಾನೆ. ಇಂಥ ಪರಿಸ್ಥಿತಿಯಲ್ಲಿ ಹಳ್ಳಿಯ ಉತ್ಪಾದನೆ ಹೇಗೆ ಹೆಚ್ಚುತ್ತದೆ? ಹಳ್ಳಿಯಲ್ಲಿ ಗಾಣ ನಡೆಯುತ್ತದೆ. ಆದರೆ ಹಳ್ಳಿಯವರು ಅವನ ಎಣ್ಣೆಯನ್ನು ಖರೀದಿಸುವುದಿಲ್ಲ. ಹೊರಗಿನದನ್ನು ಖರೀದಿಸುತ್ತಾರೆ. ಹಾಗಾದರೆ ಅವರ ಉದ್ಯೋಗ ಹೇಗೆ ಉಳಿಯುವುದು? ಆದ್ದರಿಂದ ಹಳ್ಳಿಯವರೆಲ್ಲ ಸೇರಿ ಹಳ್ಳಿಯ ಒಳಿತಿಗಾಗಿ ನಿಶ್ಚಯ ಮಾಡಬೇಕು. ನೀವೆಲ್ಲರೂ ಒಂದು ಪರಿವಾರ ಮಾಡಿ ಮತ್ತು ಪ್ರೇಮದಿಂದ ಇರಿ. ಈ ಮಾತನ್ನು ತಿಳಿಸುವುದಕ್ಕಾಗಿ ನಾನು ಹಳ್ಳಿ-ಹಳ್ಳಿ ಅಲೆಯುತ್ತಿದ್ದೇನೆ. ನಾನು ಇತ್ತ ಐಕ್ಯತೆಗಾಗಿ ಕೆಲಸಮಾಡುತ್ತಿದ್ದರೆ, ಅತ್ತ ಜನರು ಬೇರೆ ಬೇರೆ ಪಾರ್ಟಿಗಳನ್ನು ಮಾಡಿಕೊಂಡು ದೇಶವನ್ನು ಒಡೆಯುತ್ತಿದ್ದಾರೆ. ಹಳ್ಳಿಯಲ್ಲಿ ಒಂದೇ ಪಾರ್ಟಿ ಮಾಡಿರಿ. ಹಳ್ಳಿ ಒಡೆಯದಂತೆ ನೋಡಿಕೊಳ್ಳಿ. ಒಳ್ಳೆಯವರಿಗೆ ಮತ ಕೊಡಿ. ಹಳ್ಳಿಗೆ ಬೆಂಕಿ ಹಚ್ಚುವುದು ಸುಲಭ. ಅದನ್ನು ಆರಿಸುವವರಾರು? ಒಂದು ಬಾರಿ ಗೋಕುಲದಲ್ಲಿ ಬೆಂಕಿ ಬಿತ್ತು. ಆಗ ಭಗವಾನ್ ಕೃಷ್ಣ ಇಡೀ ಬೆಂಕಿಯನ್ನು ಕುಡಿದ. ಈ ರೀತಿ ಬೆಂಕಿ ಕುಡಿಯುವವರು ಯಾರಾದರೂ ಇದ್ದಾರೆಯೇ? ಆದ್ದರಿಂದ ನೀವು ಹಳ್ಳಿಯನ್ನೇ ಒಂದು ಪರಿವಾರವನ್ನಾಗಿ ಮಾಡಿ ಮತ್ತು ಒಟ್ಟಿಗೆ ಜೀವನ ನಡೆಸಿ ಎಂದು ನಾನು ಹೇಳುತ್ತೇನೆ. ಇದೇ ಒಂದಾಗುವ ಪರಿ.

(ಮುಂದುವರಿಯುವುದು...)

* * *

೭೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣದ ಅನುಬಂಧ :

ಕನ್ನಡ ಭಾಷೆ ಮತ್ತು ಜಾಹೀರಾತುಗಳು

ಒಂದು ಭಾಷೆಯವರು ಇನ್ನೊಂದು ಭಾಷೆಯನ್ನು ಮಾತನಾಡುವವರ ಮೇಲೆ ಆಡಳಿತ ಮಾಡಿದರೆ, ಆಡಳಿತ ಮಾಡುವವರ ಭಾಷೆಯಿಂದ ಹೆಚ್ಚು ಪದಗಳು ಎರವಲಾಗಿ ಬರುತ್ತದೆ, ಇದನ್ನು ಬೇರೊಂದೆಡೆ ವಿಸ್ತಾರವಾಗಿ ತಿಳಿಸಿದ್ದೇನೆ. ನಮ್ಮ ಭಾಷೆಯ ಬೆಳವಣಿಗೆ ಕೂಡ ಆಡಳಿತ ನಡೆಸುವವರು ಎಷ್ಟರಮಟ್ಟಿಗೆ ಒತ್ತು ಕೊಡುತ್ತಾರೆ ಎಂಬುದನ್ನು ಅವಲಂಬಿಸಿದೆ. ಕನ್ನಡ ಭಾಷೆಯಲ್ಲಿ ವ್ಯವಹಾರ ಹೆಚ್ಚಿದಷ್ಟೂ ಕನ್ನಡ ಭಾಷೆ ಬೆಳೆಯುತ್ತದೆ ಎಂಬ ಸತ್ಯವನ್ನು ನಾವೆಲ್ಲರೂ ಅರಿತು ಭಾಷೆಯ ಉಪಯೋಗವನ್ನು ಕಡ್ಡಾಯವಾಗಿ ಜಾರಿಗೆ ತರಬೇಕು.

ಈಗ ನಮ್ಮ ಭಾಷೆಯ ಮೇಲೆ ಪ್ರಭಾವ ಬೀರುವ ಎರಡು ಗುಂಪುಗಳಿವೆ. ಮೊದಲನೆಯ ಗುಂಪಿನಲ್ಲಿ ನಮ್ಮನ್ನು ಆಳುತ್ತಿರುವ ಮಂದಿ. ಇದರಲ್ಲಿ ಶಾಸಕಾಂಗ, ಆಡಳಿತಾಂಗ ಮತ್ತು ನ್ಯಾಯಾಂಗದಲ್ಲಿರುವವರೆಲ್ಲ ಸೇರುತ್ತಾರೆ. ಇವರೆಲ್ಲ ಕನ್ನಡ ಭಾಷೆಯ ಅಭಿವೃದ್ಧಿಗೆ ಪ್ರಯತ್ನಪಡುತ್ತಿರುವುದು ಸ್ಪಷ್ಟವಾಗಿದ್ದರೂ ಅದರ ಮಟ್ಟವನ್ನು ಏರಿಸುವ ಕಾರ್ಯ ತುರ್ತಾಗಿ ಆಗಬೇಕಾಗಿದೆ. ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ರಾಜಕೀಯ ಮುಂದಾಳುಗಳು ದೆಹಲಿಯಲ್ಲಿ ರಾಜ್ಯದ ಬಗ್ಗೆ, ಮಾಧ್ಯಮಗಳ ಮುಂದೆ ಮಾತನಾಡುವಾಗ ಕನ್ನಡದಲ್ಲೇಕೆ ಮತನಾಡುವುದಿಲ್ಲ? ಆಂಗ್ಲ ಅಥವ ಹಿಂದಿ ವಾಹಿನಿಗಳಿಗೆ ಉತ್ತರಿಸುವಾಗ ಕನ್ನಡವನ್ನೇ ಬಳಸುವ ಧೀಮಂತರೇಕೆ ಆಗುವುದಿಲ್ಲ? ಅವರು ಹೇಳಿದ್ದನ್ನು ವಾಹಿನಿಗೆ ಬೇಕಾದ ಭಾಷೆಗೆ ತರ್ಜುಮೆ ಮಾಡುವ ಕೆಲಸವನ್ನು ಆಯಾ ವಾಹಿನಿಯವರಿಗೆ ಬಿಟ್ಟುಬಿಡಿ.

ಎರಡನೆಯ ಗುಂಪು ವಾಣಿಜ್ಯೋದ್ಯಮದ್ದು. ತಮ್ಮ ವಹಿವಾಟು ಮತ್ತು ಹಣದ ಪ್ರಭಾವದಿಂದ ಈ ಗುಂಪು ಭಾಷೆಗಳ ಮೇಲೆ ಒಂದು ರೀತಿಯ ಹತೋಟಿಯನ್ನು-ನೇರವಲ್ಲದ ಹತೋಟಿಯನ್ನು ಸ್ಥಾಪಿಸುತ್ತದೆ. ಇವಕ್ಕೆ ಗ್ರಾಹಕರು ಕೋರುವ ಭಾಷೆಯು ಮುಖ್ಯವಾಗುತ್ತದೆ. ಬಹುರಾಷ್ಟ್ರೀಯ ಹಾಗೂ ಸ್ವದೇಶಿ ಉದ್ಯಮಗಳು ಅದರಲ್ಲೂ ನಿತ್ಯಬಳಕೆಯ ವಸ್ತುಗಳನ್ನು ತಯಾರಿಸುವವರು ತಮ್ಮ ಉತ್ಪನ್ನಗಳ ಮಾರಾಟಕ್ಕೆ ಜಾಹೀರಾತುಗಳನ್ನು ನೀಡುತ್ತವೆ. ನಮ್ಮ ದೇಶದಲ್ಲಿ ಈ ಜಾಹೀರಾತು ಉದ್ಯಮವೇ ಹತ್ತಾರು ಸಾವಿರ ಕೋಟಿಗಳ ಉದ್ಯಮವಾಗಿದೆ. ಅವರು ಕೊಟ್ಟಿದ್ದನ್ನು ಮಾಧ್ಯಮಗಳು ಮುದ್ರಿಸುತ್ತವೆ, ಇಲ್ಲ ಪ್ರಸಾರ ಮಾಡುತ್ತವೆ. ಈ ಕಾರ್ಯದಲ್ಲಿ ಸರಿಯಾದ ಕನ್ನಡ ಭಾಷೆ ಉಪಯೋಗವಾಗುತ್ತಿದೆಯೆ ಎಂಬುದನ್ನು ಗಮನಿಸುವ ಕಾಲ ಈಗ ಬಂದಿದೆ. ಅಲ್ಲಿ ಉಪಯೋಗವಾಗುವ ತಪ್ಪು ಭಾಷಾ ಪ್ರಯೋಗದಿಂದ, ತಪ್ಪು ಕಾಗುಣಿತದಿಂದ ಆಗುವ ಕೆಟ್ಟ ಪರಿಣಾಮ ಅಗಾಧ. ಲಕ್ಷಾಂತರ ಮಂದಿ ಮೆಲಿಂದ ಮೇಲೆ ನೂರಾರು ಬಾರಿ ಸರಿಯಿಲ್ಲದ್ದನ್ನು ನೋಡುವ-ಕೇಳುವ

ಕ್ರಿಯೆಯಿಂದ ಕನ್ನಡ ಪದಗಳ, ಪದಪುಂಜಗಳ ವ್ಯಾಕರಣದ ಕೊಲೆಯಗುತ್ತದೆ. ಈ ರೀತಿಯ 'ತಪ್ಪು ಕನ್ನಡ'ವನ್ನು ನಾವು ಸಹಿಸುವುದಿಲ್ಲ ಎನ್ನುವುದನ್ನು ನಾವು ನಿಸ್ಸಂಕೋಚವಾಗಿ ಜಾಹೀರಾತುದಾರರಿಗೂ ಜಾಹೀರಾತನ್ನು ಆರಿಸುವವರಿಗೂ ಮನದಟ್ಟಾಗುವಂತೆ ತಿಳಿಸಬೇಕಾಗುತ್ತದೆ. ಇದಕ್ಕೆ ಆ ಸಂಸ್ಥೆಗಳ ಮುಖ್ಯಸ್ಥರ, ಸಾರ್ವಜನಿಕ ಸಂಪರ್ಕಾಧಿಕರಿಗಳ ಇ-ಅಂಚೆಪೆಟ್ಟಿಗೆಯನ್ನು ತುಂಬಿ ಮುತ್ತಿಗೆ ಹಾಕಬೇಕು. ಆ ಉದ್ಯಮಗಳ ಸಾಮಾಜಿಕ ಬಾಧ್ಯತೆಯ ನೆನಪು ಮಾಡಿಕೊಡಬೇಕು. ಈ ಕೆಲಸ ಮಾಡಲು ಸಮರ್ಥರಾದ ಕನ್ನಡ ಕಂಪ್ಯೂಟರಿಗರ ಜಾಗೃತಿ ಪಡೆಯನ್ನು ಕಟ್ಟಬೇಕಾಗಿದೆ. ಇದಕ್ಕೆ ಅಂತರ್ಜಾಲದಲ್ಲಿ ಹೆಸರು ಮಾಡಿರುವ ದಟ್ಸ್‌ಕನ್ನಡ. ಕಾಮ್, ಡಿ.ಜೆ.ವರ್ಲ್ಡ್ ಮುಂತಾದ ಪತ್ರಿಕೆಗಳು ಮುಂದಾಳತ್ವ ವಹಿಸಬೇಕೆಂದು ನನ್ನ ಕೋರಿಕೆ. ಇದು ಕನ್ನಡವನ್ನು ಉದ್ಯಮಗಳ ದೃಷ್ಟಿಯಲ್ಲಿ ಎತ್ತರಕ್ಕೆ ಕೊಂಡೊಯ್ಯುವ ಸಾಧನವಾಗುತ್ತದೆಂದು ನನ್ನ ನಂಬಿಕೆ.

ಇದನ್ನು ಹಾಗೇ ಬಿಟ್ಟರೆ ಯಾವ ಪರಿಣಾಮವಾಗುತ್ತದೆ ಎಂಬುದು ಸುಸ್ಪಷ್ಟ! ಅದರ ಮೊದಲ ಹೆಜ್ಜೆ ಈಗಾಗಲೆ ಜಾಹೀರಾತು ಪ್ರಪಂಚದಲ್ಲಿ ಕಾಲಿಟ್ಟಿದ್ದಾಗಿದೆ! ಅದು ಕನ್ನಡವನ್ನು ಪಂಪೂರ್ಣವಾಗಿ ನಿರ್ಲಕ್ಷಿಸಿ ಹಿಂದಿಯ ಜಾಹೀರಾತುಗಳನ್ನು ನಮ್ಮ ಮೇಲೆ ಹೇರುವುದು. ಇದರಿಂದ ಅವರಿಗೆ ಒಂದು ಭಾಷೆಯ ಜಾಹೀರಾತಿಗೆ ಮಾಡಬೇಕಾಗುವ ಖರ್ಚು ಉಳಿತಾಯವಾಗುತ್ತದೆ! ಇದು ಹೀಗೆ ಮುಂದುವರಿದರೆ ಕನ್ನಡವನ್ನು ಬೆಳೆಸುವುದಿರಲಿ. ಉಳಿವಿಗೆ ಹೋರಾಡಬೇಕಾದ ಸ್ಥಿತಿಯನ್ನು ನಮ್ಮ ಮುಂದಿನ ಪೀಳಿಗೆಗೆ ನೀಡಿ ಅವರ ಛೀಮಾರಿಗೆ ತುತ್ತಾಗಬೇಕಾದೀತು!

ಕನ್ನಡದ ಬೆಳವಣಿಗೆಗೆ ನಾವೇನು ಮಾಡಬಹುದು?

ಕನ್ನಡದ ಬೆಳವಣಿಗೆಗೆ ನಾವೇನು ಮಾಡಬಹುದೆಂದು ನನ್ನನ್ನು ಆಗಿಂದಾಗ ಉತ್ಸಾಹಿ ಯುವಕ ಯುವತಿಯರು ಕೇಳುತ್ತಿರುತ್ತಾರೆ. ಅವರಿಗೆ ತೋರ್ಗಂಬವಾಗಿ ಕೆಲವು ಸಲಹೆಗಳನ್ನು ಇಲ್ಲಿ ಕೊಟ್ಟಿದ್ದೇನೆ. ಇವುಗಳನ್ನು ಅಳವಡಿಸಿಕೊಳ್ಳಿ ಎಂದು ನನ್ನ ವಿನಂತಿ. ಇದೇ ಮಾದರಿಯ ಇತರ ಉಪಾಯಗಳನ್ನು ನಿಮ್ಮ ಬ್ಲಾಗುಗಳಲ್ಲಿ, ಇ-ಪತ್ರಿಕೆಗಳಲ್ಲಿ ಇತರರಿಗೂ ತಿಳಿಸಿ. ನಿಷ್ಠೆಯಿಂದ ಆಚರಣೆಗೆ ತನ್ನಿ.

೧. ನಿಮ್ಮ ದೂರವಾಣಿಯಿಂದಲೋ, ಮೊಬೈಲ್‌ನಿಂದಲೋ ಅನೇಕ ಸೇವೆಗಳಿಗಾಗಿ ಬ್ಯಾಂಕ್, ವಿಮೆ ಇತ್ಯಾದಿ ಕರೆಮಾಡುತ್ತಿರುತ್ತೀರಿ. ಆಗ ನಿಮಗೆ ಎದುರಾಗುವುದು 'ಇಂಟರ್‍ಯಾಕ್ಟಿವ್ ವಾಯ್ಸ್ ರೆಸ್ಪನ್ಸ್ ಸಿಸ್ಟಮ್.' ಅಲ್ಲಿ ಬರುವ ಮೊದಲ ಹೇಳಿಕೆ- 'ಇಂಗ್ಲಿಷ್‌ಗಾಗಿ ಒಂದನ್ನು ಒತ್ತಿ, ಕನ್ನಡಕ್ಕಾಗಿ ಎರಡನ್ನು ಒತ್ತಿ' ಇತ್ಯಾದಿ. ದಯವಿಟ್ಟು ಕನ್ನಡವನ್ನೇ ಆರಿಸಿಕೊಳ್ಳಿ. ಈ ಆಯ್ಕೆಗಳ ಅಂಕಿ ಅಂಶಗಳ ಬಲದಿಂದ ಆ ಉದ್ಯಮಗಳು ಯಾವ ಭಾಷೆಗೆ ಒತ್ತು ನೀಡಬೇಕೆನ್ನುವ ನಿರ್ಧಾರ ಕೈಗೊಳ್ಳುತ್ತವೆ. ಕನ್ನಡದ ಆಯ್ಕೆಯಿಂದ ಕನ್ನಡ ಬೆಳೆಯುತ್ತದೆ.

೨. ನೀವು ಆಗಿಂದಾಗ ಅಂತರ್ಜಾಲದಲ್ಲಾಗಲೀ, ನೇರವಾಗಿಯಾಗಲೀ ಉದ್ಯಮಗಳು ನಡೆಸುವ ಸರ್ವೆಗಳಲ್ಲಿ ಭಾಗವಹಿಸುತ್ತಿರುತ್ತೀರಿ. ಮುಂದೆ ಆ ರೀತಿ

ಭಾಗವಹಿಸುವಾಗ ನಿಮಗೆ ಗೊತ್ತಿರುವ ಭಾಷೆಯ ಬಗ್ಗೆ ಇರುವ ಪ್ರಶ್ನೆಗೆ 'ಕನ್ನಡ' ಎಂದು ಮಾತ್ರ ದಾಖಲಿಸಿ. ನೀವು ಓದುವ ಪತ್ರಿಕೆಗಳ ಬಗ್ಗೆ ಇರುವ ಪ್ರಶ್ನೆಗೆ ಕನ್ನಡದ ದಿನಪತ್ರಿಕೆಗಳ, ನಿಯತ ಕಾಲಿಕಗಳ ಹೆಸರನ್ನು ಮರೆಯದೆ ನಮೂದಿಸಿ. ಇದರಿಂದ ಆ ಸರ್ವೆಯ ಫಲವಾಗಿ ನಡೆಯುವ ಎಲ್ಲ ಕಾರ್ಯಗಳಲ್ಲೂ ಕನ್ನಡದ ಬಳಕೆಗೆ ಇಂಬುಕೊಟ್ಟಂತಾಗುತ್ತದೆ.

೩. ಇಂದು ಅನೇಕ ವಿಮೆ, ಬ್ಯಾಂಕ್, ಹಣಕಾಸಿನ ವ್ಯವಹಾರದ ಸಂಸ್ಥೆ ಮುಂತಾದ ಉದ್ಯಮಗಳು ತಮ್ಮ ಮಾರಾಟದ ಜಾಲಕ್ಕೆ ಅನೇಕ ಯುವಕರನ್ನು ನೇಮಿಸಿಕೊಂಡಿದೆ. ಇವರಲ್ಲಿ ನಿಜವಾಗಿ ಹೆಚ್ಚು ಮಂದಿ ಹೊರರಾಜ್ಯಗಳಿಂದ, ಅಕ್ಕಪಕ್ಕದ ರಾಜ್ಯಗಳಿಂದ ಇಲ್ಲಿಗೆ ಬಂದವರು. ನಮ್ಮ ಜೊತೆ ವ್ಯವಹರಿಸಲು ಕನ್ನಡ ಬಲ್ಲವರನ್ನೇ ಕಳುಹಿಸಬೇಕೆಂದು ನಾವು ಒತ್ತಾಯಿಸಿ ಕೇಳಬೇಕು. ಇದರಿಂದ ಈ ಉದ್ಯಮಗಳು ತಮ್ಮ ವ್ಯವಹಾರದಲ್ಲಿ ಕನ್ನಡವನ್ನು ಬಳಸಲೇಬೇಕಾದ ಪರಿಸ್ಥಿತಿ ಒದಗಿ ಬರುತ್ತದೆ. ಕನ್ನಡಿಗರಿಗೆ ಉದ್ಯೋಗಾವಕಾಶಗಳು ಒದಗುತ್ತವೆ.

೪. ನಿಮ್ಮ ಮನೆಗಳಿಗೆ ಕಡೆಯಪಕ್ಷ ಒಂದು ಕನ್ನಡ ವಾರ್ತಾಪತ್ರಿಕೆಯನ್ನೂ ಒಂದು ನಿಯತಕಾಲಿಕವನ್ನೂ ತರಿಸಿ. ಅವನ್ನು ಮನೆಯವರೆಲ್ಲಾ ಓದಿ.

೫. ನೀವು ಎಲ್ಲೇ ಇದ್ದರೂ ನಿಮ್ಮ ಮಕ್ಕಳೊಂದಿಗೆ ಕನ್ನಡದಲ್ಲಿ ಮಾತನಾಡಿ. ಇತರ ಕನ್ನಡಿಗರೊಡನೆ ಕನ್ನಡದಲ್ಲೇ ಮಾತನಾಡಲು ಪ್ರೋತ್ಸಾಹಿಸಿ. ಅವರಲ್ಲಿ ಕನ್ನಡ ಪ್ರೇಮದ ಜೊತೆ ಮುಂದಳತ್ವದ ಗುಣಗಳು ಹೆಚ್ಚುವಂತೆ ಮಾಡಿ. ಕನ್ನಡ ತಾಯಿಯರು ಈ ಕೆಲಸವನ್ನು ಪ್ರೀತಿಯಿಂದ ಮಾಡಿರಿ.

೬. ನಿಮ್ಮ ಪ್ರದೇಶದಲ್ಲಿ ನಡೆಯುವ ಕನ್ನಡದ ಕಾರ್ಯಕ್ರಮಗಳಲ್ಲಿ ತಪ್ಪದೆ ಭಾಗವಹಿಸಿ.

೭. ಕನ್ನಡ–ಕನ್ನಡನಾಡು–ಕನ್ನಡಿಗ ಸಾಧಕರು ಈ ಬಗ್ಗೆ ಬೇರೆ ಭಾಷೆಯವರಲ್ಲಿ ಅಭಿಮಾನದಿಂದ ಮಾತನಾಡಿ.

೮. ಆದಷ್ಟೂ ಇತರ ಕನ್ನಡಿಗರಿಗೆ ಸಹಾಯಮಾಡಿ, ಅವರ ಕಾಲನ್ನು ಎಳೆಯಬೇಡಿ. ನೀವು ಕೆಲಸಮಾಡುವ ಸ್ಥಳದಲ್ಲಿ ಇತರರು ಕನ್ನಡ ಮಾತನಾಡುವವರ ಮಧ್ಯೆ ವಿರಸವನ್ನುಂಟುಮಾಡುವ ರೀತಿಯನ್ನು ಅನುಸರಿಸುವುದರ ಬಗ್ಗೆ ಬಹಳ ಎಚ್ಚರದಿಂದಿರಿ. ನಿಮ್ಮ ಒಗ್ಗಟ್ಟನ್ನು ಕಾಪಾಡಿಕೊಳ್ಳಿ.

೯. ಬೇರೆ ರಾಜ್ಯಗಳಿಂದ ಬಂದು ನಿಮ್ಮೊಡನೆ ಕೆಲಸಮಾಡುವ ಮಂದಿಗೆ ಕನ್ನಡ ಕಲಿತು ಅದರಲ್ಲೇ ಮಾತನಾಡಲು ಪ್ರೋತ್ಸಾಹಿಸಿ.

೧೦. ಕನ್ನಡವೆಂದರೆ ಬರಿಯ ಸಾಹಿತ್ಯವಲ್ಲ, ಸುಗಮ ಸಂಗೀತವಲ್ಲ, ಚಲನಚಿತ್ರವಲ್ಲ; ಈ ರೀತಿಯ ಇನ್ನು ಎಷ್ಟೋ ವಿಚಾರಗಳನ್ನು ಒಳಗೊಂಡ ಒಂದು ಸಂಸ್ಕೃತಿ ಎಂಬುದನ್ನು ಯಾವಾಗಲೂ ನೆನಪಿಡಿ. ಕನ್ನಡಿಗರಾಗಿರುವುದಕ್ಕೆ ಹೆಮ್ಮೆಪಡಿ.

– *ಜಿ. ವೆಂಕಟಸುಬ್ಬಯ್ಯ*

* * *

ಜನಪದ ವ್ಯಕ್ತಿ

ಜೀನ್ ಶಾರ್ಪ್

ಇತ್ತೀಚಿಗೆ ಈಜಿಪ್ಟ್‌ನಲ್ಲಿ ಅಹಿಂಸಾತ್ಮಕವಾದ ದೊಡ್ಡ ರಾಜಕೀಯ ಕ್ರಾಂತಿಯೊಂದು ನಡೆಯಿತು. ಈ ಕ್ರಾಂತಿಯ ಪ್ರಭಾವ ಜಗತ್ತಿನಲ್ಲಿ ಎಲ್ಲೆಲ್ಲಿ ಸರ್ವಾಧಿಕಾರಿ ಆಡಳಿತವಿದೆಯೋ ಅಲ್ಲೆಲ್ಲ ಉಂಟಾಯಿತು. ಅದರಿಂದಾಗಿ ಈಗ ಟ್ಯುನಿಸಿಯಾದಲ್ಲಿ ಕೂಡ ಅಲ್ಲಿಯ ಜನ ಸರ್ವಾಧಿಕಾರಿ ಆಡಳಿತದ ವಿರುದ್ಧ ಅಹಿಂಸಾತ್ಮಕ ಹೋರಾಟ ನಡೆಸಿದ್ದಾರೆ. ಅಂಥದೇ ಹೋರಾಟ ಮಯನ್‌ಮರ್, ಇಸ್ಟೇನಿಯಾ, ಜಿಂಬಾಬ್ವೆ ಮತ್ತು ಲಿಬಿಯಾಗಳಲ್ಲಿ ಕೂಡ ನಡೆದಿದೆ. ಅಂತಾರಾಷ್ಟ್ರೀಯ ಅಹಿಂಸಾತ್ಮಕ ಹೋರಾಟಕ್ಕೆ ಪ್ರೇರಣೆ ಕೊಟ್ಟವರು ಅಮೇರಿಕಾದ ಜೀನೆ ಶಾರ್ಪ್. ಈ ವ್ಯಕ್ತಿಗೆ ೮೩ ವರ್ಷ. ನೋಡುವುದಕ್ಕೆ ಅಪಾಯರಹಿತ ಮನುಷ್ಯರಂತೆ ಕಾಣುತ್ತಾರೆ. ಈ ವ್ಯಕ್ತಿಯ ಹೆಸರು ಅಮೇರಿಕಾದ ಜನರಿಗೆ ಗೊತ್ತೇ ಇಲ್ಲ ಎಂದು ಹೇಳಬಹುದು. ಆದರೆ ಈ ವ್ಯಕ್ತಿ ಬೇರೆಲ್ಲ ಭೌತಿಕ ವಿಜ್ಞಾನಿಗಳು ತಮ್ಮ ಪ್ರಯೋಗಾಲಯಗಳಲ್ಲಿ ಸದ್ದುಗದ್ದಲವಿಲ್ಲದೆ ಪ್ರಯೋಗಗಳನ್ನು ಮಾಡುವಂತೆ ಜೀನೆ ಶಾರ್ಪ್ ಕೂಡ ಸಾಮಾಜಿಕ ಜೀವನದ ಪ್ರಯೋಗಾಲಯದಲ್ಲಿ ತಮ್ಮದೇ ಆದ ರೀತಿಯಲ್ಲಿ ಸದ್ದುಗದ್ದಲವಿಲ್ಲದೆ ಅಹಿಂಸಾಕ್ರಾಂತಿಯ ಬಗ್ಗೆ ಅಧ್ಯಯನ ಮಾಡುತ್ತಾ ಆ ಸಂಬಂಧವಾಗಿ ಸಾಹಿತ್ಯವನ್ನು ರಚಿಸಿದ್ದಾರೆ. ಅವರ ಸಂಶೋಧನೆಯ ಫಲವಾಗಿ ಹೊರಬಂದ ಪುಸ್ತಕ 'ಸರ್ವಾಧಿಕಾರತ್ವದಿಂದ ಪ್ರಜಾಪ್ರಭುತ್ವ' ಎಂಬ ಕೇವಲ ೯೩ ಪುಟದ ಪುಸ್ತಕ. ಆ ಪುಸ್ತಕದಲ್ಲಿ ನಿರಂಕುಶ ಪ್ರಭುತ್ವವನ್ನು ಯಾವ ರೀತಿ ಅಹಿಂಸಾತ್ಮಕವಾಗಿ ಉರುಳಿಸಬೇಕೆಂಬುದರ ಬಗ್ಗೆ ಮಾರ್ಗದರ್ಶನವಿದೆ. ೨೦೦೫ ಏಪ್ರಿಲ್ ೬ರಂದು ಈಜಿಪ್ಟ್‌ನ ಯುವ ಚಳುವಳಿ ಪುನರ್‌ಶಕ್ತಿಯನ್ನು ಪಡೆಯಲು ಒದ್ದಾಡುತ್ತಿದ್ದಾಗ ಅದರ ನಾಯಕರು ತಮ್ಮ ಚಳುವಳಿಯನ್ನು ಹೇಗೆ ಯಶಸ್ವಿಗೊಳಿಸಬೇಕೆಂಬುದರ ಬಗ್ಗೆ ಇರಬಹುದಾದ 'ಹುಚ್ಚುಮನಸ್ಸಿನ' ವಿಚಾರಗಳುಳ್ಳ ಪುಸ್ತಕಗಳನ್ನು ಹುಡುಕುವುದಕ್ಕಾಗಿ ಪ್ರಯತ್ನಿಸುತ್ತಿದ್ದಾಗ ಅಕಸ್ಮಿಕವಾಗಿ ಜೀನೆ ಶಾರ್ಪ್‌ರ ಪುಸ್ತಕ ಕೈಗೆ ಸಿಕ್ಕಿತು. ಅಷ್ಟರೊಳಗೆ ಸರ್ಬಿಯನ್ ದೇಶದ ಚಳುವಳಿ ಮೇಲೆ ಶಾರ್ಪ್‌ರ ಪುಸ್ತಕದ ಪ್ರಭಾವ ಬಿದ್ದಿತ್ತು. ಅಲ್ಲದೆ ಅಂತಾರಾಷ್ಟ್ರೀಯ 'ಅಹಿಂಸಾತ್ಮಕ ಹೋರಾಟ ಸಂಸ್ಥೆಯ' ಕಾರ್ಯಕರ್ತರು ಕೈರೋದಲ್ಲಿ ನುಸುಳಿ ಕಾರ್ಯಾಗಾರಗಳನ್ನು ಪ್ರಾರಂಭಿಸಿದ್ದರು. ಆ ಸಮಯದಲ್ಲಿ ಅವರು ಶಾರ್ಪ್‌ರ '೧೯೮ ಅಹಿಂಸಾತ್ಮಕ ಕ್ರಿಯೆಗಳು' ಎಂಬ ಲೇಖನವನ್ನು ಹಂಚಿದರು. ಈ ಪುಸ್ತಕವು 'ಉಪವಾಸ, ಪ್ರತಿಭಟನೆ, ವಸ್ತ್ರವಹೀನತೆ ಮತ್ತು ಗುಪ್ತಚಾರರ ಗುರುತುಗಳನ್ನು ಬಹಿರಂಗ ಪಡಿಸುವುದು' ಮುಂತಾದ ಕ್ರಿಯೆಗಳು ಆ ಪಟ್ಟಿಯಲ್ಲಿದ್ದವು. ಶಾರ್ಪ್ ತುಂಬಾ ಸಂಕೋಚದ ವ್ಯಕ್ತಿ. ಯಾವುದರ ಬಗ್ಗೆಯೂ ತಮ್ಮದೆಂದು ಹೇಳಿಕೊಳ್ಳುವ ಸ್ವಭಾವ ಅವರದಲ್ಲ. ಅವರು ಮೂಲತಃ ಚಿಂತಕರೇ ಹೊರತು ಕ್ರಾಂತಿಕಾರರಲ್ಲ. ಕೊರಿಯಾ ಯುದ್ಧದ ಸಂದರ್ಭದಲ್ಲಿ ಅಹಿಂಸಾತ್ಮಕ ಪ್ರತಿಭಟನೆ ನಡೆಸಿ ೯ ತಿಂಗಳ ಕಾರಾಗೃಹವಾಸ ಅನುಭವಿಸಿದ್ದರು. ಅವರಿಗೆ ಈಜಿಪ್ಟ್ ದೇಶದ ಪ್ರತಿಭಟನಾಕಾರರೊಂದಿಗೆ ಸಂಪರ್ಕವಿರಲಿಲ್ಲ. ಆದರೆ

ಅಲ್ಲಿಯ 'ಇಸ್ಲಾಮಿಕ್ ಸಹೋದರತ್ವ' ಸಂಸ್ಥೆಯು ಜಿ.ನೆ.ಶಾರ್ಪ್‌ರ 'ನಿರಂಕುಶತ್ವದಿಂದ ಪ್ರಜಾಪ್ರಭುತ್ವ' ಎಂಬ ಲೇಖನವನ್ನು ತನ್ನ ವೆಬ್‌ಸೈಟ್‌ಗೆ ಅಳವಡಿಸಿಕೊಂಡಿತು. ಶಾರ್ಪ್ ಗಾಂಧೀಯವರ ಅಹಿಂಸಾತ್ಮಕ ಹೋರಾಟ, ನಾಗರೀಕ ಹಕ್ಕುಗಳಿಗಾಗಿ ಹೋರಾಟ, ಅರ್ಥಿಕ ಅಸಹಕಾರ ಮುಂತಾದವುಗಳನ್ನು ಅಭ್ಯಸಿಸಿ, ಸ್ವಾತಂತ್ರ್ಯ ಪಡೆಯಬೇಕಾದರೆ ತುಂಬ ಎಚ್ಚರಿಕೆಯಿಂದ ರಣನೀತಿಯನ್ನು ತಯಾರಿಸಬೇಕಾಗುತ್ತದೆ ಮತ್ತು ಬಹು ವಿವರಣಾತ್ಮಕ ಯೋಜನೆಯನ್ನು ಹೊಂದಿರಬೇಕಾಗುತ್ತದೆ. ಏಕೆಂದರೆ ಹಿಂಸೆ ಪ್ರತಿಹಿಂಸೆಗೆ ಕಾರಣವಾಗುತ್ತದೆ ಎಂಬುದು ಶಾರ್ಪ್‌ರ ಅಭಿಪ್ರಾಯವಾಗಿತ್ತು. ಅವರ ಮಾತುಗಳು ಈ ರೀತಿ ಇವೆ. ನೀವು ಹಿಂಸಾಬಲದಿಂದ ಹೋರಾಟ ಮಾಡಿದರೆ ಅದು ನಿಮ್ಮ ವೈರಿಯ ಶ್ರೇಷ್ಠ ಆಯುಧದೊಂದಿಗೆ ಹೋರಾಟ ಮಾಡಿದಂತೆ ಆಗುತ್ತದೆ. ನೀವು ಧೈರ್ಯಶಾಲಿಗಳಾಗಿರಬಹುದು, ಆದರೆ ಮೃತನಾಯಕರಾಗುತ್ತೀರಿ. ಶಾರ್ಪ್ ೧೯೮೯ರಲ್ಲಿ ಚೀನಾಕ್ಕೆ ಹೋಗಿ ಅಲ್ಲಿ ತಿಯಾನ್‌ಮನ್ ಚೌಕದಲ್ಲಿ ನಡೆದ ಪ್ರತಿಭಟನೆಗೆ ಸಾಕ್ಷಿಯಾಗಿದ್ದರು. ೧೯೯೦ರಲ್ಲಿ ಮಯನ್ಮಾರ್‌ಗೆ ಕದ್ದು ನುಸುಳಿ ಅಲ್ಲಿಯ ಕ್ರಾಂತಿಕಾರರೊಂದಿಗೆ ಸಂಪರ್ಕ ಬೆಳೆಸಿದರು. ಅವರ ಪ್ರಕಾರ ಅವರ ಕೆಲಸ ಇನ್ನೂ ಮುಗಿದಿಲ್ಲ. ಇತ್ತೀಚಿಗೆ ಅವರು ಇನ್ನೊಂದು ಪುಸ್ತಕ ಬರೆದಿದ್ದಾರೆ. ಆ ಪುಸ್ತಕದ ಹೆಸರು 'ಅಧಿಕಾರ ಮತ್ತು ಹೋರಾಟದ ಶಬ್ದಕೋಶ' ಈ ಪುಸ್ತಕ ಇಷ್ಟರಲ್ಲಿಯೇ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಮೂಲಕ ಪ್ರಕಟವಾಗಲಿದೆ. ಜೀನೆ ಶಾರ್ಪ್‌ರವರು ಗಾಂಧೀಯವರ ಬಗ್ಗೆ ಬರೆದ ಮೊದಲನೆ ಪುಸ್ತಕಕ್ಕೆ ಐನ್‌ಸ್ಟೀನ್ ಮುನ್ನುಡಿ ಬರೆದಿದ್ದರು. ಈ ಮಧ್ಯೆ ಅವರು ಪ್ರಾಚ್ಯ ಏಷ್ಯಾ ಖಂಡದಲ್ಲಿಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಈಜಿಪ್ಟ್‌ನವರು ತಮ್ಮ ಹೋರಾಟದ ಸಮಯದಲ್ಲಿ ಕಾಪಾಡಿಕೊಂಡ ಶಿಸ್ತು, ಶಾಂತಿ ಹಾಗು ನಿರ್ಭಯತೆ ಬಗ್ಗೆ ತುಂಬ ಪ್ರಭಾವಿತರಾಗಿದ್ದಾರೆ. ಅವರ ಪ್ರಕಾರ ಇದು ಗಾಂಧೀಜಿಯವರ ವಿಚಾರವೇ ಆಗಿದೆ. ಶಾರ್ಪ್‌ರ ಪ್ರಕಾರ ಸರ್ವಾಧಿಕಾರದ ಬಗ್ಗೆ ಜನ ಭಯಪಡದಿದ್ದರೆ ಆ ಸರ್ವಾಧಿಕಾರಕ್ಕೆ ಕಂಟಕ ಕಾದಿದೆಯೆಂದೇ ಅರ್ಥ.

(ಸಂಗ್ರಹ : ಸುಕೌ)

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಟ್ರಸ್ಟಿನ ಹಳೆಯ ಉತ್ತಮ ದರ್ಜೆಯ ನೂಲುಗಾರರಾಗಿದ್ದ ಶ್ರೀ ಟಿ.ಎಲ್ ಭೈರಶೆಟ್ಟಿಯವರು ಮೈಸೂರಿನ ವೃದ್ಧಾಶ್ರಮದಲ್ಲಿ ನಿಧನರಾದರು. ಇವರಿಗೆ ದೃಷ್ಟಿ ದೋಷ ವಿದ್ದರೂ ಸಹ ನೂಲುಗಾರಿಕೆ ಮೂಲಕ ಪ್ರತಿ ತಿಂಗಳು ಐದುನೂರು ರೂಪಾಯಿ ಸಂಪಾದನೆ ಮಾಡುತ್ತಿದ್ದರು. ಯಾವಾಗಲು ಕ್ರೀಯಾಶೀಲರಾಗಿರುತ್ತಿದ್ದರು. ಇವರು ಸರ್ವೋದಯ ಪಾತ್ರೆ ಆಂದೋಲನದ ಫಲಾನುಭವಿಗಳಾಗಿದ್ದರು. ಉಳಿದ ಪಲಾನುಭವಿಗಳು ಒಟ್ಟು ಸೇರಿ ಭೈರಶೆಟ್ಟರ ನಿಧನಕ್ಕೆ ಮೌನ ಆಚರಿಸಿದರು. ಟ್ರಸ್ಟ್ ಭೈರಶಟ್ಟಿಯವರನ್ನು ಒಂದು ಸಮಾರಂಭದಲ್ಲಿ ಗೌರವಿಸಿತ್ತು.

ಬೆಂಗಳೂರಿನಲ್ಲಿ ೭೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದ ದಿನ ಶ್ರೀ ಕೃಷ್ಣ ಶಿಶುವಿಹಾರದ ಮಕ್ಕಳು ಕನ್ನಡ ಬಾವುಟದೊಂದಿಗೆ ಮತ್ತು ಕನ್ನಡನಾಡಿನ ಗೀತೆಯೊಂದಿಗೆ ಮೆರವಣಿಗೆ ನಡೆಸಿದರು. ಮೇಲುಕೋಟೆಯಲ್ಲಿ ಉಪನ್ಯಾಸ ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರತಿತಿಂಗಳು ನಡೆಸುವುದಕ್ಕೆ ಸಾಧ್ಯವಾಗುವಂತೆ 'ಸಹೃದಯ ಬಳಗ'ವನ್ನು ಪ್ರಾರಂಭಿಸಲಾಯಿತು. ಬಳಗದ ಕಾರ್ಯಕ್ರಮವನ್ನು ಶ್ರೀ ಎಸ್. ಶ್ರೀನಿವಾಸ ಶೆಟ್ಟರು ಡಿ.ವಿ.ಜಿ ಯವರ ಮಂಕುತಿಮ್ಮನ ಕಗ್ಗದ ಬಗ್ಗೆ ಮಾತನಾಡುವ ಮೂಲಕ ಉದ್ಘಾಟಿಸಿದರು. 'ಸಹೃದಯ ಬಳಗ'ದ ಪರವಾಗಿ ಟ್ರಸ್ಟಿನ ಆಹ್ವಾನಿತ ಸದಸ್ಯರಾದ ಕೆ. ಶ್ರೀನಿವಾಸ್ ಕಾರ್ಯನಿರ್ವಹಿಸುತ್ತಿದ್ದಾರೆ.

ಟ್ರಸ್ಟಿನ ಅಭಿಮಾನಿ ಮತ್ತು ದಾನಿಯೂ ಆಗಿರುವ ಶ್ರೀ ಅಶೋಕ್‌ರಾವ್ ಹೊಸ ಜೀವನ ದಾರಿ ಕೇಂದ್ರದಲ್ಲಿ ಕುಮಾರಿ ಶೋಭ ಎಂಬುವರ ಜೊತೆ ವಿವಾಹವಾದರು. ಅವರ ವಿವಾಹ ಸಂದರ್ಭದಲ್ಲಿ ಸುಮಾರು ೨೦೦ ಜನ ಬಂದಿದ್ದರು. ಆ ಸಮಯದಲ್ಲಿ ಖಾದಿ ಬಟ್ಟೆ ಮಾರಾಟ ಮಾಡಲಾಯಿತು. ಸುಮಾರು ಏಳು ಸಾವಿರ ರೂಪಾಯಿಗಳಷ್ಟು ಖಾದಿ ಮಾರಾಟವಾಯಿತು.

ಮೈಸೂರಿನ 'ಕಾವ' ಸಂಸ್ಥೆಯ ಕಾವ್ಯ ಮತ್ತು ಪ್ರಜ್ಞ ಎಂಬ ಇಬ್ಬರು ವಿದ್ಯಾರ್ಥಿನಿಯರು ಶ್ರೀ ಕೃಷ್ಣ ಕನ್ನಡ ಶಿಶುವಿಹಾರದ ಮಕ್ಕಳೊಂದಿಗೆ ಎರಡು ದಿನ ಕೆಲಸ ಮಾಡಿದರು. ಮಕ್ಕಳಿಗೆ ತಕ್ಕಮಟ್ಟಿಗೆ ಚಿತ್ರಕಲೆ ಪರಿಚಯಿಸಿದರು.

ಪಶ್ಚಿಮವಾಹಿನಿಯಲ್ಲಿ ಪ್ರತಿವರ್ಷ ನಡೆಯುವ ಸರ್ವೋದಯ ಮೇಳದಲ್ಲಿ ಟ್ರಸ್ಟಿನ ಅಧ್ಯಕ್ಷರು ಭಾಗವಹಿದ್ದರು. ಅವರು ಕರ್ನಾಟಕದ ಹಿರಿಯ ಸರ್ವೋದಯ ಕಾರ್ಯಕರ್ತರಾಗಿದ್ದ ಸತ್ಯವ್ರತರ ಬಗ್ಗೆ ಬರೆದ ಪುಸ್ತಕವನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಎಚ್.ಎಸ್ ದೊರೆಸ್ವಾಮಿ ಬಿಡುಗಡೆ ಮಾಡಿದರು.

ಬೆಂಗಳೂರಿನಲ್ಲಿ ಟಿ.ವಿ.ಎಸ್ ಸಂಸ್ಥೆಯು ನಡೆಸುತ್ತಿರುವ ಶಾಲೆಯ ಬಾಲಕ, ಬಾಲಕಿ ಮತ್ತು ಅಧ್ಯಾಪಕರು ಹೊ.ಜೀ.ದಾ ಕೇಂದ್ರದಲ್ಲಿ ಪರಿಸರ ಸಂಬಂಧಿ ಎರಡು ದಿನ ಶಿಬಿರ ನಡೆಸಿದರು. ಈ ಶಿಬಿರದಲ್ಲಿ ೩೦ ಮಕ್ಕಳು ಭಾಗವಹಿಸಿದ್ದರು.

ಫೆಬ್ರವರಿ ೧೫ ರಿಂದ ೨೦ ರವರೆಗೆ ಒರಿಸ್ಸಾ ರಾಜ್ಯದ ಮಯೂರ್ ಭಂಜ್ ಜಿಲ್ಲೆಯ ರಾಸಗೋವಿಂದಪುರ ತಾಲ್ಲೂಕಿನ ರಂಗಮಟಿಯ ಎಂಬ ಆದಿವಾಸಿ ಗ್ರಾಮದಲ್ಲಿ ನಡೆದ ಅಖಿಲ ಭಾರತ ಸರ್ವೋದಯ ಮಂಡಲದ ಅರ್ಧ ವಾರ್ಷಿಕ ಅಧಿವೇಶನದಲ್ಲಿ ಟ್ರಸ್ಟಿನ ಅಧ್ಯಕ್ಷರು ಮತ್ತು ಗಿರಿಜಾ ಕೌಲಗಿ ಭಾಗವಹಿಸಿದ್ದರು.

ಟ್ರಸ್ಟಿನ ಕಾರ್ಯಕಾರಿ ಸಮಿತಿ ಸಭೆ ಫೆಬ್ರವರಿ ೧೦ ರಂದು ಟ್ರಸ್ಟಿನ ಧರ್ಮದರ್ಶಿ ಶ್ರೀ ಕೆ.ಮಾದೇಗೌಡರ ಮೈಸೂರಿನ ಮನೆಯಲ್ಲಿ ನಡೆಯಿತು. ಲೆಕ್ಕ ಪತ್ರ ಪರೀಶೀಲನೆ ಮತ್ತು ಇತರ ಕಾರ್ಯಕ್ರಮದ ಬಗ್ಗೆ ಸ್ಥೂಲವಾದ ಚರ್ಚೆ ನಡೆಯಿತು.

ಫೆಬ್ರವರಿ ೨೪ ರಂದು ಟ್ರಸ್ಟಿನ ಕಾರ್ಯ ಕಾರಿ ಸಮಿತಿಯ ವಿಶೇಷ ಸಭೆ ಮೇಲುಕೋಟೆಯಲ್ಲಿ ನಡೆಯಿತು. ಜನವರಿ ಮಾಹೆಯ ಲೆಕ್ಕ ಪತ್ರ ಪರಿಶೀಲಿಸಲಾಯಿತು. ಟ್ರಸ್ಟಿನ ಸ್ಥಾಪನೆಯ ಸುವರ್ಣ ಮಹೋತ್ಸವವನ್ನು ಮಾರ್ಚ್ ೨೭ ರಂದು ನಡೆಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಖರ್ಚಿನ ವಿವರ ಮತ್ತು ಇತರ ವಿಷಯದ ಬಗ್ಗೆ ತೀರ್ಮಾನ ಕೈಗೊಳ್ಳಲಾಯಿತು.

ಸಸ್ಯ ಶಾಸ್ತ್ರಜ್ಞ ಶ್ರೀ ಸದಾನಂದ, ಹರಿದಾಸ ಸಾಹಿತ್ಯದ ಡಾ॥ ಬಿ.ಎನ್. ನಾಗರತ್ನ, ಮಂಡ್ಯ ಜಿಲ್ಲಾ ಪಂಚಾಯತ್ ಪರಿಷತ್ತಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಯರಾಮ್‌ರವರು ಇತರ ಕೆಲವು ಅಧಿಕಾರಿಗಳೊಂದಿಗೆ ಟ್ರಸ್ಟಿಗೆ ಭೇಟಿ ಕೊಟ್ಟರು.

೨೦೧೧ ಫೆಬ್ರವರಿ ಮಾಹೆಯ ದಾನಿಗಳು

ಶ್ರೀ ರಾಮಮೂರ್ತಿ, ಶ್ರೀಮತಿ ಚೊಕ್ಕೂಬಾಯಿ,
ಶ್ರೀ ಎಸ್.ನಾಗಭೂಷಣ್,
ಶ್ರೀ ಆರ್.ಆರ್.ಆನವಟ್ಟಿ – ಬೆಂಗಳೂರು
ಶ್ರೀ ಬಿ.ಆರ್.ದೇಶಪಾಂಡೆ – ಜಮಖಂಡಿ

ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

* * *

ಜನಪದ ನಿಲಯದ ಅಂತರಂಗದಲ್ಲಿ.. ೮೮

- ಸುರೇಂದ್ರ ಕೌಲಗಿ



ವಾರ್ಧಾ ಜಿಲ್ಲೆಯಲ್ಲಿ ಗಾಂಧೀಜಿಯವರ ಸೇವಾಗ್ರಾಮ ಆಶ್ರಮವಿದೆ. ಸೇವಾಗ್ರಾಮ ಆಶ್ರಮದಿಂದ ಸುಮಾರು ಏಳು ಮೈಲಿ ದೂರದಲ್ಲಿ ಪರಂಧಾಮ್ ನದಿಯ ದಡದಲ್ಲಿ ಸಂತ ವಿನೋಬಾಭಾವೆಯವರ ಬ್ರಹ್ಮ ವಿದ್ಯಾಮಂದಿರವೆಂಬ ಹೆಸರಿನ ಆಶ್ರಮದಲ್ಲಿ ಮಹಿಳೆಯರು ಬ್ರಹ್ಮ ವಿದ್ಯೆ ಬಗ್ಗೆ ಅಧ್ಯಯನ ನಡೆಸುತ್ತಾ, ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಾರೆ. ಭಾರತದ ಬೇರೆ ಬೇರೆ ರಾಜ್ಯಗಳ ಮಹಿಳೆಯರು ಈ ಆಶ್ರಮದಲ್ಲಿ ಇದ್ದಾರೆ. ಇಂಥವರಲ್ಲಿ ಕರ್ನಾಟಕದ ಚನ್ನಮ್ಮ ಹಳ್ಳಿಕೇರಿಯವರು ಒಬ್ಬರು. ಇವರನ್ನು ಇಲ್ಲಿ ಸ್ಮರಿಸಲು ಕಾರಣವೇನೇಂದರೆ ಜನಪದ ಸೇವಾ ಟ್ರಸ್ಟಿನ ಪುಸ್ತಕಾಲಯದ ಘಸತೆಯನ್ನು ಹೆಚ್ಚಿಸಿರುವ ವಿನೋಬಾರ ಸಂಪೂರ್ಣ ಸಾಹಿತ್ಯದ ಬೆಲೆ ಮೂರು ಸಾವಿರ ರೂಪಾಯಿಗಳಷ್ಟು. ಇಷ್ಟು ದೊಡ್ಡ ಮೌಲ್ಯದ ಬೆಲೆಯ 'ಸಾಹಿತ್ಯ'ವು ಟ್ರಸ್ಟಿನ ಪುಸ್ತಕಾಲಯಕ್ಕೆ ಉಚಿತವಾಗಿ ದೊರೆಯುವಂತೆ ಮಾಡಿದ್ದಕ್ಕಾಗಿ ಚನ್ನಮ್ಮನವರಿಗೆ ಟ್ರಸ್ಟ್ ಕೃತಜ್ಞತೆವುಳ್ಳದ್ದಾಗಿದೆ. ವಿನೋಬಾ ಸಾಹಿತ್ಯವನ್ನು ೨೧ ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಮೊದಲನೆಯ ಸಂಪುಟದ ಹೆಸರು ಋಗ್ವೇದ ಸಾರಃ. ಈ ಸಂಪುಟದಲ್ಲಿ ೩೮೮ ಪುಟಗಳಷ್ಟು ಸಾಹಿತ್ಯ ಋಗ್ವೇದಕ್ಕೆ ಸಂಬಂಧಿಸಿದ್ದಾಗಿದೆ. ಈ ೩೮೮ ಪುಟಗಳಲ್ಲಿ ೧೪೩ ಪುಟಗಳಷ್ಟು ಸಾಹಿತ್ಯವನ್ನು ಕನ್ನಡದಲ್ಲಿ ಅನುವಾದಮಾಡಿ 'ಜನಪದ ವಿಚಾರ'ದಲ್ಲಿ ಕ್ರಮಶಃ ಪ್ರಕಟಿಸಲಾಗಿದೆ. ಇನ್ನು ಉಳಿದ ಪುಟಗಳಲ್ಲಿಯ ಸಾಹಿತ್ಯವನ್ನು ಕ್ರಮಶಃ ಪ್ರಕಟಿಸುತ್ತಾ ಹೋಗಲಾಗುವುದು. ಎರಡನೆ ಸಂಪುಟದ ಹೆಸರು ಅಷ್ಟಾದಾಶಿ. ಇದರಲ್ಲಿ ಈಶೋಪನಿಷತ್, ಕೇನೋಪನಿಷತ್, ಕಠೋಪನಿಷತ್, ಪ್ರಶ್ನೋಪನಿಷತ್, ಮುಂಡಕೋಪಕನಿಷತ್, ತೈತ್ತಿರೀಯೊಪನಿಷತ್, ಐತರೇಯೋಪನಿಷತ್, ಛಾಂದೋಗ್ಯೋಪನಿಷತ್, ಬೃಹದಾರಣ್ಯಕೋಪನಿಷತ್, ಶ್ವೇತಾಷ್ವರೋಪನಿಷತ್, ಕೌಶೀತಕಿ ಬ್ರಾಹ್ಮಣೋಪನಿಷತ್, ಮೈತ್ರಾಯಣ್ಯುಪನಿಷತ್, ನಾರಾಯಣೋಪನಿಷತ್, ಜಾಬಾಲೋಪನಿಷತ್ ಹೀಗೆ ಒಟ್ಟು ೧೮ ಉಪನಿಷತ್‌ಗಳ ಪರಿಚಯದೊಂದಿಗೆ ಪ್ರತಿಯೊಂದು ಉಪನಿಷತ್‌ಗಳಲ್ಲಿಯ ಶ್ಲೋಕಗಳ ಅರ್ಥವನ್ನು ಕೊಡಲಾಗಿದೆ. ಪರಿಸ್ಥಿತಿ ಅನುಕೂಲವಿದ್ದ ಪಕ್ಷದಲ್ಲಿ ಇದೆಲ್ಲ ಸಾಹಿತ್ಯ ಜನಪದ ವಿಚಾರದ ವಾಚಕರಿಗೆ ದೊರೆಯಬಹುದು. ಈ ಉಪನಿಷತ್‌ಗಳು ಈಗ ಕನ್ನಡದಲ್ಲಿ ದೊರೆಯುತ್ತಿಲ್ಲವೆಂದು ಅರ್ಥವಲ್ಲ. ಆದರೆ ವಿನೋಬಾ ಭಾವೆಯವರು ಈ ಉಪನಿಷತ್‌ಗಳ ಬಗ್ಗೆ ಮಾಡಿರುವ ಅರ್ಥ ಬಹು ರಮ್ಯವಾಗಿದೆ, ಮನೋಹರವಾಗಿದೆ, ವಿಶಿಷ್ಟವಾಗಿದೆ ಎಂಬ ಕಾರಣಕ್ಕಾಗಿ ಈ ಸಂಪುಟದ ಮಹತ್ವವಿದೆ. ಗ್ರಂಥಾಲಯದಲ್ಲಿ

ಎಷ್ಟು ಪುಸ್ತಕಗಳಿವೆ ಎಂಬುದಕ್ಕಿಂತ ಅಲ್ಲಿ ಮೌಲಿಕ ಸಾಹಿತ್ಯದ ಪುಸ್ತಕಗಳು ಎಷ್ಟಿವೆ ಎಂಬುದು ಮುಖ್ಯವಾದುದು. ಆ ದೃಷ್ಟಿಯಿಂದ ಚನ್ನಮ್ಮ ಹಳ್ಳಿಕೇರಿಯವರು ಕೊಡ ಮಾಡಿದ ಈ ಸಾಹಿತ್ಯಕ್ಕಾಗಿ ಜನಪದ ಸೇವಾ ಟ್ರಸ್ಟ್ ಅವರಿಗೆ ತುಂಬಾ ಆಭಾರಿಯಾಗಿದೆ. ಇತ್ತೀಚೆಗೆ ಟ್ರಸ್ಟಿನ ಗ್ರಂಥಾಲಯಕ್ಕೆ ಟ್ರಸ್ಟಿನ ಅಭಿಮಾನಿಯಾದ ಶ್ರೀ ನೀಲತ್ತಹಳ್ಳಿ ಕಸ್ತೂರಿ ಉಪಯುಕ್ತಕರವಾದ ಕೆಲವು ಪುಸ್ತಕ ಕೊಟ್ಟಿದ್ದಾರೆ. ಅಂತೆಯೇ ಶ್ರೀ ಕೆ.ಆರ್.ಮೋಹನ್ ಕೂಡ ಕೆಲವು ಪುಸ್ತಕ ಕೊಟ್ಟಿದ್ದಾರೆ. ಈ ಇಬ್ಬರು ಪುಸ್ತಕ ದಾನಿಗಳಿಗೂ ಕೂಡ ಟ್ರಸ್ಟ್ ಆಭಾರಿಯಾಗಿದೆ. ಆದರೆ ಇಲ್ಲಿರುವ ಸಮಸ್ಯೆ ಏನೆಂದರೇ ಪುಸ್ತಕಗಳನ್ನು ಹೆಚ್ಚು ವ್ಯವಸ್ಥಿತವಾಗಿ ಇಡಲು ಅಗತ್ಯವಾದ ರ್‍ಯಾಕ್ ಮತ್ತು ಬೀರುಗಳ ಕೊರತೆ.

* * *

ಪತ್ರಿಕೆಯ ಒಡೆತನ ಮತ್ತು ಇತರ ವಿವರಗಳ ಪ್ರಕಟಣೆ

ಪ್ರಾರೂಪ ೪ [ವಿಧಿ-೮]

೧) ಪ್ರಕಟಣೆಯ ಸ್ಥಳ	: ಮೇಲುಕೋಟೆ
೨) ಪ್ರಕಟಣೆಯ ನಿಯತಕಾಲಿಕತೆ	: ತಿಂಗಳಿಗೊಮ್ಮೆ
೩) ಮುದ್ರಕರ ಹೆಸರು	: ಸಂಕೇತ್ ಮುದ್ರಣ
ಭಾರತದ ಪ್ರಜೆಯೇ?	: ಹೌದು
ವಿಳಾಸ	: ಸಂಕೇತ್ ಮುದ್ರಣ ಕಲ್ಯಾಣಿ ಬೀದಿ, ಮೇಲುಕೋಟೆ
೪) ಪ್ರಕಾಶಕರ ಹೆಸರು	: ಸುರೇಂದ್ರ ಕೌಲಗಿ
ಭಾರತದ ಪ್ರಜೆಯೇ?	: ಹೌದು
ವಿಳಾಸ	: ಕಲ್ಯಾಣಿ ಬೀದಿ, ಮೇಲುಕೋಟೆ
೫) ಗೌ॥ ಪ್ರಧಾನ ಸಂಪಾದಕರ ಹೆಸರು	: ಸುರೇಂದ್ರ ಕೌಲಗಿ
ಭಾರತದ ಪ್ರಜೆಯೇ?	: ಹೌದು
ವಿಳಾಸ	: ಕಲ್ಯಾಣಿ ಬೀದಿ, ಮೇಲುಕೋಟೆ
೬) ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಗಳ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳದ ಶೇ. ೧ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರಾದವರ ಹೆಸರು ಮತ್ತು ವಿಳಾಸ	: ಜನಪದ ಸೇವಾ ಟ್ರಸ್ಟ್, ಮೇಲುಕೋಟೆ-೫೭೧೪೩೧

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು ನಾನು ಸುರೇಂದ್ರ ಕೌಲಗಿ ಘೋಷಿಸುತ್ತೇನೆ.

ದಿನಾಂಕ: ೭-೩-೨೦೧೧
ಮೇಲುಕೋಟೆ-೫೭೧೪೩೧

ಪ್ರಕಾಶಕ(ಸಹಿ)
ಸುರೇಂದ್ರ ಕೌಲಗಿ

ಸರ್ವೋದಯ ಆಂದೋಲನದ ಮುನ್ನಡೆ

ಸರ್ವೋದಯ ಆಂದೋಲನದ ಶಿಖರಪ್ರಾಯ ಸಂಸ್ಥೆಯಾದ ಅಖಿಲ ಭಾರತ ಸರ್ವೋದಯ ಮಂಡಲದ ಅರ್ಧ ವಾರ್ಷಿಕ ಅಧಿವೇಶನ ಒರಿಸ್ಸಾ ರಾಜ್ಯದ ಮಯೂರ್‌ಭಂಜ್ ಜಿಲ್ಲೆಯ ರಾಸಗೋವಿಂದಪುರ ತಾಲ್ಲೂಕಿನ ರಂಗಮಟಿಯ ಎಂಬ ಆದಿವಾಸಿಗಳ ಪ್ರದೇಶದಲ್ಲಿ ನಡೆಯಿತು. ಈ ಅಧಿವೇಶನದಲ್ಲಿ ದೇಶದ ವಿವಿಧ ಬಾಗಗಳಿಂದ ೬೨೦ ಸರ್ವೋದಯ ಆಂದೋಲನದ ಸಕ್ರಿಯ ಕಾರ್ಯಕರ್ತರು ಭಾಗವಹಿಸಿದ್ದರು. ಈ ಅಧಿವೇಶನ ಫೆಬ್ರವರಿ ೨೦ ಮತ್ತು ೨೧ನೇ ತಾರೀಖುಗಳಲ್ಲಿ ನಡೆಯಿತು. ಅಧಿವೇಶನದ ಅಧ್ಯಕ್ಷತೆಯನ್ನು ತಮ್ಮ ಅಧಿಕಾರವಧಿಯಿಂದ ನಿರ್ಗಮಿಸಲಿದ್ದ ಡಾ॥ ಸುಗಣ್ ಭರಂಟ್ ವಹಿಸಿದ್ದರು. ಈ ಅಧಿವೇಶನದಲ್ಲಿ ಭ್ರಷ್ಟಾಚಾರ ನಿರ್ಮೂಲನದ ತುರ್ತು ಅಗತ್ಯತೆ ಬಗ್ಗೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚೆ ನಡೆಯಿತು. ಮತ್ತು ಈ ಸಂಬಂಧವಾದ ಸೂಕ್ತ ನಿರ್ಣಯವನ್ನು ಕೈಗೊಳ್ಳಲಾಯಿತು. ಮಾನವ ಹಕ್ಕುಗಳ ಕಾಯ್ದೆಯನ್ನು ಉಲ್ಲಂಘಿಸಿ ಆ ಜೀವ ಕಾರಾಗೃಹ ಶಿಕ್ಷೆ ಅನುಭವಿಸುತ್ತಿರುವ ಡಾ॥ ವಿನಾಯಕ ಸೇನರ ಬಗ್ಗೆ ಅಧಿವೇಶನ ತನ್ನ ಕಳವಳವನ್ನು ವ್ಯಕ್ತಪಡಿಸಿತು. ಸೇನರ ಬಿಡುಗಡೆಗಾಗಿ ಸರ್ಕಾರದ ಮೇಲೆ ಒತ್ತಾಯ ತರಬೇಕೆಂದು ಅಭಿಪ್ರಾಯ ಪಟ್ಟಿತು. ಅಧಿವೇಶನದಲ್ಲಿ ಹಾಜರಿದ್ದ ಎಲ್ಲ ರಾಜ್ಯಗಳ ಸರ್ವೋದಯ ಮಂಡಲಿಗಳ ಅಧ್ಯಕ್ಷರು ತಮ್ಮ ತಮ್ಮ ರಾಜ್ಯದ ಕಾರ್ಯ ವರದಿಯನ್ನು ಸಲ್ಲಿಸಿದರು. ಈ ಅಧಿವೇಶನದ ವ್ಯವಸ್ಥೆಯನ್ನು ಒರಿಸ್ಸಾ ರಾಜ್ಯ ಸರ್ವೋದಯ ಮಂಡಲಿ ಮಾಡಿತ್ತು. ಡಾ॥ ಸುಗುಣ್ ಭರಂಟರ ಮೂರು ವರ್ಷದ ಅಧ್ಯಕ್ಷ ಅವಧಿ ಮುಗಿದದ್ದರಿಂದ ಮುಂದಿನ ಮೂರು ವರ್ಷಕ್ಕೆ ರಾಧಾಭಟ್ ಎಂಬುವವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ರಾಧಾಭಟ್ ಅವರು ಸದ್ಯ ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದಾರೆ. ಅವರು ಉತ್ತಾರಾಂಚಲ ರಾಜ್ಯದಲ್ಲಿ ಮತ್ತು ಮಧ್ಯಪ್ರದೇಶದಲ್ಲಿ ಬಹಳ ವರ್ಷಗಳಿಂದ ರಚನಾತ್ಮಕ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದಾರೆ. ಪರಿಸರ ಉಳಿಸಿ ಆಂದೋಲನಗಳ ಜೊತೆಗೆ ತಮ್ಮ ಸಂಪರ್ಕ ಇಟ್ಟುಕೊಂಡಿದ್ದಾರೆ.

೧೯೪೮ನೇ ಇಸವಿ ಫೆಬ್ರವರಿ ೧೧ನೇ ತಾರೀಖು ಶ್ರೀರಂಗಪಟ್ಟಣದ ಬಳಿ ಇರುವ ಪಶ್ಚಿಮ ವಾಹಿನಿಯಲ್ಲಿ ಗಾಂಧೀಜಿಯವರ ಚಿತಾಭಸ್ಮವನ್ನು

ವಿಸರ್ಜಿಸಲಾಯಿತು. ಅಂದಿನಿಂದ ಪ್ರತಿವರ್ಷ ಪಶ್ಚಿಮವಾಹಿನಿಯಲ್ಲಿ ಸರ್ವೋದಯ ಮೇಳ ನಡೆಯುತ್ತಾ ಬಂದಿದೆ. ಈ ಮೇಳವು ಮೂರುದಿನಗಳ ಕಾಲ ನಡೆಯುತ್ತದೆ. ಆ ಸಮಯದಲ್ಲಿ ಕರ್ನಾಟಕ ರಾಜ್ಯದ ವಿವಿಧ ಭಾಗಗಳಿಂದ ನೂರಾರು ಕಾರ್ಯಕರ್ತರು ಸೇರುತ್ತಾರೆ ಮತ್ತು ಸರ್ವೋದಯ ಆಂದೋಲನದ ಬಗ್ಗೆ ಚಿಂತನೆ ಮತ್ತು ಚರ್ಚೆ ನಡೆಸುತ್ತಾರೆ. ಈ ಮೇಳದ ಖರ್ಚನ್ನು ಪಶ್ಚಿಮವಾಹಿನಿಯ ಅಕ್ಕ ಪಕ್ಕದ ಗ್ರಾಮಸ್ಥರು ವಹಿಸಿಕೊಳ್ಳುತ್ತಾರೆ. ಈ ವರ್ಷದ ಮೇಳಾದಲ್ಲಿ ಮಹಿಳೆಯರ ಪ್ರಾತಿನಿಧ್ಯ, ಪಂಚಾಯತಿಗಳ ಸಬಲೀಕರಣ ಮತ್ತು ಸ್ವಯಂ ಸೇವಾ ಸಂಸ್ಥೆಗಳಲ್ಲಿಯ ಪರಿಶುದ್ಧತೆ ಈ ವಿಷಯವಾಗಿ ಕ್ರಮವಾಗಿ ಬಿ.ಪಿ.ಇಂದಿರಾ ಮತ್ತು ಪಿ.ಜಯದೇವ್ ಮತ್ತು ಸುರೇಂದ್ರ ಕೌಲಗಿ ಮಾತನಾಡಿದರು. ಮೇಳದ ಅಧ್ಯಕ್ಷತೆಯನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಎಚ್.ಎಸ್.ದೂರೆಸ್ವಾಮಿ ವಹಿಸಿದ್ದರು. ಕರ್ನಾಟಕದ ಶ್ರದ್ಧಾವಂತ, ನಿಷ್ಠಾವಂತ ಸರ್ವೋದಯ ಆಂದೋಲನದ ಜೀವನ ದಾನಿ ಕಾರ್ಯಕರ್ತರಾಗಿದ್ದ ದಿವಂಗತ ಸತ್ಯವ್ರತರನ್ನು ಕುರಿತು ಸುರೇಂದ್ರ ಕೌಲಗಿಯವರು ಬರೆದ ಪುಸ್ತಕವನ್ನು ಮೇಳದಲ್ಲಿ ದೂರೆಸ್ವಾಮಿ ಬಿಡುಗಡೆ ಮಾಡಿದರು. ಮೇಳದ ಸಂದರ್ಭದಲ್ಲಿ ಖಾದಿ ಮತ್ತು ಸರ್ವೋದಯ ಸಾಹಿತ್ಯದ ಮಾರಾಟದ ವ್ಯವಸ್ಥೆ ಮಾಡಲಾಗಿತ್ತು.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸರ್ವ ಸೇವಾ ಸಂಘದ ಮೂಲಕ ೨೫.೮೦೦ ಗಾಂಧೀಜಿಯವರ ಆತ್ಮಕಥೆಗಳು ೧೭.೬೦೦ ಹಿಂದ್ ಸ್ವರಾಜ ಸಾಹಿತ್ಯ ಮಾರಾಟವಾಗಿದೆ. ಐದು ವರ್ಷಗಳ ವರೆಗೆ ಸರ್ವೋದಯ ಯುವ ಕಾರ್ಯಕರ್ತರಾದ ಅಶೋಕ ಭಾರತ್, ಸತ್ಯಪ್ರಕಾಶ ಭಾರತ್ ಮತ್ತು ಅವಿನಾಶ್ ಇನ್ನು ಕೆಲವು ಯುವಕರು ಹಿಂದ್ ಸ್ವರಾಜ್ ಕುರಿತೇ ಯಾತ್ರೆ ಮಾಡುತ್ತಿದ್ದಾರೆ. ಕಳೆದ ಒಂದೂವರೆ ವರ್ಷದಲ್ಲಿ ಅವರು ೨೦೦ಕ್ಕೂ ಹೆಚ್ಚು ಶಾಲಾ ಕಾಲೇಜ್‌ಗೆ ಭೇಟಿ ಕೊಟ್ಟು ಒಂದು ಲಕ್ಷ ರೂಪಾಯಿಯ ಸಾಹಿತ್ಯ ಮಾರಾಟ ಮಾಡಿದ್ದಾರೆ. ದೇಶಾದ್ಯಂತ ಇದುವರೆಗೆ ೨೮೦೦ ಲೋಕ ಸೇವಕರು, ೩೨೦೦ ಸರ್ವೋದಯ ಮಿತ್ರರು ಇದ್ದಾರೆ.

* * *

ಖಾದಿ ವಿಚಾರ

ಖಾದಿ ಉದ್ಯಮ ಬೇರೆಲ್ಲ ಉದ್ಯಮಗಳಿಗಿಂತ ಸಂಘ ಶಕ್ತಿಯಲ್ಲಿ ದುರ್ಬಲ. ಆದರೆ ಐತಿಹಾಸಿಕ ಕಾರಣದಿಂದಾಗಿ ಖಾದಿ ದೇಶಾಭಿಮಾನದ, ಸ್ವದೇಶಿ ವಿಚಾರದ ಸಂಕೇತ. ಅಲ್ಲದೇ ಖಾದಿ ಶೋಷಣೆಮುಕ್ತ ವಿಕೇಂದ್ರಿಕೃತ, ಶ್ರಮಾಧಾರಿತ ಸಮಾಜ ನಿರ್ಮಾಣದ ಬಯಕೆಯ ಸಂಕೇತವೂ ಆಗಿದೆ. ಆದ್ದರಿಂದ ಖಾದಿ ಉದ್ಯಮಕ್ಕೆ ಸಂಬಂಧಿಸಿದವರು ಖಾದಿಯನ್ನು ಉಳಿಸಲು, ಬೆಳೆಸಲು ಮತ್ತು ಜನಪ್ರಿಯಗೊಳಿಸಲು ಅಹರ್ನಿಶಿ ಕೆಲಸ ಮಾಡುತ್ತಿದ್ದಾರೆ. ಜಾಗತೀಕರಣದ ಬಿರುಗಾಳಿಯಲ್ಲಿ ಸಿಕ್ಕಿಕೊಂಡಿರುವ ಸರ್ಕಾರಕ್ಕೆ ಖಾದಿ ಉದ್ಯಮ ಸದಾ ಅಸ್ತಿತ್ವದಲ್ಲಿ ಇರಬೇಕೆಂಬ ವಿಷಯದ ಕಡೆಗೆ ಗಮನ ಸೆಳೆಯಲು ಹೋರಾಟ ನಡೆಸುತ್ತಲೇ ಇದ್ದಾರೆ. ಅಂಥ ಹೋರಾಟದ ಒಂದು ಅಂಗವಾಗಿ ಇತ್ತೀಚೆಗೆ ದಿಲ್ಲಿಯಲ್ಲಿರುವ ಗಾಂಧೀ ಸ್ಮೃತಿ ಮತ್ತು ದರ್ಶನ ಸಮಿತಿಯು ಫೆಬ್ರವರಿ ೨೨ ರಿಂದ ೨೫ನೇ ದಿನಾಂಕದ ವರೆಗೆ ರಾಜಘಾಟ್ ಬಳಿ ಚರಕಾ ಸಮ್ಮೇಳನವನ್ನು ನಡೆಸಿತು. ನೂರಾರು ಚರಕಗಳು ಅಲ್ಲಿ ಕ್ರಿಯಾ ಶೀಲವಾಗಿದ್ದವು. ಆ ಚರಕಗಳಿಂದ ಹೊರಟ ಧ್ವನಿ ಕ್ಷೀಣವಾಗಿದ್ಧರೂ ಸಹ ದೇಶದ ಸಾಮಾನ್ಯ ಜನತೆಯ ಆರ್ಥಿಕ ಆಧಾರವಾಗಿರುವ ಚರಕದ ಪುನಶ್ಚೇತನ ಮತ್ತು ಅದನ್ನು ಪುನರ್‌ಶಕ್ತಿಯುತ ಮಾಡುವ ಅಗತ್ಯವನ್ನು ಸಾರಿ ಹೇಳುತ್ತಿತ್ತು. ಸಮ್ಮೇಳನದಲ್ಲಿನ ಸುಮಾರು ಭಾರತದ ವಿವಿಧ ಪ್ರದೇಶಗಳಿಂದ ಬಂದ ಒಂದು ಸಾವಿರ ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಸಮ್ಮೇಳನ ನಂತರ ಖಾದಿ ಉದ್ಯಮದ ಸಮಸ್ಯೆಯನ್ನು ಕುರಿತು ವಿಚಾರಗೋಷ್ಠಿಗಳನ್ನು ನಡೆಸಲಾಯಿತು. 'ಗಾಂಧೀಸ್ಮೃತಿ ಮತ್ತು ದರ್ಶನ ಸಮಿತಿ'ಗಳಿಗೆ ದೇಶದ ಪ್ರಧಾನಿ ಡಾ॥ ಮನಮೋಹನ್ ಸಿಂಗ್ ಅಧ್ಯಕ್ಷರಾಗಿದ್ದಾರೆ.

ಖಾದಿ ಮಿಷನ್ ಬಗ್ಗೆ ಖಾದಿ ಪ್ರೇಮಿಗಳಿಗೆಲ್ಲ ಗೊತ್ತು. ಈ ಮಿಷನ್ ದೇಶದ ಖಾದಿ ಸಂಸ್ಥೆಗಳ ಧ್ವನಿಯಾಗಿದೆ. ಖಾದಿ ಉದ್ಯಮದ ಸಮಸ್ಯೆಗಳನ್ನು ಖಾದಿ ಗ್ರಾಮೋದ್ಯೋಗ ಆಯೋಗಕ್ಕೆ ತಿಳಿಸುವುದು ಮತ್ತು ಇತರ ಸಮಸ್ಯೆಗಳ ಪರಿಹಾರಕ್ಕೆ ಒಗ್ಗೂಡಿ ಪ್ರಯತ್ನ ಮಾಡುವುದು ಈ ಮಿಷನ್ ಉದ್ದೇಶ. ಪ್ರತಿವರ್ಷದಂತೆ ಖಾದಿ ಮಿಷನ್ ಮಾರ್ಚ್ ೨೫ ಮತ್ತು ೨೬ ರಂದು ಸೇವಾಗ್ರಾಮದಲ್ಲಿ ಖಾದಿ ಸಭೆಯನ್ನು ಏರ್ಪಡಿಸಿದೆ. ಖಾದಿ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆ, ಹಮ್ಮಿ ಕೊಂಡಿರುವ ಹೊಸ ಯೋಜನೆಗಳು ಹಾಗೂ ಸರ್ಕಾರ ಮತ್ತು ಖಾದಿ ಆಯೋಗ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸುವುದು ಈ ಸಭೆಯ ಉದ್ದೇಶವಾಗಿದೆ. ಇದಲ್ಲದೆ ಖಾದಿ ಮಿಷನ್ನಿನ ಪ್ರಾದೇಶಿಕ ಸಂಘಟನೆಗಳನ್ನು ಬಲಪಡಿಸುವ ವಿಚಾರ, ಮಾರುಕಟ್ಟೆ ಅಭಿವೃದ್ಧಿ ಸಹಾಯಧನದ ಅನುಷ್ಠಾನದ ಬಗ್ಗೆ ಇರುವ ಕಷ್ಟಗಳ ಬಗ್ಗೆ ಆಲೋಚನೆ, ಏಷಿಯಾ ಅಭಿವೃದ್ಧಿ ಬ್ಯಾಂಕ್‌ನಿಂದ ಧನ ಸಹಾಯ ಪಡೆಯುವ ವಿಷಯದ ಬಗ್ಗೆ, ಬಾಕಿ ಉಳಿದಿರುವ ಖಾದಿ ರಿಬೇಟ್ ಪಾವತಿಯಾಗುವ ಬಗ್ಗೆ ಮತ್ತು ಮುಂದಿನ ಖಾದಿ ಯೋಜನೆ ಬಗ್ಗೆಯೂ ಈ ಸಭೆಯಲ್ಲಿ ಚರ್ಚಿಸಲಾಗುವುದು. ಇದರಲ್ಲಿ ಭಾಗವಹಿಸುವುದಕ್ಕೆ ಆಸಕ್ತಿವುಳ್ಳವರು,

ಖಾದಿ ಮಿಷನ್, ಗೋಪುರಿ, ವಾರ್ಧಾ ೪೪೨೧೧೪ ಸಂಪರ್ಕಿಸಬಹುದು.

ದೂರವಾಣಿ ಸಂಖ್ಯೆ : ೦೭೧೫೨– ೨೪೦೫೮೩.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಎಸ್.ಶ್ರೀನಿವಾಸಶೆಟ್ಟಿ; ಶ್ರೀ ಕೆ.ವಿ.ಶ್ರೀನಿವಾಸ್ – ಮೈಸೂರು
ಶ್ರೀ ಎಂ.ಎಸ್.ರಂಗನಾಥ್; ಶ್ರೀ ಸಿ.ಜಿ.ಸಿದ್ದಯ್ಯ – ಬೆಂಗಳೂರು
ಶ್ರೀ ಹೆಚ್.ಎಂ.ಶಿವಣ್ಣ – ಹಾಸನ
ಶ್ರೀಮತಿ ಇಂದುಮತಿ ವಿಜೇಂದ್ರನ್ – ಚನ್ನೈ
ಶ್ರೀ ಈಶ್ವರಭಟ್ – ಜೈಪುರ
ಶ್ರೀ ಜಿ.ಎಸ್.ಜಯದೇವ್ – ಚಾಮರಾಜನಗರ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಜಿ.ರಾಜಗೋಪಾಲ್; ಶ್ರೀ ಪಾರ್ಥಸಾರಥಿ
ಶ್ರೀಮತಿ ಸೀತಾರಾಮಮೂರ್ತಿ; ಡಾ॥ ಜಿ.ಶೋಭಾ – ಬೆಂಗಳೂರು
ಶ್ರೀ ಕೆ.ಆರ್.ವೆಂಕಟಾಚಾರ್ – ಮಾಯಸಂದ್ರ
ಶ್ರೀ ಕೆ.ಟಿ.ವೆಂಕಟೇಶ್ – ಮಂಡ್ಯ
ಶ್ರೀ ಅಶ್ವಥನಾರಾಯಣ – ಪಾಂಡವಪುರ
ಶ್ರೀ ಎಲ್.ರಾಮಯ್ಯಶೆಟ್ಟಿ; ಗುಂಡಪ್ಪಗೌಡರು – ಮೈಸೂರು
ಶ್ರೀ ಎಸ್.ಆರ್.ರಾಮಚಂದ್ರರಾವ್ – ಶ್ರೀರಂಗಪಟ್ಟಣ
ಶ್ರೀ ನಾಮದೇವ ಶಣೈ – ಬದಿಯಡ್ಕ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ. ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

– ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA

Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.